# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಸೋಮವಾರ, ಫೆಬ್ರವರಿ 24, 2025

ಸಂಪುಟ : 51 ಸಂಚಿಕೆ : 283 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಐಎಸ್‌ಐ ಮಾರ್ಕ್ ಇದೆಯಾ?

ದಾವಣಗೆರೆ: ಐಎಸ್‌ಐ ಗುರುತಿನ ಹೆಲ್ಮೆಟ್ ಕಡ್ಡಾಯ ಗೊಳಿಸಿದ ಹಿನ್ನೆಲೆಯಲ್ಲಿ ನಗರದ ವಿವಿಧ ಅಂಗಡಿ ಹಾಗೂ ರಸ್ತೆಬದಿಗಳಲ್ಲಿ ಪೂರ್ಣ ಹೆಲ್ಮೆಟ್ ಖರೀದಿಗೆ ಜನ ಮುಂದಾಗಿದ್ದರು. ಭಾನುವಾರವಾಗಿದ್ದರಿಂದ ನಗರದಲ್ಲಿ ಶೋರೂಂಗಳು ಹಾಗೂ ಕೆಲವು ಅಂಗಡಿಗಳಲ್ಲಿ ಹೆಲ್ಮೆಟ್ ಲಭ್ಯವಿರಲಿಲ್ಲ. ಈ ಕಾರಣಕ್ಕಾಗಿ ಜನರಿಗೆ ಫುಟ್‌ಪಾತ್ ಅಂಗಡಿಗಳಲ್ಲಿ ಖರೀದಿ ಅನಿವಾರ್ಯವಾಗಿತ್ತು. ಪೊಲೀಸ್ ಇಲಾಖೆ ಬೇಸಿಗೆ ಆರಂಭದಲ್ಲಿಯೇ ಪೂರ್ಣ ಹೆಲ್ಮೆಟ್ ಕಡ್ಡಾಯವಾಗಿರುವುದಕ್ಕೆ ಹಾಗೂ ಸೋಮವಾರವೇ ಗಡುವು ನೀಡಿರುವುದಕ್ಕೆ ಸಾರ್ವಜನಿಕರಿಂದ ತೀವ್ರ ಆಕ್ಷೇಪವೂ ವ್ಯಕ್ತವಾಯಿತು.

# ಜಿಲ್ಲಾಸ್ಪತ್ರೆಗಳಲ್ಲಿ ಕ್ಯಾನ್ಸರ್ ಕಾಳಜಿ

## 6 ಬೆಡ್‌ಗಳ ಘಟಕ, ಕಿಮೋಥೆರಪಿಗೆ ಆದ್ಯತೆ, ಕೇಂದ್ರದಿಂದ ಸಮೀಕ್ಷೆ

ನವದೆಹಲಿ, ಫೆ. 23 - ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಕಾಳಜಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಕೇಂದ್ರ ಸರ್ಕಾರ ಸಮೀಕ್ಷೆ ಆರಂಭಿಸಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿನ ಮೂಲಭೂತ ಸೌಲಭ್ಯ ಹಾಗೂ ಕೊರತೆಗಳ ಪರಿಶೀಲನೆ ನಡೆಸಿ ಮೂರು ವರ್ಷಗಳಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ಜಿಲ್ಲಾ ಆಸ್ಪತ್ರೆಗಳಲ್ಲಿ ಹಗಲು ಕ್ಯಾನ್ಸರ್ ಕಾಳಜಿ ಕೇಂದ್ರಗಳನ್ನು ತೆರೆಯಲು 3,200 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

ಮುಂದಿನ ಮೂರು ವರ್ಷಗಳಲ್ಲಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಕಾಳಜಿ ಕೇಂದ್ರಗಳನ್ನು ತೆರೆಯಲಾಗುವುದು. 2025 - 26ನೇ ಸಾಲಿನಲ್ಲಿ 200 ಕೇಂದ್ರಗಳು ಆರಂಭವಾಗಲಿವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಬಜೆಟ್‌ನಲ್ಲಿ ತಿಳಿಸಿದ್ದರು.

ಸರ್ಕಾರದ ಈ ಕ್ರಮದಿಂದ ಹೆಚ್ಚು ಜನರಿಗೆ ಕ್ಯಾನ್ಸರ್ ಕಾಳಜಿ ದೊರೆಯಲಿದೆ. ವಿಶೇಷವಾಗಿ ಗ್ರಾಮೀಣ ಭಾಗದ ಜನರಿಗೆ ನೆರವಾಗಲಿದೆ ಎಂದು ಸೀತಾರಾಮನ್ ಹೇಳಿದ್ದರು.

ಜಿಲ್ಲಾ ಆಸ್ಪತ್ರೆಗಳಲ್ಲಿ ನಾಲ್ಕರಿಂದ ಆರು ಬೆಡ್‌ಗಳ ಘಟಕ ತೆರೆಯಲಾಗುವುದು. ಇಲ್ಲಿ ಕಿಮೋಥೆರಪಿ ಸೇವೆ



ಒದಗಿಸಲು ಆದ್ಯತೆ ನೀಡಲಾಗುವುದು. ಕ್ಯಾನ್ಸರ್ ತಡೆ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಿಲ್ಲಾ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಕೇಂದ್ರಗಳನ್ನು ತೆರೆಯಲು ಲಭ್ಯವಿರುವ ಸೌಲಭ್ಯಗಳು ಹಾಗೂ ಕೊರತೆಗಳ ಬಗ್ಗೆ ನಾವು ಪರಿಶೀಲನೆ ಆರಂಭಿಸಿದ್ದೇವೆ. ಈ ಆಸ್ಪತ್ರೆಗಳಲ್ಲಿ ಈಗ ಬರುತ್ತಿರುವ ಕ್ಯಾನ್ಸರ್ ರೋಗಿಗಳ ಪ್ರಮಾಣದ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

2014 - 15ರಿಂದ 2025 - 26ರ ವರೆಗೆ ಕ್ಯಾನ್ಸರ್ ಕಾಳಜಿಗಾಗಿ ಕೇಂದ್ರ ಸರ್ಕಾರ 3 ಸಾವಿರ ಕೋಟಿ ರೂ.ಗಳನ್ನು ಮಂಜೂರು ಮಾಡಿತ್ತು. ಈ ಯೋಜನೆಯ ಮೂಲಕ 19 ರಾಜ್ಯ ಕ್ಯಾನ್ಸರ್ ಸಂಸ್ಥೆಗಳು ಹಾಗೂ 20 ತೃತೀಯ ಹಂತದ ಕ್ಯಾನ್ಸರ್ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿತ್ತು. ಅಲ್ಲದೆ ಎಲ್ಲಾ ಹೊಸ 22 ಎಐಎಂಎಂಎಸ್‌ಗಳಲ್ಲಿ ಕ್ಯಾನ್ಸರ್ ಕೇಂದ್ರಗಳನ್ನು ತೆರೆಯಲಾಗುವುದು.

ಆಯುಷ್ಮಾನ್ ಭಾರತ್ ಯೋಜನೆ ಆರಂಭಿಸಿದ ನಂತರ ಕ್ಯಾನ್ಸರ್ ಸಂಬಂಧಿತ ಚಿಕಿತ್ಸೆಗಾಗಿ 68.43 ಲಕ್ಷ ರೋಗಿಗಳು ಆಸ್ಪತ್ರೆಗೆ ದಾಖಲಾಗಿದ್ದಾರೆ.

ಇವರಿಗೆ 13,260.75 ಕೋಟಿ ರೂ.ಗಳ ಬಿಡುಗಡೆ ಮಾಡಲಾಗಿದೆ.

217 ಅಮೃತ್ ಫಾರ್ಮಸಿ ಮೂಲಕ 289 ಕ್ಯಾನ್ಸರ್ ಔಷಧಿಗಳನ್ನು ಮಾರುಕಟ್ಟೆ ದರಕ್ಕಿಂತ ಶೇ. 50ರ ವಿನಾಯಿತಿ ದರದಲ್ಲಿ ನೀಡಲಾಗಿದೆ. ಜನೌಷಧಿ ಕೇಂದ್ರಗಳ ಮೂಲಕವೂ ಕ್ಯಾನ್ಸರ್ ಔಷಧಿಗಳನ್ನು ನೀಡಲಾಗುತ್ತಿದೆ.

ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ರಾಷ್ಟ್ರೀಯ ಆರೋಗ್ಯ ಯೋಜನೆಯ ಮೂಲಕ ಕ್ಯಾನ್ಸರ್ ತಪಾಸಣೆಗೆ ಸೌಲಭ್ಯ ಕಲ್ಪಿಸಲಾಗಿದೆ. ಸರ್ಕಾರ ಕ್ಯಾನ್ಸರ್ ಸಂಬಂಧಿತ 36 ಔಷಧಿಗಳಿಗೆ ಮೂಲ ಆಮದು ಸುಂಕದಿಂದ ವಿನಾಯಿತಿ ಸಹ ನೀಡಿದೆ.

# ಗುಲಾಮಗಿರಿ ಮನೋಭಾವದವರಿಂದ ಧಾರ್ಮಿಕ ನಂಬಿಕೆಗಳ ಮೇಲೆ ದಾಳಿ



ಛತ್ತರ್ಪುರ್ (ಮಧ್ಯಪ್ರದೇಶ), ಫೆ. 23 - ಗುಲಾಮಗಿರಿ ಮನೋಭಾವದವರು ವಿದೇಶಿ ಶಕ್ತಿಗಳ ಬೆಂಬಲದಿಂದ ದೇಶದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಪ್ರದಾಯಗಳ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಟೀಕಿಸಿದ್ದಾರೆ.

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭವು ಐಕ್ಯತೆಯ ಮಹಾ ಕುಂಭವಾಗಿದೆ ಎಂದು ಪ್ರಧಾನಿ ಹೇಳಿದ್ದಾರೆ. ಶ್ರೀ ಭಾಗೇಶ್ವರ ವೈದ್ಯಕೀಯ ವಿಜ್ಞಾನ ಹಾಗೂ ಸಂಶೋಧನಾ ಸಂಸ್ಥೆಗೆ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ಬಾಗೇಶ್ವರ ಧಾಮ್ ಹನುಮಂತ ದೇವರಿಗೆ ಸಂಬಂಧಿಸಿದ ಪ್ರಮುಖ ಧಾರ್ಮಿಕ ಸ್ಥಳವಾಗಿದೆ. ಇಲ್ಲಿ ಸಾವಿರಾರು ಜನರು ಭೇಟಿ ನೀಡುತ್ತಾರೆ.

ನಮ್ಮ ಧರ್ಮದ ಬಗ್ಗೆ ಅಣಕ ಹಾಗೂ ಲೇವಡಿ ಮಾಡುವ ನಾಯಕರ ಗುಂಪೊಂದನ್ನು ನಾವು ಇತ್ತೀಚಿನ ದಿನಗಳಲ್ಲಿ ನೋಡುತ್ತಿದ್ದೇವೆ. ಅವರು ನಮ್ಮ ಐಕ್ಯತೆ ಮುರಿಯಲು ಹಾಗೂ ಜನರನ್ನು ವಿಭಜಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಮೋದಿ ಹೇಳಿದ್ದಾರೆ.

ಹಲವಾರು ವಿದೇಶಿ ಶಕ್ತಿಗಳು ಈ ರೀತಿಯ ಜನರನ್ನು ಬೆಂಬಲಿಸುವ ಮೂಲಕ ದೇಶ ಹಾಗೂ ಧರ್ಮವನ್ನು ದುರ್ಬಲ ಗೊಳಿಸಲು ಪ್ರಯತ್ನಿಸುವುದನ್ನು ನೋಡುತ್ತಾ ಬಂದಿದ್ದೇವೆ ಎಂದು ಪ್ರಧಾನಿ ಹೇಳಿದ್ದಾರೆ.

ಹಿಂದೂ ಧರ್ಮ ದ್ವೇಷಿಸುವವರು ಶತಮಾನಗಳಿಂದ ಬೇರೆ ಬೇರೆ ಸೋಗಿನಲ್ಲಿ ಬದುಕುತ್ತಿರುವುದನ್ನು ನೋಡುತ್ತಾ ಬಂದಿದ್ದೇವೆ. ಗುಲಾಮಗಿರಿ ಮನೋಭಾವದ ಈ ಜನರು ನಮ್ಮ ನಂಬಿಕೆ, ದೇವಾಲಯ, ಸಂತರು, ಸಂಸ್ಕೃತಿ ಹಾಗೂ ಸಂಪ್ರದಾಯಗಳ ಮೇಲೆ ದಾಳಿ ನಡೆಸುತ್ತಿದ್ದಾರೆ. ಇವರು ನಮ್ಮ ಹಬ್ಬಗಳು, ಸಂಪ್ರದಾಯ ಹಾಗೂ ನಂಬಿಕೆಗಳನ್ನು ದೂಷಿಸುತ್ತಾರೆ ಎಂದು ಮೋದಿ ಹೇಳಿದ್ದಾರೆ.

ಸಮಾಜ ಹಾಗೂ ದೇಶದ ಒಗ್ಗಟ್ಟನ್ನು ಒಡೆಯುವುದು ಈ ವರ್ಗದ ಜನರ ಅಜೆಂಡಾ ಆಗಿದೆ. ಪ್ರಗತಿಪರವಾಗಿರುವ ನಮ್ಮ ಧರ್ಮ **(4ನೇ ಪುಟಕ್ಕೆ)**

# ಮುಂದುವರೆದ ಅರ್ಧ ಹೆಲ್ಮೆಟ್ ಕಾರ್ಯಾಚರಣೆ



ದಾವಣಗೆರೆ, ಫೆ. 23- ಪೊಲೀಸರು ಅರ್ಧ ಹೆಲ್ಮೆಟ್ ಕಾರ್ಯಾಚರಣೆಯನ್ನು ಭಾನುವಾರವೂ ಮುಂದುವರೆಸಿದ್ದಾರೆ. ನಗರ ಸಂಚಾರ ಪೊಲೀಸ್ ಸಿಪಿಐ ನಲವಾಗಲು ಮಂಜುನಾಥ್ ರವರ ನೇತೃತ್ವದಲ್ಲಿ ದಕ್ಷಿಣ ಹಾಗೂ ಉತ್ತರ ಸಂಚಾರ ಪಿಎಸ್‌ಐಗಳಾದ ಜಯಶೀಲ, ನಿರ್ಮಲ, ಶೈಲಜಾ ಹಾಗೂ ಮಂಜಪ್ಪ ಹಾಗೂ ಸಿಬ್ಬಂದಿಗಳ ತಂಡವು ಅರ್ಧ ಹೆಲ್ಮೆಟ್ ಹಾಕಿಕೊಂಡು ಸಂಚರಿಸುತ್ತಿದ್ದ ಸವಾರರಿಂದ ಅವುಗಳನ್ನು ವಶಪಡಿಸಿಕೊಂಡು ಗುಣಮಟ್ಟದ ಹೆಲ್ಮೆಟ್ ಬಳಸುವಂತೆ ಅರಿವು ಮೂಡಿಸಿದರು.

ನಗರದ ಬಾಡಾ ಕ್ರಾಸ್, ಡೆಂಟಲ್ ಕಾಲೇಜ್ ರೋಡ್, ಅಂಬೇಡ್ಕರ್ ಸರ್ಕಲ್ ಮತ್ತು ಐಟಿಐ ವೃತ್ತದ ಬಳಿ ಕಾರ್ಯಾಚರಣೆ ನಡೆಸಿ 1200 ಪ್ಲಾಸ್ಟಿಕ್ ಅಥವಾ ಅರ್ಧ ಹೆಲ್ಮೆಟ್ ಗಳನ್ನು ವಶಪಡಿಸಿಕೊಳ್ಳಲಾಗಿದೆ.



# ಮಲೇಕುಂಬಳೂರು ಆಂಜನೇಯ ಸ್ವಾಮಿ ಬ್ರಹ್ಮರಥೋತ್ಸವ

ಹೊನ್ನಾಳಿ, ಫೆ.23- ತಾಲ್ಲೂಕು ಮಲೇಕುಂಬಳೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಬ್ರಹ್ಮ ರಥೋತ್ಸವ ಭಾನುವಾರ ಸಂಭ್ರಮದಿಂದ ಜರುಗಿತು.

ಮುಂಜಾನೆ ಗಜೋತ್ಸವದ ನಂತರ ನಡೆದ ಬ್ರಹ್ಮ ರಥೋತ್ಸವ ಸಂದರ್ಭದಲ್ಲಿ ಶ್ರೀ ಆಂಜನೇಯ ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಗ್ರಾಮದ ರಾಜಬೀದಿಯಲ್ಲಿ ವಿವಿಧ ವಾದ್ಯ ಮೇಳಗಳೊಂದಿಗೆ ರಥದ ಮುಂದೆ ತರಲಾಯಿತು. ಭವ್ಯವಾಗಿ ಅಲಂಕಾರಗೊಂಡಿದ್ದ ರಥಕ್ಕೆ ಅರ್ಚಕರು ಪೂಜೆ ಸಲ್ಲಿಸಿದರು. ಗ್ರಾಮದ ಮಹಿಳೆಯರು ರಥಕ್ಕೆ ಮಂತ್ರಾಕ್ಷತೆ ಹಾಕಿದ ನಂತರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪನೆ ಮಾಡುತ್ತಿದ್ದಂತೆ, ನೂರಾರು ಭಕ್ತರು ರಥ ಎಳೆದು ಸಂಭ್ರಮಿಸಿದರು.

# ಟ್ರಂಪ್, ಮೊದಿ ಜೊತೆ ಮಾತನಾಡಿದರೆ ಪ್ರಜಾಪ್ರಭುತ್ವಕ್ಕೆ ಬೆದರಿಕೆಯೇ ?

ವಾಷಿಂಗ್ಟನ್, ಫೆ. 23 - ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ನನ್ನಂತಹ ನಾಯಕರು ಜೊತೆಯಾಗಿ ಚರ್ಚಿಸಿದರೆ ಅದನ್ನು ಪ್ರಜಾಪ್ರಭುತ್ವಕ್ಕೆ ಬೆದರಿಕೆ ಎನ್ನುವುದು ಎಡಪಂಥೀಯ ನಾಯಕರ ಮಿಥ್ಯಾಚಾರ ಎಂದು ಇಟಲಿ ಪ್ರಧಾನಮಂತ್ರಿ ಜಾರ್ಜಿಯ ಮೆಲೋನಿ ತರಾಟೆಗೆ ತೆಗೆದುಕೊಂಡಿದ್ದಾರೆ.

ವಾಷಿಂಗ್ಟನ್‌ನಲ್ಲಿ ಆಯೋಜಿಸಲಾಗಿದ್ದ ಕನ್ಸರ್ವೇಟಿವ್ ಪೊಲಿಟಿಕಲ್ ಆ್ಯಕ್ಷನ್ ಕಾನ್ಫರೆನ್ಸ್ (ಸಿಪಿಎಸಿ) ಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ

**ಎಡಪಂಥೀಯರ ಧೋರಣೆಗೆ ಇಟಲಿ ಪ್ರಧಾನ ಮಂತ್ರಿ ಜಾರ್ಜಿಯ ಮೆಲೋನಿ ತರಾಟೆ**

ಮಾತನಾಡುವಾಗ ಮೆಲೋನಿ ಈ ಹೇಳಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಟ್ರಂಪ್ ಪ್ರಶಂಸಿಸಿರುವ ಅವರು, ಟ್ರಂಪ್ ಗೆಲುವಿನಿಂದ ಎಡಪಂಥೀಯರು ವಿಚಲಿತರಾಗಿದ್ದಾರೆ ಎಂದಿದ್ದಾರೆ. ಸಂಪ್ರದಾಯವಾದಿ **(4ನೇ ಪುಟಕ್ಕೆ)**

# ಹೆಚ್ಚುತ್ತಿರುವ ಬಿಸಿಲು : ಹೆಲ್ಮೆಟ್‌ನಿಂದ ವಿನಾಯಿತಿಗೆ ದಿನೇಶ್ ಶೆಟ್ಟಿ ಆಗ್ರಹ



ದಾವಣಗೆರೆ, ಫೆ.23- ನಗರ ಮತ್ತು ಜಿಲ್ಲಾದ್ಯಂತ ಬೇಸಿಗೆ ಕಾಲಕ್ಕೂ ಮುನ್ನ ಬಿಸಿಲಿನ ತಾಪಮಾನ ಹೆಚ್ಚಿರುವ ಕಾರಣ ಹೆಲ್ಮೆಟ್‌ಗೆ ಧರಿಸುವಲ್ಲಿ ವಿನಾಯಿತಿ ನೀಡುವಂತೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಮತ್ತು ಕಾರ್ಯದರ್ಶಿ ಎ.ನಾಗರಾಜ್ ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ಬಿರು ಬಿಸಿಲಿನಲ್ಲಿ ಹೆಲ್ಮೆಟ್ ಧರಿಸಿದರೆ ಕೂದಲು ಉದುರುವಿಕೆ, ಕಿರಿಕಿರಿ, ಬೆವರು, ಬೈಕ್ ರೈಡಿಂಗ್ ವೇಳೆ ಸ್ವಚ್ಛಂದವಾಗಿ ತೆರಳಲು ಸೇರಿದಂತೆ ಹಲವು ಕಾರಣಗಳಿಂದ ಹೆಲ್ಮೆಟ್ ಧರಿಸಲು ಸಾಧ್ಯವಾಗದ ಕಾರಣ ವಿನಾಯಿತಿ ನೀಡುವ ಬಗ್ಗೆ ಜಿಲ್ಲಾ ಪೊಲೀಸ್ ಚಿಂತನೆ ನಡೆಸಬೇಕೆಂದು ಮನವಿ ಮಾಡಿದ್ದಾರೆ.

ಜಿಲ್ಲೆಯಲ್ಲಿ ಹಾಫ್ ಹೆಲ್ಮೆಟ್ಟನ್ನು ಹೆಚ್ಚಿನ ರೀತಿಯಲ್ಲಿ ಬಳಸುತ್ತಿದ್ದು, ಒಂದೇ ಬಾರಿಗೆ ಪೂರ್ಣ ಹೆಲ್ಮೆಟ್ ಧರಿಸುವಂತೆ ಒತ್ತಾಯಿಸುವುದು ಸರಿಯಲ್ಲ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೆಲ ಸಮಯ ನಿಗದಿಪಡಿಸಿ ಪೂರ್ಣ ಹೆಲ್ಮೆಟ್ ಧರಿಸಲು ಅನುಮತಿ ನೀಡಬೇಕೆಂದು ಆಗ್ರಹಿಸಿದ್ದಾರೆ.

# ಸಾಧಕ ಮಹಿಳೆಯರಿಂದ ಮೋದಿ ಸಾಮಾಜಿಕ ಮಾಧ್ಯಮ ಖಾತೆ ನಿರ್ವಹಣೆ

ನವದೆಹಲಿ, ಫೆ. 23 - ಮಾರ್ಚ್ 8ರ ಅಂತರ ರಾಷ್ಟ್ರೀಯ ಮಹಿಳಾ ದಿನದಂದು ವಿವಿಧ ವಲಯಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿವಿಧ ಸಾಮಾಜಿಕ ಮಾಧ್ಯಮ ಖಾತೆಗಳನ್ನು ನಿರ್ವಹಿಸಲಿದ್ದಾರೆ.

ಮಾಸಿಕ 'ಮನ್ ಕಿ ಬಾತ್' ರೇಡಿಯೋ ಕಾರ್ಯಕ್ರಮದ ವೇಳೆ ಈ ವಿಷಯ ತಿಳಿಸಿರುವ ಪ್ರಧಾನಿ ಮೋದಿ, ವಿವಿಧ ವಲಯಗಳಲ್ಲಿ ಸಾಧನೆ ಮಾಡಿರುವ ಮಹಿಳೆಯರು ತಮ್ಮ ಕೆಲಸ ಹಾಗೂ ಅನುಭವದ ಬಗ್ಗೆ ತಿಳಿಸಲಿದ್ದಾರೆ ಎಂದರು.

ಈ ಹಿಂದೆ 2020ರ ಮಾರ್ಚ್ 8ರಂದು ಪ್ರಧಾನಿ ಮೋದಿ ಅವರು ವಿವಿಧ ವಲಯಗಳಲ್ಲಿ ಸಾಧನೆ ಮಾಡಿದ ಏಳು ಮಹಿಳೆಯರಿಗೆ ತಮ್ಮ ಸಾಮಾಜಿಕ ಖಾತೆಗಳನ್ನು ವಹಿಸಿದ್ದರು.

ಟ್ವಿಟರ್, ಯೂಟ್ಯೂಬ್ ಹಾಗೂ ಇನ್‌ಸ್ಟಾಗ್ರಾಮ್ ಸೇರಿದಂತೆ ಹಲವಾರು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಧಾನಿ ಮೋದಿ ದೊಡ್ಡ ಮಟ್ಟದ ಅನುಯಾಯಿಗಳನ್ನು ಹೊಂದಿದ್ದಾರೆ. ಮನ್ ಕಿ ಬಾತ್ **(4ನೇ ಪುಟಕ್ಕೆ)**


|| ಶ್ರೀ ಕಲ್ಲೇಶ್ವರ ಪ್ರಸನ್ನ ||

**ಒಂಭತ್ತನೇ ವರ್ಷದ ಪುಣ್ಯಸ್ಮರಣೆ**



**ಶ್ರೀಮತಿ ಕೆ.ಎನ್. ಗುರುಶಾಂತಮ್ಮನವರು**

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ....

- ಸುಲ್ತಾನಿಪುರದ ಎಸ್.ಜಿ. ದೇವೇಂದ್ರಪ್ಪ ಮತ್ತು ಮಕ್ಕಳು ಸೊಸೆಯಂದಿರು ಹಾಗೂ ಮೊಮ್ಮಕ್ಕಳು
- ಸುಲ್ತಾನಿಪುರ ಶ್ರೀಮತಿ ರತ್ನಮ್ಮ, ಶ್ರೀ ಜಿ.ಎನ್. ಕುಬೇರಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
- ಶ್ರೀಮತಿ ವನಜಾಕ್ಷಮ್ಮ, ಶ್ರೀ ಆರ್. ಲೋಕೇಶ್ವರಪ್ಪ ಮತ್ತು ಮಕ್ಕಳು, ಚಿಕ್ಕವ್ವನಾಗ್ತಿಹಳ್ಳಿ.
- ಶ್ರೀಮತಿ ಮನೋಹರಿ, ಶ್ರೀ ಎಂ.ಎನ್. ಶಿವನಾಗಪ್ಪ ಮತ್ತು ಮಕ್ಕಳು, ಬೆಳವನೂರು.
- ಶ್ರೀಮತಿ ಲತಾ, ಶ್ರೀ ಆರ್. ಬಸವರಾಜಪ್ಪ, ಶಿಕ್ಷಕರು ಮತ್ತು ಮಕ್ಕಳು, ಈಚಘಟ್ಟ.
- ಶ್ರೀಮತಿ ಅಕ್ಕಮ್ಮ, ಶ್ರೀ ಕೆ.ಎನ್. ಶಿವಕುಮಾರ್ ಮತ್ತು ಮಕ್ಕಳು, ಗೋಪನಾಳು.
- ಮೆ|| ಜಿ.ಕೆ. ಎಂಟರ್‌ಪ್ರೈಸಸ್, ಎಪಿಎಂಸಿ ಯಾರ್ಡ್, ಎ ಬ್ಲಾಕ್, ದಾವಣಗೆರೆ.

ಮೊ. : 93410 04946, 70195 02899


# ಪ್ರಯಾಣಿಕರಿಲ್ಲ, ವಿಮಾನಗಳಿಲ್ಲ, ಲಾಭವೂ ಇಲ್ಲ

## ಪಾಕಿಸ್ತಾನದ ಗ್ವಾಡರ್‌ನಲ್ಲಿರುವ ತುಸು ನಿಗೂಢ ವಿಮಾನ ನಿಲ್ದಾಣ

ಗ್ವಾಡರ್ (ಪಾಕಿಸ್ತಾನ), ಫೆ. 23 - ಸಂಪೂರ್ಣ ಚೀನಾದ ಹೂಡಿಕೆಯೊಂದಿಗೆ ಪಾಕಿಸ್ತಾನದ ಗ್ವಾಡರ್‌ನಲ್ಲಿ 240 ದಶಲಕ್ಷ ಡಾಲರ್ ವೆಚ್ಚದಲ್ಲಿ ಹೊಸ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪಿಸಲಾಗಿದೆ. ಇಲ್ಲಿ ಪ್ರಯಾಣಿಕರಿಲ್ಲ ಹಾಗೂ ವಿಮಾನಗಳೂ ಇಲ್ಲ. ಪಾಕಿಸ್ತಾನದ ಅತ್ಯಂತ ಹೊಸದಾದ ಹಾಗೂ ಅತ್ಯಂತ ದುಬಾರಿಯಾದ ಈ ವಿಮಾನ ನಿಲ್ದಾಣ ಎಂದು ಉದ್ಯಮಕ್ಕೆ ತೆರೆದುಕೊಳ್ಳಲಿದೆ ಎಂಬುದು ಉತ್ತರವಿಲ್ಲದ ಪ್ರಶ್ನೆಯಾಗಿದೆ.

ಗ್ವಾಡರ್ ನಗರದ ಕರಾವಳಿಯಲ್ಲಿರುವ ಈ ವಿಮಾನ ನಿಲ್ದಾಣದ ಕಾಮಗಾರಿ ಅಕ್ಟೋಬರ್ 2024ರಲ್ಲಿ ಪೂರ್ಣಗೊಂಡಿತ್ತು. ದಶಕಗಳಿಂದ ಬಲೂಚಿಸ್ತಾನ್ ಹಾಗೂ ಗ್ವಾಡರ್‌ಗಳಲ್ಲಿ ಚೀನಾ ದೊಡ್ಡ ಮಟ್ಟದ ಹೂಡಿಕೆ ಮಾಡುತ್ತಿದೆ. ಚೀನಾ ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಯೋಜನೆಯಡಿ ಈ ಹೂಡಿಕೆ ಮಾಡಲಾಗುತ್ತಿದೆ.

ಈ ಯೋಜನೆ ಗ್ವಾಡರ್‌ನಲ್ಲಿ ಸಮಗ್ರ ಬದಲಾವಣೆ ತರಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ,



ವಾಸ್ತವಿಕವಾಗಿ ನಗರದಲ್ಲಿ ಇನ್ನೂ ಗಮನಾರ್ಹ ಬದಲಾವಣೆ ಕಂಡುಬಂದಿಲ್ಲ. ಈ ನಗರ ರಾಷ್ಟ್ರೀಯ ವಿದ್ಯುತ್ ಗ್ರಿಡ್ ಜೊತೆ ಸಂಪರ್ಕ ಹೊಂದಿಲ್ಲ. ಪಕ್ಕದ ಇರಾನ್ ಮೂಲಕ ಇಲ್ಲವೇ ಸೌರ ಫಲಕಗಳ ಮೂಲಕ ವಿದ್ಯುತ್ ಪಡೆಯಬೇಕಿದೆ. ನಗರದಲ್ಲಿ ಸಾಕಷ್ಟು ಶುದ್ಧ ನೀರೂ ಸಹ ಲಭ್ಯವಿಲ್ಲ.ಈ ಹಿನ್ನೆಲೆಯಲ್ಲಿ ಗ್ವಾಡರ್ ಜನರಿಗೆ ಈ ವಿಮಾನ ನಿಲ್ದಾಣ ಹೆಚ್ಚೇನೂ ಪ್ರಾಮುಖ್ಯತೆ ಪಡೆದುಕೊಂಡಿಲ್ಲ.

ಈ ವಿಮಾನ ನಿಲ್ದಾಣವನ್ನು ಪಾಕಿಸ್ತಾನಕ್ಕೆ ಇಲ್ಲವೇ ಗ್ವಾಡರ್‌ಗೆ ನಿರ್ಮಿಸಿಲ್ಲ. ಇದನ್ನು ಚೀನಾಗೋಸ್ಕರ ನಿರ್ಮಿಸಲಾಗಿದೆ. ಚೀನಾದ ನಾಗರಿಕರು ಗ್ವಾಡರ್ ಹಾಗೂ ಬಲೂಚಿಸ್ತಾನಕ್ಕೆ ಸುರಕ್ಷಿತವಾಗಿ ಬರಲು ಸಾಧ್ಯವಾಗಲಿ ಎಂದು ವಿಮಾನ ನಿಲ್ದಾಣ ನಿರ್ಮಿಸಲಾಗಿದೆ ಎಂದು ಪಾಕಿಸ್ತಾನ - ಚೀನಾ ಸಂಬಂಧಗಳ ಪರಿಣಿತರಾಗಿರುವ ಅಜೀಮ್ ಖಲೀದ್ ಹೇಳಿದ್ದಾರೆ.

ಬಲೂಚಿಸ್ತಾನ ಪ್ರಾಂತ್ಯವು ಸಾಕಷ್ಟು ದಿನಗಳಿಂದ ಸೈನ್ಯ ಹಾಗೂ ಉಗ್ರವಾದದ ನಡುವೆ ಸಮಸ್ಯೆಗೆ ಸಿಲುಕಿದೆ. ಸಂಪನ್ಮೂಲಗಳಿಂದ ಸಮೃದ್ಧವಾಗಿರುವ ಹಾಗೂ ವ್ಯೂಹಾತ್ಮಕವಾಗಿ ಪ್ರಾಮುಖ್ಯತೆ ಪಡೆದಿರುವ ಬಲೂಚಿಸ್ತಾನ ಪ್ರದೇಶವನ್ನು ಸಿಪಿಇಸಿ ಯೋಜನೆ ಮೂಲಕ ಅಭಿವೃದ್ಧಿಪಡಿಸಲಾಗುವುದು ಎನ್ನಲಾಗಿತ್ತು.

ಆದರೆ ಪಾಕಿಸ್ತಾನ ಸೈನ್ಯದ ದುರಾಡಳಿತ ಹಾಗೂ ಬಲೂಚಿಸ್ತಾನ ಉಗ್ರರ ಸಂಘರ್ಷದ ನಡುವೆ ಈ ಪ್ರದೇಶ ಅಭಿವೃದ್ಧಿ ಕಾಣಲು ಸಾಧ್ಯವಾಗಿಲ್ಲ. ಕೆಲ ವರ್ಷಗಳಿಂದ ತಣ್ಣಗಾಗಿದ್ದ ಉಗ್ರವಾದ 2021ರ ನಂತರ ಮತ್ತೆ ಭುಗಿಲೆದ್ದಿದೆ.

ಭದ್ರತಾ ಕಾರಣಗಳಿಂದಾಗಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಉದ್ಘಾಟನೆ **(2ನೇ ಪುಟಕ್ಕೆ)**

# ಏಪ್ರಿಲ್ 8 - 9ರಂದು ಎಐಸಿಸಿ ಅಧಿವೇಶನ

ನವದೆಹಲಿ, ಫೆ. 23 - ಗುಜರಾತ್‌ನ ಅಹಮದಾಬಾದ್‌ನಲ್ಲಿ ಏಪ್ರಿಲ್ 8 ಹಾಗೂ 9ರಂದು ಎಐಸಿಸಿ ಅಧಿವೇಶನ ನಡೆಸಲಾಗುವುದು ಎಂದು ಕಾಂಗ್ರೆಸ್ ತಿಳಿಸಿದೆ.

ಈ ಅಧಿವೇಶನದಲ್ಲಿ ಬಿಜೆಪಿಯ ಜನ ವಿರೋಧಿ ನೀತಿಗಳು ಹಾಗೂ ಸಂವಿಧಾನದ ಮೇಲೆ ದಾಳಿ ನಡೆಸುತ್ತಿರುವುದರಿಂದ ಉಂಟಾಗಿರುವ ಸವಾಲುಗಳ ಬಗ್ಗೆ ಚರ್ಚಿಸಲಾಗುವುದು ಹಾಗೂ ಕಾಂಗ್ರೆಸ್‌ನ ಮುಂದಿನ ಮಾರ್ಗದ ಬಗ್ಗೆ ಸಮಾಲೋಚನೆ ನಡೆಸಲಾಗುವುದು ಎಂದು ಪಕ್ಷ ಹೇಳಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕಾಂಗ್ರೆಸ್ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಈ ಅಧಿವೇಶನವು ಜನಸಾಮಾನ್ಯರ ಬಗ್ಗೆ ಕಾಂಗ್ರೆಸ್ ಹೊಂದಿರುವ ಬದ್ಧತೆಯನ್ನು ಮತ್ತೆ ದೃಢಗೊಳಿಸಲಿದೆ ಹಾಗೂ ದೇಶಕ್ಕೆ ಬಲಿಷ್ಠವಾದ ಪರ್ಯಾಯ ದೃಷ್ಟಿಕೋನವನ್ನು ಬಿಂಬಿಸಲಿದೆ ಎಂದಿದ್ದಾರೆ.

ಬಿಜೆಪಿಯ ಜನವಿರೋಧಿ ನೀತಿಗಳು ಹಾಗೂ ಸಂವಿಧಾನ ಮತ್ತು ಅದರ ಮೌಲ್ಯಗಳ ಮೇಲೆ ನಿರಂತರವಾಗಿ ನಡೆಸಲಾಗುತ್ತಿರುವ ದಾಳಿಯ ಬಗ್ಗೆ ದೇಶಾದ್ಯಂತದ ಎಐಸಿಸಿ ನಿಯೋಗಿಗಳು ಚರ್ಚಿಸಲಿದ್ದಾರೆ. ಪಕ್ಷದ ಮುಂದಿನ ಹೆಜ್ಜೆಗಳ ಕುರಿತು ಸಮಾಲೋಚನೆ ನಡೆಸಲಿದ್ದಾರೆ **(2ನೇ ಪುಟಕ್ಕೆ)**



## ಮಹಾತ್ಮ ಗಾಂಧಿಯವರ ಪುಣ್ಯ ದಿನದ ಅಂಗವಾಗಿ ಹುತಾತ್ಮರ ದಿನಾಚರಣೆ

ದಾವಣಗೆರೆ, ಫೆ. 23 - ಮಹಾತ್ಮ ಗಾಂಧಿಯವರ ಪುಣ್ಯ ದಿನದ ಅಂಗವಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ನಡೆದ ಹುತಾತ್ಮರ ದಿನಾಚರಣೆ ಸಮಾರಂಭದಲ್ಲಿ ಜೆ.ಹೆಚ್. ಪಟೇಲ್ ಬಡಾವಣೆಯ ಶಬರಿ ಸ್ತ್ರೀ ಸಂಘದ ಅಧ್ಯಕ್ಷರಾದ ಶ್ರೀಮತಿ ಪುಷ್ಪಾ ಅಜಯ್ ಮತ್ತು ವಸಂತಮ್ಮ ಚಂದ್ರಣ್ಣ ಅವರುಗಳನ್ನು ರೈತ ಸಂಘದ ವತಿಯಿಂದ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜೆ.ಎಚ್. ಪಟೇಲ್ ಬಡಾವಣೆಯ ಪ್ರೇಮಲತಾ ರವಿಕುಮಾರ್, ಪ್ರವೀಣ ಚಂದ್ರಶೇಖರ್, ವಿಜಯ, ಶಿವಗಂಗಾ ನಾಗರಾಜ್, ಕಲ್ಪನಾ ಹಿರೇಮಠ್, ಆನಂದ ಗೌಡ್ರು, ಕೇರಂ ಗಣೇಶ್, ಮಿಯ್ಯಾಪುರದ ತಿರುಮಲೇಶ್, ಹೆಬ್ಬಾಳು ರಾಜಯೋಗಿ, ಸಾಣಿ ಕೆರೆ ಗುರುಮೂರ್ತಿ ಭಾಗವಹಿಸಿದ್ದರು.

# ಮೌಢ್ಯಾಚರಣೆ ರಹಿತ ಊರಮ್ಮ ಉತ್ಸವ ನಡೆಸಲು ದಸಂಸ ಒತ್ತಾಯ

ಹರಿಹರ, ಫೆ. 23 - ಮಾ.18ರಿಂದ 22ರ ವರೆಗೆ ನಡೆಯುವ ನಗರ ದೇವತೆ ತಾಯಿ ಊರಮ್ಮನ ಉತ್ಸವವನ್ನು ಮೌಢ್ಯಾಚರಣೆ ರಹಿತ ಆಚರಿಸುವಂತೆ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ) ಗ್ರೇಡ್-2 ತಹಶೀಲ್ದಾರ್‌ಗೆ ನಿನ್ನೆ ಮನವಿ ಸಲ್ಲಿಸಿತು.




ಈ ವೇಳೆ ಮಾತನಾಡಿದ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಅವರು, ಐದು ದಿನಗಳ ಕಾಲ ನಡೆಯುವ ಉತ್ಸವದ ಹೆಸರಲ್ಲಿ ಅಮಾಯಕ ನಾಗರಿಕರು ಮೌಢ್ಯಾಚರಣೆಗಳನ್ನು ಆಚರಿಸುತ್ತಾರೆ, ಇನ್ನು ಕೆಲವರು ಮೌಢ್ಯಾಚರಣೆ ನಡೆಸಲು ಪ್ರೇರಣೆ ನೀಡುತ್ತಾರೆ ಎಂದು ತಿಳಿಸಿದರು.

**ಅರೆ ಬೆತ್ತಲೆ ಅಥವಾ ಬೇವಿನ ಉಡುಗೆ ಆಚರಣೆ :** ಉತ್ಸವದ ನಿಮಿತ್ತ ನಗರದ ದೇವಸ್ಥಾನ ರಸ್ತೆಯಲ್ಲಿ ರಚಿಸಲಾಗುವ ಚೌಕಿಮನೆ ಎದುರು ಹಾಗೂ ಇತರೆಡೆ ನೂರಾರು ಪುರುಷ, ಮಹಿಳೆಯರು ಭಕ್ತಿ, ಹರಕೆಯ ಹೆಸರಲ್ಲಿ ಅರೆಬೆತ್ತಲೆ, ಬೇವಿನ ಉಡುಗೆ ಸೇವೆಯೆಂಬ ಮೌಢ್ಯವನ್ನು ಆಚರಿಸುತ್ತಾರೆ ಎಂದರು.

ಬೇವಿನ ಸೇವೆ ಮಾಡುವುದು ಅನಿವಾರ್ಯವಾದರೆ ಪುರುಷರು, ಮಹಿಳೆಯರು ದೇಹದ ಮೇಲಿನ ಬಟ್ಟೆಯನ್ನು ತೆರವುಗೊಳಿಸದೆ ಬಟ್ಟೆಗಳ ಮೇಲೆಯೇ ಬೇವನ್ನು ಲಗತ್ತಿಸಿಕೊಂಡು ಹರಕೆಯ ಪ್ರಕ್ರಿಯೆಯನ್ನು ನೆರವೇರಿಸಬೇಕು. ಯಾವುದೇ ಕಾರಣಕ್ಕೂ ಮಹಿಳೆಯರು ವಿವಸ್ತ್ರರಾಗಿ ಬೇವಿನ ಉಡುಗೆ ಆಚರಿಸಬಾರದು ಎಂದು ಹೇಳಿದರು.

**ಕೋಣಗಳ ಬಲಿ ನಿಷೇಧ :** ಕಾನೂನು, ನಿಬಂಧನೆಗಳ ಅನ್ವಯ ದೇವ, ದೇವಿಯ ಹೆಸರಲ್ಲಿ ಕೋಣವನ್ನು ಬಲಿ ನೀಡುವಂತಿಲ್ಲ. ಹೀಗಾಗಿ ಈ ಉತ್ಸವದಲ್ಲಿ ಕೋಣಗಳ ಬಲಿ ನೀಡುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕು ಎಂದು ಒತ್ತಾಯಿಸಿದರು.

**ಆರ್ಥಿಕ ಹೊರೆ ತಗ್ಗಿಸುವುದು :** ಉತ್ಸವ, ಆಚರಣೆಯ ಹೆಸರಲ್ಲಿ ಶ್ರೀಮಂತರ ಅನುಕರಣೆ ಮಾಡುವ ಬಡವರು, ದಲಿತರು ಮತ್ತು ಹಿಂದುಳಿದ ವರ್ಗದವರು ಕುರಿಗಳ ಬಲಿ ನೀಡುತ್ತಾ, ಸಾಲದ ಸುಳಿಗೆ ಸಿಲುಕುತ್ತಾರೆ, ಆ ಸಾಲ ಮತ್ತು ಬಡ್ಡಿ ತೀರಿಸಲು ಕುಟುಂಬದ ಸದಸ್ಯರೆಲ್ಲರೂ ಹಲವು ವರ್ಷಗಳವರೆಗೆ ದುಡಿಯಬೇಕಾಗುತ್ತದೆ. ದೇವ, ದೇವತೆಗಳಿಗೆ ಮನುಷ್ಯನ ಭಕ್ತಿ, ಭಾವ ಮುಖ್ಯವೇ ಹೊರತು, ಪ್ರಾಣಿಗಳ ಬಲಿ ನೀಡುವುದಲ್ಲ ಎಂದರು.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರು ರಚಿಸಿದ ದೇಶದ ಸಂವಿಧಾನದಲ್ಲೂ ಕೂಡ ದೇಶದ ನಾಗರಿಕರಲ್ಲಿ ವೈಚಾರಿಕತೆ, ವೈಜ್ಞಾನಿಕ ಮನೋಭಾವ ಬೆಳೆಸಲು ಆದ್ಯತೆ ನೀಡುವ ಆಶಯ ವ್ಯಕ್ತಪಡಿಸಲಾಗಿದೆ.

ಈ ಕಾರಣದಿಂದಾಗಿ ಹರಿಹರದ ಗ್ರಾಮದೇವತೆ ಉತ್ಸವದಲ್ಲಿ ಭಕ್ತಿ, ಭಾವದ ಪರಾಕಾಷ್ಠೆ ಇರಲಿ, ಮೌಢ್ಯಾಚರಣೆಗಳು ತೊಲಗುವಂತೆ ತಾಲ್ಲೂಕು ಮತ್ತು ಜಿಲ್ಲಾಡಳಿತವು ಬೀದಿ ನಾಟಕ, ಕರಪತ್ರ ವಿತರಣೆ, ಧ್ವನಿವರ್ಧಕದ ಮೂಲಕ ವ್ಯಾಪಕ ಪ್ರಚಾರ ಕಾರ್ಯ ನಡೆಸುವ ಮೂಲಕ ಜನರಲ್ಲಿ ವೈಚಾರಿಕ ಪ್ರಜ್ಞೆ ಮೂಡಿಸಬೇಕಾಗಿ ನಮ್ಮ ಸಂಘಟನೆಯು ಆಗ್ರಹಿಸುತ್ತದೆ ಎಂದರು.

ಈ ವೇಳೆ ಕ.ದ.ಸಂ.ಸ ಮುಖಂಡರಾದ ಕಡ್ಲೆಗೊಂದಿ ತಿಮ್ಮಣ್ಣ, ಸಂಜೀವ್, ಅಂಜಿನಪ್ಪ, ಪರಶುರಾಮ್, ಧನುಕುಮಾರ್, ಬಸವರಾಜ್ ಇದ್ದರು.

# ಶಿಕ್ಷಣದಿಂದ ಬಂಜಾರ ಸಮುದಾಯ ಮುಂದೆ ಬರಲು ಸಾಧ್ಯ

## 286ನೇ ಸಂತ ಸೇವಾಲಾಲ್ ಜಯತ್ಯುತ್ಸವ ಕಾರ್ಯಕ್ರಮದಲ್ಲಿ ಸರ್ದಾರ್ ಸೇವಾಲಾಲ್ ಸ್ವಾಮೀಜಿ

ಚನ್ನಗಿರಿ, ಫೆ.23- ಸಂತ ಸೇವಾಲಾಲ್ ಅವರ ಆದರ್ಶದ ಬದುಕು ಎಲ್ಲರಿಗೂ ಮಾದರಿಯಾಗಿದ್ದು, ಶಿಕ್ಷಣದಿಂದ ಮಾತ್ರ ಈ ಸಮುದಾಯವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಬಹುದು ಎಂದು ಚಿತ್ರದುರ್ಗ ಬಂಜಾರ ಗುರು ಪೀಠದ ಪೀಠಾಧ್ಯಕ್ಷ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಅಭಿಪ್ರಾಯಪಟ್ಟರು.



ಚನ್ನಗಿರಿ ತಾಲ್ಲೂಕು ಕಬ್ಬಳ ಗ್ರಾಮದಲ್ಲಿ ಇತ್ತೀಚಿಗೆ ನಡೆದ ಶ್ರೀ ಸೇವಾಲಾಲ್ ಯುವಕರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಸಂತ ಸೇವಾಲಾಲ್ ಅವರ 286ನೇ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಗತ್ತು ಇಂದು ಬಂಜಾರ ಸಮಾಜವನ್ನು ಕಲೆ, ಸಂಸ್ಕೃತಿ, ಸಾಹಿತ್ಯದ ಹಿನ್ನೆಲೆಯಲ್ಲಿ ಗುರುತಿಸಲು ಸೇವಾಲಾಲ್ ಅವರು ಬದುಕಿದ ರೀತಿಯೇ ಕಾರಣ. ಶಾಂತಿ, ಅಂಹಿಸೆಯ ತತ್ವ ಸಾರಿದ ಸೇವಾಲಾಲ್ ಯಾರಿಗೂ ಕೇಡನ್ನು ಬಯಸಿಲ್ಲ. ಇವರ ತತ್ವವನ್ನು ನಾವು ಅನುಸರಿಸಬೇಕು ಎಂದರು.

ಸಮಾಜ ಸುಧಾರಣೆಯ ಬೋಧನೆ ಜತೆಗೆ ಸಮುದಾಯದ ಸಂಘಟನೆಗೂ ಆದ್ಯತೆ ನೀಡಿದ ಸೇವಾಲಾಲರು, ಶಿಕ್ಷಣದಿಂದ ಮಾತ್ರ ಸಮುದಾಯವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಬಹುದು ಎಂದು ಹಲವು ವರ್ಷಗಳ ಹಿಂದೆಯೇ ಹೇಳಿದ್ದರು. ಅವರ ದೂರದೃಷ್ಟಿ ಮೆಚ್ಚುವಂತದ್ದು ಎಂದು ಸ್ಮರಿಸಿದರು.

ಸರ್ಕಾರಿ ನೌಕರರ ಸಂಘದ ಸಹ ಕಾರ್ಯದರ್ಶಿ ಎ. ಸುಧೀರ್ ಮಾತನಾಡಿ, ಭರತ ಖಂಡದ ಧಾರ್ಮಿಕ ರಾಯಭಾರಿ ಎಂದೇ ಹೆಸರಾದ ಸೇವಾಲಾಲ್ ಮಹಾರಾಜರು ಅನೇಕ ಪವಾಡಗಳ ಮೂಲಕ ಜನಮನ ಗೆದ್ದವರು. ತಮ್ಮ ಲೀಲೆಗಳನ್ನು ಪ್ರದರ್ಶನ ಮಾಡುತ್ತಾ ಜೀವನದುದ್ದಕ್ಕೂ ಬ್ರಹ್ಮಚರ್ಯ ಪಾಲನೆ ಮಾಡಿದವರು ಎಂದು ಹೇಳಿದರು.

ಸೇವಾಲಾಲ್ ಸಂತರು ಇಂದಿಗೂ ಕೂಡ ಜನ ಮಾನಸದಲ್ಲಿ ಗುರುವಿನ ಸ್ಥಾನ ಪಡೆದಿದ್ದಾರೆ. 'ಸತ್ಯ, ಅಹಿಂಸೆ, ಕಳ್ಳತನ ಹಾಗೂ ವ್ಯಸನಕ್ಕೆ ದಾಸರಾಗಬೇಡಿ, ಕೆಟ್ಟದ್ದನ್ನು ಮಾಡಬೇಡಿ' ಎಂಬ ಐದು ಪ್ರಮುಖ ತತ್ವಗಳನ್ನು ಹೇಳಿದ್ದಾರೆ. ಅವುಗಳನ್ನು ಪಾಲನೆ ಮಾಡಬೇಕು ಎಂದರು.

ಗ್ರಾ.ಪಂ ಅಧ್ಯಕ್ಷೆ ವಿ. ಸುಷ್ಮಾ ಮಾತನಾಡಿ, ಯುವಕರು ಗ್ರಾಮದಲ್ಲಿ ಸೇವಾಲಾಲ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುತ್ತಿರುವುದು ಹೆಮ್ಮೆಯ ವಿಚಾರ, ನಮ್ಮ ಒಗ್ಗಟ್ಟು ಇನ್ನಷ್ಟು ಗಟ್ಟಿಯಾಗಬೇಕಿದೆ, ಜತೆಗೆ ನಮ್ಮ ಸಮಾಜಕ್ಕೆ ಸೇವಾಲಾಲ್ ಒಬ್ಬರೇ ಜಗದ್ಗುರು. ಅವರ ಆದರ್ಶಗಳನ್ನು ಯುವಕರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಈ ವೇಳೆ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಮುಖ್ಯ ವ್ಯವಸ್ಥಾಪಕ ಶ್ರೀಧರ್ ನಿಜಗುಳಿ, ರಮೇಶ್ ಹಳ್ಳಿ ಮಲ್ಲಾಪುರ, ಸಹಕಾರ ಸಂಘದ ಉಪಾಧ್ಯಕ್ಷ ರವಿಪ್ರಕಾಶ್, ಹಟ್ಟಿ ನಾಯಕ ಮಲ್ಲಿಕಾರ್ಜುನ್ ನಾಯ್ಡು ಕಾಮನಾಯ್ಕ (ಡಾವ್), ದಾಗಿಸ್ವಾಮಿನಾಯ್ಕ (ಕಾರ್ಬಾರಿ), ಗ್ರಾ.ಪಂ ಮಾಜಿ ಅಧ್ಯಕ್ಷ ಪಂಡರಿನಾಥ, ಕೆ.ಬಿ. ಹರೀಶ್, ಸಂತೋಷ್ ನಾಯ್ಕ, ಎಂ. ಅಭಿಲಾಷ್, ಲೋಹಿತ್ ಕುಮಾರ್, ರುದ್ರೇಶ್, ಸತೀಶ್, ತೇಜಸ್, ರಾಕೇಶ್, ಕಿರಣ್ ಹಾಗೂ ಸೇವಾಲಾಲ್ ಮಾಲಾಧಾರಿಗಳು ಇದ್ದರು.

# ಹೊನ್ನಾಳಿ : ಶಿಕ್ಷಣ ಸಂಸ್ಥೆಯ ಉನ್ನತಿಗೆ ಕೌಶಲ್ಯಯುತ ಬೋಧನೆ ಮುಖ್ಯ



ಹೊನ್ನಾಳಿ, ಫೆ.23- ಖಾಸಗಿ ಶಿಕ್ಷಣ ಸಂಸ್ಥೆಯ ಉನ್ನತಿಗೆ ಶಾಲಾ ಶಿಕ್ಷಕರ ಕೌಶಲ್ಯಯುತ ಬೋಧನೆ ಬಹಳ ಮುಖ್ಯ ಎಂದು ಒಕ್ಕೂಟದ ನೂತನ ರಾಜ್ಯಾಧ್ಯಕ್ಷ ಕೆ. ಪುಟ್ಟಪ್ಪ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಶನಿವಾರ ನಡೆದ ಖಾಸಗಿ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ ರಾಜ್ಯಾಧ್ಯಕ್ಷರ ಪದಗ್ರಹಣ ಸಮಾರಂಭದ ಸಭೆಯಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡಿದರು.

ಒಕ್ಕೂಟದ ವತಿಯಿಂದ ಶಿಕ್ಷಕ ಶಿಕ್ಷಕಿಯರ ಕುಂದು ಕೊರತೆಗೆ ನಮ್ಮ ಅವಧಿಯಲ್ಲಿ ಪ್ರಾಮಾಣಿಕವಾಗಿ ಸ್ಪಂದಿಸುತ್ತೇವೆ ಎಂದು ಭರವಸೆ ನೀಡಿದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಇಂದಿನ ಶಿಕ್ಷಣ ವ್ಯವಸ್ಥೆ ಸಾಕಷ್ಟು ಸುಧಾರಣೆ ಕಂಡಿದೆ. ಹಾಗಾಗಿ ಶಿಕ್ಷಕರು ಅದಕ್ಕೆ ಪೂರಕವಾಗಿ ಕೌಶಲ್ಯವನ್ನು ವೃದ್ಧಿಸಿಕೊಳ್ಳಬೇಕು ಎಂದು ಹೇಳಿದರು.

ಸಂಘದ ಗೌರವಾಧ್ಯಕ್ಷ ರಾಜು ಕಡಗಣ್ಣಾರ ಮಾತನಾಡಿ, ಖಾಸಗಿ ಶೈಕ್ಷಣಿಕ ಪ್ರಗತಿಗೆ ಸೇವೆ ಸಲ್ಲಿಸುವ ಶಿಕ್ಷಕರ ಕಾರ್ಯ ಅನನ್ಯವಾಗಿದೆ. ಉತ್ತಮವಾಗಿ ಸೇವೆ ಸಲ್ಲಿಸುವ ಪ್ರಬುದ್ಧ ಶಿಕ್ಷಕರನ್ನು ಗುರುತಿಸಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಉತ್ತಮ ಶಿಕ್ಷಕರೆಂದು ಗೌರವಿಸಬೇಕು ಎಂದರು.

ಈ ವೇಳೆ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷ ರೇವಣಸಿದ್ದಪ್ಪ, ಉಪಾಧ್ಯಕ್ಷ ಆಂಜನೇಯ, ಕಾರ್ಯದರ್ಶಿ ವರಣಾಚಾರಿ, ಖಜಾಂಚಿ ಯೋಗೇಶ, ನಿರ್ದೇಶಕರಾದ ಸುರೇಶ್, ಚಂದನ, ಕತ್ತಿಗೆ ಸುರೇಶ, ಬಾನುಪ್ರಕಾಶ, ಶಿಕ್ಷಕಿ ಆರತಿ, ಇನ್ನಿತರರಿದ್ದರು.

# ಮಕ್ಕಳ ಉಜ್ವಲ ಭವಿಷ್ಯಕ್ಕೆ ಮೌಲ್ಯಧಾರಿತ ಶಿಕ್ಷಣ ಅಗತ್ಯ

ಮಲೇಬೆನ್ನೂರು, ಫೆ. 23- ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಮೌಲ್ಯಾಧಾರಿತ ಶಿಕ್ಷಣ ಇಂದಿನ ಅಗತ್ಯವಾಗಿದೆ ಎಂದು ಕಾಗಿನೆಲೆ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.



**ಎಸ್ಸೆಸ್ಸೆಲ್ಸಿ ಫಲಿತಾಂಶ ಪುನಶ್ಚೇತನ ಕಾರ್ಯಾಗಾರದಲ್ಲಿ ಕಾಗಿನೆಲೆ ಶ್ರೀ ಅಭಿಮತ**

ಬೆಳ್ಳೂಡಿ ಶಾಖಾಮಠದ ಚಂದ್ರಗುಪ್ತ ಮೌರ್ಯ ಶಿಕ್ಷಣ ಸಂಸ್ಥೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಫಲಿತಾಂಶ ಪುನಶ್ಚೇತನ ಕಾರ್ಯಾಗಾರ'ವನ್ನು ಉದ್ಘಾಟಿಸಿ ಅವರು ಮಕ್ಕಳಿಗೆ ಆತ್ಮವಿಶ್ವಾಸದ ಪ್ರೇರಣಾ ಮಾತುಗಳನ್ನಾಡಿದರು.

ಗುಣಮಟ್ಟದ ಸಂಪನ್ಮೂಲ ವ್ಯಕ್ತಿಗಳಿಂದ ಮಕ್ಕಳಿಗೆ ಅಂಕ ಗಳಿಕೆಯ ಪುನಶ್ಚೇತನ ಶಿಬಿರವು ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಕಾರ್ಯಾಗಾರವಾಗಿದೆ. ಶ್ರೀಮಠದಿಂದ ಸುಮಾರು ಮೂರು ತಿಂಗಳಿನಿಂದ ಈ ಶಿಬಿರ ಮಾಡಲು ತಯಾರಿ ಮಾಡಲಾಗಿತ್ತು. ಆದರೆ, ಶ್ರೀಮಠದ ವಿದ್ಯಾರ್ಥಿಗಳ ಜೊತೆಯಲ್ಲಿ ಹರಿಹರ ತಾಲ್ಲೂಕಿನ ಗ್ರಾಮೀಣ ಭಾಗದ ಮಕ್ಕಳಿಗೂ ಈ ಕಾರ್ಯಾಗಾರದ ಉಪಯೋಗ ಸಿಗಬೇಕೆಂಬ ಉದ್ದೇಶದಿಂದ ಪ್ರಥಮ ಬಾರಿಗೆ ಈ ಕಾರ್ಯಕ್ರಮ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಪರೀಕ್ಷೆ ಎಂದರೆ ಭಯ, ಒತ್ತಡ ಇದ್ದೆ ಇರುತ್ತದೆ. ಅದನ್ನು ಹೋಗಲಾಡಿಸಲು ಮತ್ತು ಅಂಕ ಗಳಿಕೆಯಲ್ಲಿ ಉತ್ಸಾಹ ಬರುವ ನಿಟ್ಟಿನಲ್ಲಿ ರಾಜ್ಯದ ಪರೀಕ್ಷಾ ಬೋರ್ಡ್‌ನಲ್ಲಿ ಕಾರ್ಯ ನಿರ್ವಹಿಸಿದ ಗುಣಮಟ್ಟದ ಸಂಪನ್ಮೂಲ ಹಾಗೂ ನುರಿತ ಅನುಭವಿ ವ್ಯಕ್ತಿಗಳಿಂದ ಮಕ್ಕಳಿಗೆ ಇಂದು ಕಾರ್ಯಾಗಾರ ಮಾಡಲಾಗುತ್ತಿದೆ ಎಂದು ಶ್ರೀಗಳು ತಿಳಿಸಿದರು.

ಕನಕ ಗುರುಪೀಠದ ರಾಜ್ಯ ಕಾರ್ಯದರ್ಶಿ ಮಂಜುನಾಥ್ ಮೊಗಾದಿ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಶೈಕ್ಷಣಿಕ ಜೀವನದ ಹಂತದಲ್ಲಿ ಕಠಿಣ ಪ್ರಯತ್ನ ಮಾಡಿದಾಗ ಮಾತ್ರ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಶ್ರೀಮಠದಿಂದ ಮುಂದಿನ ಶೈಕ್ಷಣಿಕ ವರ್ಷದಿಂದ ಮೂರು ತಿಂಗಳಿಗೊಮ್ಮೆ ಇಂತಹ ಉಪಯುಕ್ತ ಕಾರ್ಯಾಗಾರಗಳನ್ನು ನಡೆಸಲಾಗುವುದು ಎಂದು ಅವರು ತಿಳಿಸಿದರು.

ಕಾರ್ಯಾಗಾರದ ಪ್ರಾಯೋಕತ್ವ ವಹಿಸಿಕೊಂಡಿದ್ದ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಜಿಲ್ಲೆಯಲ್ಲಿ ಇಂತಹ ಗುಣಮಟ್ಟದ ಪುನಶ್ಚೇತನ ಶಿಬಿರ ನಡೆಯುತ್ತಿರುವುದು ಪ್ರಥಮವಾಗಿದೆ. ಮಕ್ಕಳು ಇಂತಹ ಒಳ್ಳೆಯ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿದ್ದ ಬೆಂಗಳೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಎಸ್‌ಕೆಬಿ ಪ್ರಸಾದ್, ಸ್ಪರ್ಧಾತ್ಮಕ ಪರೀಕ್ಷೆಗಳ ತಜ್ಞ ಎಂ.ಶಿವಕುಮಾರ್, ಕೌಶಲ್ಯ ಅಭಿವೃದ್ಧಿ ತರಬೇತುದಾರರಾದ ಅಶೋಕ್, ಶಿಕ್ಷಣ ತಜ್ಞರಾದ ನಿಂಗಪ್ಪ ಉಪ್ಪಾಳ್, ರಾಯ್ ಎಲ್. ಅರಸಿದ್ಧಿ, ಬಿ.ಸಿ. ತುಂಬಗಿ, ಶಶಿಕುಮಾರ್, ಕೆ.ವಿ. ವೆಂಕಟೇಶ್ ಬಾಬು ಇವರುಗಳು ಪರೀಕ್ಷೆ - ಅಂತಿಮ ಹಂತದ ಸಿದ್ಧತೆಯ ಜತೆಗೆ ಹೆಚ್ಚು ಅಂಕ ಗಳಿಸುವುದು ಹೇಗೆ ? ಮತ್ತು ಎಸ್ಸೆಸ್ಸೆಲ್ಸಿ ನಂತರ ಶೈಕ್ಷಣಿಕ ಅವಕಾಶಗಳು ಹಾಗೂ ಕೆರಿಯರ್ ಗೈಡ್‌ಲೈನ್ಸ್ ವಿಷಯಗಳ ಕುರಿತು ನೀಡಿದ ವಿಶೇಷ ಉಪನ್ಯಾಸ ಸಭಾಂಗಣದಲ್ಲಿ ವಿದ್ಯಾರ್ಥಿಗಳ ಮುಖದಲ್ಲಿ ಆತ್ಮವಿಶ್ವಾಸದ ನಗೆ ಮೂಡಿಸಿತು.

ಸಂಸ್ಥೆಯ ಕಾರ್ಯದರ್ಶಿ ಎಸ್.ನಿಂಗಪ್ಪ, ಶೈಕ್ಷಣಿಕ ನಿರ್ದೇಶಕರಾದ ಶೃತಿ ಇನಾಮ್ದಾರ್ ಉಪಸ್ಥಿತರಿದ್ದರು.

# ಮಕ್ಕಳ ಪ್ರತಿಭೆಗೆ ಪೂರಕ ವಾತಾವರಣ ಸೃಷ್ಟಿಸಿ

ದಾವಣಗೆರೆ, ಫೆ. 23 - ಮಗುವಿನಲ್ಲಿ ಅಡಗಿರುವ ಕೌಶಲ ಹೊರತರಲು ಪೂರಕ ವಾತಾವರಣ ಸೃಷ್ಟಿಸಬೇಕಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಗುರುಪ್ರಸಾದ್ ತಿಳಿಸಿದರು.



**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಗುರುಪ್ರಸಾದ್**

ಜಿಲ್ಲಾ ಬಾಲ ಭವನ ಸಮಿತಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಆಶ್ರಯದಲ್ಲಿ ಆವರಗೆರೆಯ ಸಿದ್ಧಲಿಂಗೇಶ್ವರ ಪ್ರೌಢ ಶಾಲೆಯಲ್ಲಿ ಶನಿವಾರ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಶೈಕ್ಷಣಿಕ ಜವಾಬ್ದಾರಿ ಶಿಕ್ಷಕರದಷ್ಟೇ ಅಲ್ಲ, ಪೋಷಕರ ಮೇಲೂ ಇದೆ. ಹಾಗಾಗಿ ಮಕ್ಕಳ ಕನಸುಗಳಿಗೆ ಜೀವ ತುಂಬುವ ಕಾರ್ಯವನ್ನು ಇಬ್ಬರೂ ಮಾಡಬೇಕು ಎಂದರು.

ಮಕ್ಕಳಿಗೆ ಉತ್ತಮ ಮಾರ್ಗದರ್ಶನ ನೀಡುವ ಜತೆಗೆ ಸಮಾಜಕ್ಕೆ ಉತ್ತಮ ನಾಗರಿಕರನ್ನಾಗಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ತಿಳಿಸಿದರು.

ಜಿಲ್ಲಾ ಬಾಲಭವನದಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ವಾರಾಂತ್ಯದ ಚಟುವಟಿಕೆಗಳನ್ನು ಮಾಡುತ್ತಿದ್ದೇವೆ. ಜಿಲ್ಲೆಯಲ್ಲಿನ ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಹೇಳಿದರು.

ಜಿಲ್ಲಾ ಬಾಲ ಭವನ ಉದ್ಯಾನವನ ಮತ್ತು ಪುಟಾಣಿ ರೈಲಿನ ಕಾಮಗಾರಿ ಪೂರ್ಣಗೊಳಿಸಿದ್ದು ಶೀಘ್ರದಲ್ಲೇ ಲೋಕಾರ್ಪಣೆಗೊಳ್ಳಲಿದೆ ಎಂದು ಮಾಹಿತಿ ನೀಡಿದರು.

ರಾಜ್ಯ ವಿಜ್ಞಾನ ಪರಿಷತ್ತಿನ ಜಿಲ್ಲಾ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ, ಬಾಲ ಭವನದ ಸಂಯೋಜಕಿ ಎಸ್.ಬಿ.ಶಿಲ್ಪ, ಸಿದ್ಧಲಿಂಗೇಶ್ವರ ಪ್ರೌಢಶಾಲೆಯ ಎ. ಹೆಚ್. ಸಿದ್ಧಲಿಂಗಸ್ವಾಮಿ, ಮುಖ್ಯಶಿಕ್ಷಕಿ ಸಾವಿತ್ರಿ, ಉದಯ ರವಿ ಕಾನ್ವೆಂಟ್ ಶಾಲೆಯ ನಾಗರತ್ನ, ತೌಜು, ಕೆ. ಸರಸ್ವತಿ ಇದ್ದರು.

# ಭೋಳಚಟ್ಟಿ ಚೌಡೇಶ್ವರಿ ಜಾತ್ರೆ : ಹಂದರಗಂಬ ಪೂಜೆ



ದಾವಣಗೆರೆ, ಫೆ. 23- ನಗರದ ವೀರಶೈವ ರುದ್ರಭೂಮಿ ಎದುರಿನ ಭೋಳಚಟ್ಟಿ ಚೌಡೇಶ್ವರಿ ದೇವಿ ಹಾಗೂ ಕಾಲಭೈರವ ಸ್ವಾಮಿಯ ಜಾತ್ರಾ ಮಹೋತ್ಸವವು ಮಾ.9ರಿಂದ 14ರ ವರೆಗೆ ನಡೆಯಲಿದ್ದು, ಇದರ ಪ್ರಯುಕ್ತ ಶುಕ್ರವಾರ ಹಂದರಗಂಭ ಪೂಜೆ ನೆರವೇರಿತು.

## ವಿಮಾನಗಳಿಲ್ಲ, ಲಾಭವೂ ಇಲ್ಲ

**(1ನೇ ಪುಟದಿಂದ)** ವಿಳಂಬವಾಗಿತ್ತು. ವಿಮಾನ ನಿಲ್ದಾಣದ ಸುತ್ತ ಬೆಟ್ಟಗಳ ಪ್ರದೇಶವಿದೆ. ಇಲ್ಲಿಂದ ಉಗ್ರರು ದಾಳಿ ನಡೆಸಬಹುದು ಎಂಬ ಕಳವಳ ಇತ್ತು.

ಪಾಕಿಸ್ತಾನದ ಪ್ರಧಾನ ಮಂತ್ರಿ ಶೆಬಾಜ್ ಷರೀಫ್ ಹಾಗೂ ಚೀನಾದ ಪ್ರಧಾನಿ ಲಿ ಕಿಯಾಂಗ್ ಅವರು ವರ್ಚ್ಯುಯಲ್ ಸಮಾರಂಭದ ಮೂಲಕ ವಿಮಾನ ನಿಲ್ದಾಣ ಉದ್ಘಾಟಿಸಿದ್ದರು. ಈ ಸಮಾರಂಭದಿಂದ ಮಾಧ್ಯಮದವರು ಹಾಗೂ ಸಾರ್ವಜನಿಕರನ್ನು ದೂರವಿಡಲಾಗಿತ್ತು. ವಿಮಾನ ನಿಲ್ದಾಣದ ಕಾಮಗಾರಿಗೆ ಸ್ಥಳೀಯರನ್ನು ನೇಮಿಸಿಕೊಂಡಲಿಲ್ಲ. ಅಲ್ಲಿ ಸ್ಥಳೀಯರಿಗೆ ಕಾವಲಿನ ಕೆಲಸ ಸಹ ಸಿಕ್ಕಿರಲಿಲ್ಲ ಎಂದು ಬಲೂಚಿಸ್ತಾನ ಅವಾಮಿ ಪಾರ್ಟಿಯ ಜಿಲ್ಲಾಧ್ಯಕ್ಷ ಅಬ್ದುಲ್ ಗಫೂರ್ ಹೋತ್ ತಿಳಿಸಿದ್ದಾರೆ.

ಸ್ಥಳೀಯ ಕಾರ್ಮಿಕರು, ಸರಕು ಹಾಗೂ ಸೇವೆಗಳನ್ನು ಬಳಸಿಕೊಳ್ಳದೆ ಇದ್ದರೆ ಸಿಪಿಇಸಿ ಯೋಜನೆಯ ಲಾಭ ಇಲ್ಲಿನ ಜನರಿಗೆ ಲಭ್ಯವಾಗುವುದಿಲ್ಲ. ಪಾಕಿಸ್ತಾನ ಸರ್ಕಾರ ಬಲೂಚಿಸ್ತಾನದ ಜನರಿಗೆ ಏನನ್ನು ಕೊಡಲು ಸಿದ್ಧವಿಲ್ಲ. ಬಲೂಚಿಸ್ತಾನದ ಜನರು ಸರ್ಕಾರದಿಂದ ಏನನ್ನೂ ಪಡೆಯಲು ಬಯಸುತ್ತಿಲ್ಲ ಎಂದು ಗಫೂರ್ ಹೇಳಿದ್ದಾರೆ.

## ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಳೆ ಮಹಾಶಿವರಾತ್ರಿ

ದಾವಣಗೆರೆ, ಇಲ್ಲಿನ ಕೆ.ಟಿ.ಜೆ. ನಗರ 2ನೇ ಮುಖ್ಯ ರಸ್ತೆ 14ನೇ ತಿರುವಿನಲ್ಲಿರುವ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 26ರ ಬುಧವಾರ ಮಹಾಶಿವರಾತ್ರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ 6.30ಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ, ಪ್ರಸಾದ ವಿತರಣೆ ನಡೆಯಲಿದೆ. ದಿನಾಂಕ 27ರ ಗುರುವಾರ ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸಮಾಜ ಬಾಂಧವರು ಈ ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಶ್ರೀ ಕುರುಹಿನಶೆಟ್ಟಿ ನೇಕಾರ ಸಮಾಜದ ಸಂಘದ ಪದಾಧಿಕಾರಿಗಳಿ ಕೋರಿದ್ದಾರೆ.

# ಏಪ್ರಿಲ್ 8-9 ರಂದು ಎಐಸಿಸಿ ಅಧಿವೇಶನ : ಕಾಂಗ್ರೆಸ್

**(1ನೇ ಪುಟದಿಂದ)** ಎಂದು ವೇಣುಗೋಪಾಲ್ ತಿಳಿಸಿದ್ದಾರೆ.

ಏಪ್ರಿಲ್ 8ರಂದು ವಿಸ್ತೃತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ನಡೆಸಲಿದೆ. ಮರುದಿನ ಏಪ್ರಿಲ್ 9ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ನಿಯೋಗಿಗಳ ಸಭೆ ನಡೆಯಲಿದೆ ಎಂದವರು ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಉಭಯ ಸಭೆಗಳ ಅಧ್ಯಕ್ಷತೆ ವಹಿಸಲಿದ್ದಾರೆ. ಇದರಲ್ಲಿ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿ, ಕಾಂಗ್ರೆಸ್ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು, ರಾಷ್ಟ್ರೀಯ ಪದಾಧಿಕಾರಿಗಳು, ಪಕ್ಷದ ಹಿರಿಯ ನಾಯಕರು ಹಾಗೂ ಇತರೆ ಎಐಸಿಸಿ ನಿಯೋಗಿಗಳು ಪಾಲ್ಗೊಳ್ಳಲಿದ್ದಾರೆ ಎಂದು ವೇಣುಗೋಪಾಲ್ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ನಡೆದ ವಿಸ್ತೃತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳ ಮುಂದುವರಿದ ಭಾಗವಾಗಿ ಎಐಸಿಸಿ ಅಧಿವೇಶನ ಕರೆಯಲಾಗುತ್ತಿದೆ ಎಂದವರು ಹೇಳಿದ್ದಾರೆ. ಜನವರಿ 26, 2025 ರಿಂದ ಜನವರಿ 26, 2026ರ ನಡುವೆ ದೇಶಾದ್ಯಂತ 'ಸಂವಿಧಾನ್ ಬಚಾವೋ ರಾಷ್ಟ್ರೀಯ ಪಾದಯಾತ್ರೆ' ನಡೆಸಲು ಈ ಹಿಂದೆ ಪಕ್ಷ ನಿರ್ಧರಿಸಿತ್ತು.

# ಕೊಂಡಜ್ಜಿ ಬಸಪ್ಪನವರ ಆದರ್ಶ ಯುವಕರಿಗೆ ಮಾದರಿ

ದಾವಣಗೆರೆ, ಫೆ. 23 - ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ವತಿಯಿಂದ ಸಂಸ್ಥಾಪಕರ ದಿನಾಚರಣೆ ಹಾಗೂ ಚಿಂತನಾ ದಿನಾಚರಣೆ ಪ್ರಯುಕ್ತ ಶ್ರೀರಾಮ ಪಾರ್ಕ್ ಆವರಣದ ಸ್ವಚ್ಛತೆಯನ್ನು ಹಮ್ಮಿಕೊಳ್ಳಲಾಗಿತ್ತು.



ಸಂಸ್ಥೆಯ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಪಾರ್ಕ್‌ನಲ್ಲಿ ಸ್ವಚ್ಛತೆ ಮಾಡುವುದರ ಮುಖಾಂತರ ಕೊಂಡಜ್ಜಿ ಬಸಪ್ಪ ಅವರು ಕರ್ನಾಟಕದ ರಾಜಕಾರಣಿ ಮತ್ತು ಕರ್ನಾಟಕದ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ ನಾಯಕರಾಗಿದ್ದರು ಎಂದು ಹೇಳಿದರು.

ಕೊಂಡಜ್ಜಿ ಇದು ಹರಿಹರ-ದಾವಣಗೆರೆಗೆ ಸರಿಸಮಾನ ದೂರದ ಒಂದು ಸಾಧಾರಣ ಹಳ್ಳಿ. ಆದರೆ ಇದಕ್ಕೆ ಇಂದು ಅಂತರರಾಷ್ಟ್ರೀಯ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟನೆಯ ಮಟ್ಟದಲ್ಲಿ ಹೆಸರು ಪಡೆದಿದ್ದು 'ಅದರ ಕಾರಣ ಕರ್ತರು ಅದೇ ಗ್ರಾಮದವರಾದ ಕೊಂಡಜ್ಜಿ ಬಸಪ್ಪನವರು. ಅವರು ರಾಜಕಾರಣಿಯಾಗಿದ್ದರೂ ಅದನ್ನೂ ಮೀರಿ ಬೆಳೆದವರು. ಅವರು ಜನಿಸಿದ್ದು ಸಾಧಾರಣ ಕುಟುಂಬದಲ್ಲಿ. ಕಷ್ಟಪಟ್ಟು, ಅವರಿವರ ಸಹಾಯದಿಂದ ಓದಿ ಮುಂದೆ ಬಂದವರು. ರಾಜಕಾರಣಕ್ಕಿಂತಲೂ ಅವರಿಗೆ ಹೆಚ್ಚು ಪ್ರಿಯವಾಗಿದ್ದ ಕ್ಷೇತ್ರ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟನೆ. ಶಾಲಾ ಮಕ್ಕಳಲ್ಲಿ ಸ್ವಯಂ ಸೇವೆ, ಶಿಸ್ತು, ಸಜ್ಜನಿಕೆ, ಉತ್ತಮ ನಡೆ, ನುಡಿ, ಸೇವಾ ಮನೋಭಾವ, ಧೈರ್ಯ, ಸಾಹಸ ಪ್ರವೃತ್ತಿ ಮುಂತಾದ ಗುಣಗಳನ್ನು ಬೆಳೆಸಲು ವಿಶ್ವಮಟ್ಟದಲ್ಲಿ ಹುಟ್ಟಿಕೊಂಡ ಈ ಆಂದೋಲನದಲ್ಲಿ ಅವರು ತಮ್ಮನ್ನು ಪೂರ್ಣ ಮಟ್ಟದಲ್ಲಿ ತೊಡಗಿಸಿ ಕೊಂಡಿದ್ದರು. ಮಕ್ಕಳು, ಯುವಕರು, ದೈಹಿಕ, ಬೌದ್ಧಿಕ, ಸಾಮಾಜಿಕ, ದೈವಿಕವಾಗಿ ಪೂರ್ಣ ಪ್ರಮಾಣದ ಉನ್ನತಿಯನ್ನು ಸಾಧಿಸುವುದು ಅಲ್ಲದೆ, ಪ್ರಾದೇಶಿಕ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಹೊಣೆಗಾರಿಕೆಯುಳ್ಳ ವ್ಯಕ್ತಿಗಳಾಗಿ ರೂಪುಗೊಳ್ಳುವರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಪ್ರವೀಣ್, ಹರೀಶ್, ಪರಶುರಾಮ್, ಗೋಪಾಲ್, ಚೇತನ್ ಕುಮಾರ್, ರವೀಂದ್ರ ಸ್ವಾಮಿ, ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಮತ್ತು ಶ್ರೀಮತಿ ಅಶ್ವಿನಿ ಎಸ್‌ಜಿವಿ ರವರು ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳಿಂದ ಸ್ವಚ್ಛತಾ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಸಂಘಟಿಸಿದ್ದರು.

## ನ್ಯಾಷನಲ್ ಪಬ್ಲಿಕ್ ಶಾಲೆ ಪ್ರಥಮ



### ರಾಣೇಬೆನ್ನೂರಿನಲ್ಲಿ ಫುಟ್‌ಬಾಲ್ ಪಂದ್ಯಾವಳಿ

ರಾಣೇಬೆನ್ನೂರು, ಫೆ. 23 - ಭಾರತ ಸರ್ಕಾರದ ಯುವ ಜನ ಸೇವಾ ಕ್ರೀಡಾ ಇಲಾಖೆ ಇವರ ಸಹ ಭಾಗಿತ್ವದಲ್ಲಿ ಹಾವೇರಿ ಜಿಲ್ಲಾ ಫುಟ್ ಬಾಲ್ ಅಸೋಸಿಯೇಷನ್ ವತಿಯಿಂದ ರಾಣೇಬೆನ್ನೂರಿನಲ್ಲಿ ಈಚೆಗೆ 15 ವರ್ಷದೊಳಗಿನವರ ಖೇಲೋ ಇಂಡಿಯಾ ಫುಟ್‌ಬಾಲ್ ಪಂದ್ಯಾವಳಿಗಳು ಅದ್ಧೂರಿಯಾಗಿ ನಡೆದವು.

ಕ್ರೀಡಾ ಕೂಟದಲ್ಲಿ ನಗರದ ನ್ಯಾಷನಲ್ ಪಬ್ಲಿಕ್ ಶಾಲೆಯ ಮಕ್ಕಳು ಹಾವೇರಿ ಜಿಲ್ಲೆಯನ್ನು ಪ್ರತಿನಿಧಿಸಿ ಉತ್ತಮ ಪ್ರದರ್ಶನದೊಂದಿಗೆ ಅಂತಿಮ ಪಂದ್ಯಾವಳಿಯಲ್ಲಿ ಲಿಬರ್ಟಿ ಶಿವಮೊಗ್ಗ ತಂಡವನ್ನು 3-1 ಗೋಲುಗಳಿಂದ ಪರಾಭವಗೊಳಿಸಿ 50 ಸಾವಿರ ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದಾರೆ.

## ಆದರ್ಶ ವಿದ್ಯಾಲಯ ಪ್ರವೇಶಕ್ಕೆ ಅರ್ಜಿ

### ಹರಪನಹಳ್ಳಿ

ಹರಪನಹಳ್ಳಿ, ಫೆ. 23 - ತಾಲ್ಲೂಕಿನ ಅನಂತನಹಳ್ಳಿ ಸಮೀಪದ ಸರ್ಕಾರಿ ಆದರ್ಶ ವಿದ್ಯಾಲಯದ 2025-26ನೇ ಸಾಲಿನ 6ನೇ ತರಗತಿ ದಾಖಲಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ತಾಲ್ಲೂಕಿನ ನಿವಾಸಿಗಳು www.schooleducation.kar.nic.in ಅಥವಾ www.vidyavahini.karnataka.gov.in ಇಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಕೆ ಪ್ರಾರಂಭವಾಗಿದ್ದು, ಇದೇ ದಿನಾಂಕ 28 ಕೊನೆಯ ದಿನವಾಗಿದೆ. ಮಾರ್ಚ್ 23ರಂದು ಪರೀಕ್ಷೆ ನಡೆಯಲಿವೆ. ವಿವರಕ್ಕೆ ಸಂಪರ್ಕಿಸಿ : 9880955078, 7975534725, 9845977050.

# ಮೆದುಳಿನ ಒಳಗಿನ ನೋವಿನ ಸ್ವಿಚ್ ಆಫ್ ಮಾಡುವುದೆಂತು...?

ಎರಡನೇ ಮಹಾಸಮರದಲ್ಲಿ ವೈದ್ಯ ಹೆನ್ರಿ ಬ್ರೀಚರ್ ಅವರು ತಮ್ಮ ಸೈನಿಕ ರೋಗಿಗಳಲ್ಲಿ ವಿಚಿತ್ರ ಸಂಗತಿ ಒಂದನ್ನು ಕಂಡಿದ್ದರು. ಅಂಗಹಾನಿಯಂತಹ ಗಂಭೀರ ಸಮಸ್ಯೆಗೆ ಗುರಿಯಾದ ಸೈನಿಕರೂ ಸಹ ತೀವ್ರ ನೋವು ನಿವಾರಕ ಇಲ್ಲದೆ ಚಿಕಿತ್ಸೆ ಪಡೆಯುತ್ತಿದ್ದರು.

ಭಯ, ಒತ್ತಡ ಹಾಗೂ ಭಾವುಕರಾದ ಸಂದರ್ಭದಲ್ಲಿ ಮೆದುಳು ತನ್ನ ನೋವಿನ ಸ್ವಿಚ್ ಆಫ್ ಮಾಡುತ್ತದೆ ಎಂಬ ಗಮನಾರ್ಹ ಸಂಗತಿಯನ್ನು ಬ್ರೀಚರ್ ಕೊಂಡುಕೊಂಡಿದ್ದರು. ಆದರೆ, ಈ ವಿಷಯವನ್ನು ನಮ್ಮ ಅನುಕೂಲಕ್ಕೆ ಬಳಸಬಹುದೇ? ಕೆಲವೊಮ್ಮೆ ನಾವು ಹೊಟ್ಟೆ ನೋವಿನಿಂದ ಹಿಡಿದು ಬಿಸಿ ಪಾತ್ರೆ ಮುಟ್ಟುವವರೆಗೆ ಹಲವಾರು ರೀತಿಯ ನೋವುಗಳನ್ನು ಎದುರಿಸುತ್ತೇವೆ. ಇದೆಲ್ಲದಕ್ಕೂ ನಮ್ಮ ಮೆದುಳಿನಲ್ಲಿ ಉತ್ತರ ಇದೆಯೇ?

ನೋವು ಯಾರಿಗೂ ಹಿತಕರವಲ್ಲ. ಆದರೆ ನೋವು ನಮ್ಮ ಆರೋಗ್ಯದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ನೋವು ನಮ್ಮ ದೇಹಕ್ಕೆ ಆಗುವ ಹಲವಾರು ಅನುಭವಗಳಲ್ಲಿ ಒಂದಾಗಿದೆ. ದೇಹದ ಅಸಂಖ್ಯ ನ್ಯೂರಾನ್‌ಗಳು (ನರಕಣಗಳು) ಸೇರಿಕೊಂಡು ಮೆದುಳಿಗೆ ದೈಹಿಕ ಅನುಭವದ ಮಾಹಿತಿ ರವಾನಿಸುತ್ತವೆ. ಇದರಲ್ಲಿ ನೋವೂ ಸೇರಿದೆ.

ಈ ವಿಶೇಷವಾದ ನ್ಯೂರಾನ್‌ಗಳಿಗೆ ನಾಸಿಸೆಪ್ಟರ್ ಎಂದು ಕರೆಯಲಾಗುತ್ತದೆ. ದೇಹಕ್ಕೆ ಹಾನಿ ತರುವ ಪ್ರಕರಣಗಳನ್ನು ನಾಸಿಸೆಪ್ಟರ್ ಗುರುತಿಸುತ್ತವೆ. ಇದರಲ್ಲಿ ಸಣ್ಣ ಗಾಯದಿಂದ ಹಿಡಿದು ಗಂಭೀರ ಗಾಯದವರೆಗೆ ಎಲ್ಲವೂ ಸೇರಿವೆ.

ಬಿಸಿ ಕಡಾಯಿಯನ್ನು ಮುಟ್ಟಿದಂತಹ ಪ್ರಕರಣಗಳಲ್ಲಿ ತಕ್ಷಣವೇ ಕೈಯನ್ನು ಹಿಂದಕ್ಕೆ ಸರಿಸುತ್ತೇವೆ. ಇದರಿಂದಾಗಿ ಕೈಗೆ ಇನ್ನಷ್ಟು ಹಾನಿಯಾಗುವುದು ತಪ್ಪುತ್ತದೆ.

ಈ ರೀತಿಯ ಸಂಕೇತಗಳನ್ನು ರವಾನಿಸುವ ವ್ಯವಸ್ಥೆ ನಮ್ಮ ಚರ್ಮದಿಂದ ಆರಂಭವಾಗಿ ನರಗಳ ಮೂಲಕ



ಬೆನ್ನುಹುರಿಯ ಮಾರ್ಗವಾಗಿ ಮೆದುಳಿಗೆ ತಲುಪುತ್ತದೆ. ಅಲ್ಲಿ ಸೆರಬ್ರಲ್ ಕಾರ್ಟೆಕ್ಸ್ ಎಂಬ ಭಾಗ ನೋವಿನ ಅನುಭವ ಸೃಷ್ಟಿಸುತ್ತದೆ.

ಈ ಭಾಗಕ್ಕೆ ನೋವಿನ ಸಂಕೇತ ತಲುಪುವುದನ್ನು ತಡೆದಾಗ ನಮಗೆ ಯಾವುದೇ ನೋವಿನ ಅನುಭವ ಆಗುವುದಿಲ್ಲ. ಅನಸ್ತೇಶಿಯ ಸಂದರ್ಭದಲ್ಲಿ ಇದೇ ಪ್ರಕ್ರಿಯೆ ನಡೆಯುತ್ತದೆ. ನೋವಿನ ಅನುಭವ ಎಲ್ಲರಿಗೂ ಒಂದೇ ರೀತಿ ಇರುವುದಿಲ್ಲ. ಹಲವರು ಹೆಚ್ಚು ನೋವನ್ನು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ. ಇನ್ನು ಕೆಲವರು ಕಡಿಮೆ ನೋವಿಗೆ ಹೆಚ್ಚು ಪರಿತಪಿಸುತ್ತಾರೆ.

ಕೆಲ ರೋಗಿಗಳು ಹುಟ್ಟಿನಿಂದಲೇ ನೋವನ್ನು ಗ್ರಹಿಸುವ ಸಾಮರ್ಥ್ಯ ಹೊಂದಿರುವುದಿಲ್ಲ. ಇಂತಹ ಸಮಸ್ಯೆಯನ್ನು ಕಾಗ್ನಿಷಿಯಲ್ ಅನಲ್ಜೆಷಿಯ ಎಂದು ಕರೆಯಲಾಗುತ್ತದೆ. ಇವರು ನೋವಿಲ್ಲದೆ ಬದುಕುತ್ತಾರೆ. ಇದು ಒಳ್ಳೆಯ ಜೀವನ ಎಂದು ನೀವು ಯೋಚಿಸಬಹುದು. ಆದರೆ ಈ ವ್ಯಕ್ತಿಗಳ ದೇಹಕ್ಕೆ ಏನೇ ಹಾನಿಯಾದರೂ ಅವರಿಗೆ ತಿಳಿಯುವುದಿಲ್ಲ. ಇದರಿಂದಾಗಿ ಅವರು ಗಂಭೀರ ಗಾಯಗಳಿಗೆ ಸಿಲುಕುತ್ತಾರೆ ಹಾಗೂ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಾರೆ.

ಆಸಕ್ತಿಕರ ಅಂಶ ಎಂದರೆ ನಮ್ಮೆಲ್ಲರ ಮೆದುಳಿನಲ್ಲಿ ನೈಸರ್ಗಿಕವಾದ ನೋವು ನಿವಾರಕ ವ್ಯವಸ್ಥೆ ಇದೆ. ಮೆದುಳಿನ ಮಧ್ಯಭಾಗದಲ್ಲಿರುವ ಪಿರಿಯಾ ಕ್ಯೂಡೆಕ್ಟಲ್ (ಪಿಎಜಿ) ಎಂಬ ಹೃದಯಾಕಾರದ ಭಾಗ ನೈಸರ್ಗಿಕ ನೋವು ನಿವಾರಕವಾಗಿ ಕಾರ್ಯನಿರ್ವಹಿಸುತ್ತದೆ. ಈ ಭಾಗವು ಸೆರೆಬ್ರಲ್ ಕಾರ್ಟೆಕ್ಸ್‌ಗೆ ಬರುವ ನೋವಿನ ಸಂಕೇತಗಳ ತೀವ್ರತೆ ತಗ್ಗಿಸುವ ಸಾಮರ್ಥ್ಯ ಹೊಂದಿದೆ.

ಯುದ್ಧದ ಸಂದರ್ಭದಲ್ಲಿ ಸೈನಿಕರಿಗೆ ಗಾಯ ಆದಾಗ ನೋವು ಕಾಣಿಸಿಕೊಳ್ಳುವುದು ಒಳಿತಿಗಿಂತ ಕೆಡುಕನ್ನೇ ತರುತ್ತದೆ. ಅದೆಷ್ಟೇ ನೋವಿದ್ದರೂ ಸೈನಿಕರು ಕಾರ್ಯನಿರ್ವಹಿಸ ಬೇಕಾಗುತ್ತದೆ, ಅಪಾಯದಿಂದ ತಪ್ಪಿಸಿಕೊಳ್ಳಬೇಕಾಗುತ್ತದೆ ಹಾಗೂ ಇತರೆ ಸೈನಿಕರಿಗೆ ನೆರವು ನೀಡಬೇಕಾಗುತ್ತದೆ.

ನಮ್ಮ ದೈನಂದಿನ ಅನುಭವವನ್ನೇ ನೋಡುವುದಾದರೆ, ಒಲೆಯ ಮೇಲೆ ಬಿಸಿ ಪಾತ್ರೆಯನ್ನು ಎತ್ತಿರುತ್ತೇವೆ, ಆಗ ನೋವು ಕಾಣಿಸಿಕೊಂಡ ತಕ್ಷಣವೇ ಕೈಬಿಟ್ಟರೆ ಪಾತ್ರೆಗೆ ಹಾನಿಯಾಗುತ್ತದೆ. ಅಂತಹ ಸಂದರ್ಭದಲ್ಲಿ ಒಂದೆರಡು ಕ್ಷಣ ನೋವು ಸಹಿಸಿ ಪಾತ್ರೆಯನ್ನು ಸುರಕ್ಷಿತ ಜಾಗದಲ್ಲಿ ಇಡುತ್ತೇವೆ. ಇಂತಹ ಸಂದರ್ಭದಲ್ಲಿ ಪಿಎಜಿ ನೋವು ತಗ್ಗಿಸಲು ಸಕ್ರಿಯವಾಗಿರುತ್ತದೆ.

ಈ ರೀತಿಯ ಪರಿಣಾಮವನ್ನು ಸೃಷ್ಟಿಸುವ ಎನ್ಕಿಫಲಿನ್ಸ್ ಎಂಬ ಕಣಗಳು ಕೇವಲ ಪಿಎಜಿ ಅಷ್ಟೇ ಅಲ್ಲದೆ ಮೆದುಳಿನ ಇತರ ಹಲವು ಭಾಗಗಳು ಹಾಗೂ ಬೆನ್ನುಹುರಿಯಲ್ಲಿ ಉತ್ಪಾದನೆಯಾಗುತ್ತವೆ. ಇವುಗಳು ಬಲಿಷ್ಠ ನೋವು ನಿವಾರಕದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತವೆ.

ಕೆಲವೊಮ್ಮೆ ದೀರ್ಘಕಾಲದ ಅನಾರೋಗ್ಯದ ಸಂದರ್ಭ ದಲ್ಲಿ ನೋವಿನ ಅನುಭವದಿಂದ ದೇಹಕ್ಕೆ ಹೆಚ್ಚಿನ ಪ್ರಯೋಜನ ಆಗುವುದಿಲ್ಲ. ಇಂತಹ ಸಂದರ್ಭದಲ್ಲಿ ನೈಸರ್ಗಿಕ ನೋವು ನಿವಾರಕ ವ್ಯವಸ್ಥೆ ಸಕ್ರಿಯವಾಗುತ್ತದೆ ಎಂದು ಹೇಳಲಾಗುತ್ತಿದೆ.

ಇದೆಲ್ಲವನ್ನು ಪರಿಗಣಿಸಿದಾಗ, ನಮ್ಮ ನರಮಂಡಲ ವ್ಯವಸ್ಥೆಯ ಬಳಸಿಕೊಂಡು ನೋವು ಕಡಿಮೆ ಮಾಡಿಕೊಳ್ಳಲು ಏನಾದರೂ ಮಾರ್ಗವಿದೆಯೇ ಎಂಬ ಪ್ರಶ್ನೆ ಹುಟ್ಟುತ್ತದೆ. ಹಲವಾರು ಮಾರ್ಗಗಳ ಮೂಲಕ ನೋವು ಕಡಿಮೆ ಮಾಡುವ ಎನ್ಕಿಫಾಲಿನ್ಸ್ ಅಂಶಗಳು ಉತ್ಪಾದನೆಯಾಗುವಂತೆ ಮಾಡಬಹುದು. ಕಸರತ್ತು ಇದಕ್ಕೆ ಉತ್ತಮ ಮಾರ್ಗವಾಗಿದೆ.

ಕೇವಲ ಕಸರತ್ತು ಅಷ್ಟೇ ಅಲ್ಲದೆ ಒತ್ತಡದ ಪರಿಸ್ಥಿತಿಗಳು, ಸ್ತನ್ಯಪಾನ ಹಾಗೂ ಸಂಭೋಗದಂತಹ ಚಟುವಟಿಕೆಗಳು ಎನ್ಕಿಫಾಲಿನ್ಸ್ ಉತ್ಪಾದಿಸುತ್ತವೆ.

ನೋವು ಅತ್ಯಂತ ಸಂಕೀರ್ಣ ವ್ಯವಸ್ಥೆಯಾಗಿದೆ. ಈ ಬಗ್ಗೆ ನಾವು ತಿಳಿದುಕೊಳ್ಳುವುದು ಇನ್ನೂ ಸಾಕಷ್ಟಿದೆ. ಆದರೆ ನರಮಂಡಲ ವಿಜ್ಞಾನ ಮುಂದುವರಿದಂತೆ ಈ ದಿಸೆಯಲ್ಲಿ ಹೆಚ್ಚು ಮಾಹಿತಿ ದೊರೆಯುತ್ತಿದೆ. ಕಳೆದ ತಿಂಗಳಷ್ಟೇ ಅಮೆರಿಕದ ಔಷಧ ನಿಯಂತ್ರಕ ಎಫ್‌ಡಿಎ ಜೋರ್ನವಕ್ಸ್ ಎಂಬ ನೋವು ನಿರ್ವಹಣೆಯ ಹೊಸ ಔಷಧಿಗೆ ಅನುಮತಿ ನೀಡಿದೆ.

ಇದು ನೋವಿನ ಅನುಭವ ತರುವ ನಾಸಿಸೆಪ್ಟರ್‌ಗಳ ತಡೆಯುತ್ತದೆ. ಆ ಮೂಲಕ ನೋವಿನ ಸಂಕೇತಗಳು ಮೆದುಳಿಗೆ ತಲುಪದಂತೆ ಮಾಡುತ್ತದೆ. ವ್ಯಸನಕಾರಿಯಾದ ಮಾರ್ಫೈನ್ ಹಾಗೂ ಫೆಂಟಾನೈಲ್ ರೀತಿಯ ಔಷಧಿಗಳ ಬದಲು ಜೋರ್ನಾವಕ್ಸ್ ಬಳಕೆ ಉತ್ತಮ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ನರಮಂಡಲ ವ್ಯವಸ್ಥೆಯಲ್ಲಿ ನೋವಿನ ಕಾರ್ಯನಿರ್ವಹಣೆ ಕುರಿತು ಹೆಚ್ಚಿನ ಮಾಹಿತಿಗಳು ಲಭ್ಯವಾದಷ್ಟು ಹೊಸ ರೀತಿಯ ನೋವು ನಿವಾರಕ ಚಿಕಿತ್ಸೆ ಸುಲಭವಾಗುತ್ತದೆ. ಈ ಕಾರ್ಯ ಕಠಿಣವಾಗಿದೆ ಆದರೆ ನೋವನ್ನು ನಮ್ಮ ನರಮಂಡಲವು ಯಾವ ರೀತಿ ನಿರ್ವಹಿಸುತ್ತದೆ ಎಂಬುದನ್ನು ಹೆಚ್ಚು ಅರ್ಥ ಮಾಡಿಕೊಂಡಲ್ಲಿ ನೋವಿನಿಂದ ಮುಕ್ತಿ ಪಡೆಯುವುದು ಸುಲಭವಾಗಲಿದೆ. ■

# ನವಜ್ಯೋತಿ ಸಾಂಸ್ಕೃತಿಕ ಸಂಸ್ಥೆಯಿಂದ ಸಾಧಕರಿಗೆ ಗೌರವ





### ಹರಪನಹಳ್ಳಿ

ಹರಪನಹಳ್ಳಿ, ಫೆ. 23 - ಯಾವುದೇ ಪ್ರತಿಫಲ ಇಲ್ಲದೆ ನಿಸ್ವಾರ್ಥವಾಗಿ ಸಮಾಜ ಮುಖಿ ಕಾರ್ಯಗಳನ್ನು ಮಾಡುವವರು ವಿರಳ. ಲಾಭ- ನಷ್ಟದ ವಿಚಾರ ಮಾಡುವವರೇ ಹೆಚ್ಚು. ಆದರೆ, ಉಪನ್ಯಾಸಕ ಮಲ್ಲಿಕಾರ್ಜುನ ದಂಪತಿ ಮೌಲ್ಯಯುತವಾದ ಚಟುವಟಿಕೆಗಳ ಮೂಲಕ ಸಮಾಜ ಮುಖಿಯಾಗಿದ್ದಾರೆ ಎಂದು ಸಬ್ ಇನ್‌ಸ್ಪೆಕ್ಟರ್ ಶಂಭುಲಿಂಗ ಹಿರೇಮಠ್ ಶ್ಲಾಘಿಸಿದರು.

ಪಟ್ಟಣದ ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ ವತಿಯಿಂದ ಬಸಮ್ಮ ಕಲಾ ಮಂದಿರದಲ್ಲಿ ಗಣರಾಜ್ಯೋತ್ಸವ, ಸ್ವಾಮಿ ವಿವೇಕಾನಂದ ಜಯಂತಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸಾಧಕರಿಗೆ ಸನ್ಮಾನ ಮತ್ತು ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಉಪನ್ಯಾಸಕ ಹೆಚ್.ಮಲ್ಲಿಕಾರ್ಜುನ್ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿ, ಸ್ವಾಮಿ ವಿವೇಕಾನಂದರ ಮತ್ತು ಸುಭಾಷ್ ಚಂದ್ರಭೋಸರ ತತ್ವ, ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು. ತಂದೆ-ತಾಯಿ, ನೆಚ್ಚಿನ ಗುರುಗಳು ಮತ್ತು ಸೈನಿಕರು ನಮ್ಮ ನೆಚ್ಚಿನ ಆದರ್ಶ ವ್ಯಕ್ತಿಗಳಾಗಬೇಕು ಎಂದರು.

ಹರಪನಹಳ್ಳಿ ಕೆ.ಕೆ.ಆರ್.ಟಿ.ಸಿ. ಘಟಕ ವ್ಯವಸ್ಥಾಪಕರಾದ ಮಂಜುಳಾ ಎಂ. ಮಾತನಾಡಿ, ಕೆಲಸ ಮಾತಾಗಬೇಕು, ಮಾತೇ ಕೆಲಸವಾಗಬಾರದು,ಯಾವುದೇ ಕ್ಷೇತ್ರದಲ್ಲಿ ಸತತವಾಗಿ ಕೆಲಸ ಮಾಡಿದಲ್ಲಿ ಗುರಿ ತಲುಪಬಹುದು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಪ್ನ ಮಲ್ಲಿಕಾರ್ಜುನ ಮಾತನಾಡಿ, ಭಾರತ ಸಂವಿಧಾನ ಪ್ರಪಂಚ ದಲ್ಲಿಯೇ ಶ್ರೇಷ್ಠವಾದ ಸಂವಿಧಾನವಾಗಿದೆ. ಇದು ಸರ್ವರಿಗೂ ಶಕ್ತಿ, ಸಮಾನತೆ ಮತ್ತು ಮೂಲಭೂತ ಹಕ್ಕುಗಳನ್ನು ಒದಗಿಸಿದೆ. ವಿವೇಕಾನಂದರು, 'ದುಡ್ಡಿಲ್ಲದವನು ಬಡವನಲ್ಲ, ಗುರಿ ಮತ್ತು ಕನಸುಗಳಿಲ್ಲದವನು ನಿಜವಾದ ಬಡವ' ಎಂದಿದ್ದಾರೆ. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರೇರಕ ನುಡಿಗಳಂತೆ ಜೀವನದಲ್ಲಿ ನಡೆದುಕೊಳ್ಳುವವರು ನಮ್ಮ ಸೈನಿಕರು ಎಂದರು.

ಕಾರ್ಯಕ್ರಮವನ್ನು ಮಾಜಿ ಸೈನಿಕರಾದ ರಾಜ ಪೂಜಾರ್ ಮತ್ತು ಪೂಜಾರ್ ರೇಖಪ್ಪ ಉದ್ಘಾಟಿಸಿದರು.

ಮಾಜಿ ಸೈನಿಕರಾದ ಎ.ಆನಂದಪ್ಪ, ರಾಜ ಪೂಜಾರ್, ಪೂಜಾರ್ ರೇಖಪ್ಪ, ರವಿನಾಯ್ಕ, ಎಂ.ಡಿ ರಹಿಮಾನ್, ಓಬಳಾಪುರ ಚನ್ನಬಸಪ್ಪ, ಅಜ್ಜಪ್ಪ, ಗುರುಮಠ್, ಆನಂದರಾವ್ ಶಿಂಗ್ರಿಹಳ್ಳಿ, ಡಿಗ್ಗಿ ಹಾಲೇಶ್, ನಾಗರಾಜ ಅರಸಿಕೇರಿ, ಬಸವರಾಜ ಗುಂಡಗತ್ತಿ, ರವಿನಾಯ್ಕ ಇವರಿಗೆ 'ಸ್ವಾಮಿ ವಿವೇಕಾನಂದ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಕಾರ್ಯ ಕ್ರಮದಲ್ಲಿ ಎಸ್.ವಿ. ತ್ಯಾಗರಾಜ್, ಮುನೇಗೌಡ, ಕೆ.ಕೆ ಸೃಷ್ಠಿ, ಹೆಚ್.ತಿಲಕ್ ಇದ್ದರು.

# ಮಕ್ಕಳ ಉಜ್ವಲ ಭವಿಷ್ಯಕ್ಕೆ ಶಿಕ್ಷಣ ಅಗತ್ಯ



### ದೇವರಹಟ್ಟಿ ಕಾರ್ಯಕ್ರಮದಲ್ಲಿ ಬಾಪೂಜಿ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಎಂ. ಬಸವರಾಜ್

ದಾವಣಗೆರೆ, ಫೆ. 23 - ಉತ್ತಮ ಶಿಕ್ಷಣದಿಂದ ಉತ್ತಮ ಪ್ರಜೆಯಾಗಲು ಸಾಧ್ಯ. ಎಷ್ಟೇ ಕಷ್ಟಗಳು ಬಂದರೂ ಸಹ ಮಕ್ಕಳಿಗೆ ಶಿಕ್ಷಣ ಕೊಡಿಸಲು ಪಾಲಕರು ಮುಂದಾಗಬೇಕು ಎಂದು ಬಾಪೂಜಿ ಬ್ಯಾಂಕ್ ಪ್ರಧಾನ ವ್ಯವಸ್ಥಾಪಕ ಎಂ. ಬಸವರಾಜ್ ಹೇಳಿದರು.

ತಾಲ್ಲೂಕಿನ ದೇವರಹಟ್ಟಿ ಗ್ರಾಮದಲ್ಲಿರುವ ಮೊಹದ್ದಿಸೆ - ಏ - ಆಜಾಂ ಮಿಷನ್ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಅವರು ಮಾತನಾಡಿದರು.

ತೀವ್ರ ಬಡತನ ಎದುರಿಸುತ್ತಿರುವ ಕುಟುಂಬಗಳು ಮಕ್ಕಳನ್ನು ಶಿಕ್ಷಣದಿಂದ ವಂಚಿತಗೊಳಿಸಿ ಕೂಲಿ, ಗಾರೆ ಕೆಲಸ ಸೇರಿದಂತೆ ಇನ್ನಿತರೆ ಕೆಲಸಕ್ಕೆ ಕಳುಹಿಸಿ ಮಕ್ಕಳ ಜೀವನ ಹಾಳು ಮಾಡಬಾರದು. ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಅವರನ್ನು ವಿದ್ಯಾವಂತರನ್ನಾಗಿ ರೂಪಿಸಬೇಕು ಎಂದರು.

ತಂಜೀಮ್ ಸಮಿತಿ ಮಾಜಿ ಉಪಾಧ್ಯಕ್ಷ ಅಲ್ಲಾವಲಿ ಇನಾಯತ್ ಉಲ್ಲಾ ಖಾನ್ ಮಾತನಾಡಿ, ಮನೆಯೇ ಮೊದಲ ಪಾಠ ಶಾಲೆ, ಈ ನಿಟ್ಟಿನಲ್ಲಿ ತಾಯಿಯ ಪಾತ್ರ ಮಹತ್ವದ್ದು, ಹಾಗಾಗಿ ಮಕ್ಕಳಿಗೆ ಉತ್ತಮ ಬಾಂಧವ್ಯದೊಂದಿಗೆ ಕಲಿಸುವ ಪಾಠ ಜೀವನ ಪರ್ಯಂತ ಉಳಿಯಲಿದೆ ಎಂದರು.

ಪತ್ರಕರ್ತ ಬಿ. ಸಿಕಂದರ್ ಮಾತನಾಡಿ, ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ವೀಕ್ಷಿಸಲು ಉತ್ಸುಕರಾಗಿರುವ ಪೋಷಕರು, ತಮ್ಮ ಮಕ್ಕಳ ವ್ಯಾಸಂಗದ ಪ್ರಗತಿಗೆ ಗಮನ ಹರಿಸುವುದೂ ಅಷ್ಟೇ ಮುಖ್ಯ. ಆದ್ದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿ ಎಂದು ಸಲಹೆ ನೀಡಿದರು.

ಸಂಸ್ಥೆಯ ಅಧ್ಯಕ್ಷ ಎಂ.ಬಿ. ಸನಾವುಲ್ಲಾ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿ ಮಕ್ಕಳಿಗೆ ಅನುಕೂಲವಾಗಲೆಂದು ಕಡಿಮೆ ಪ್ರವೇಶ ಶುಲ್ಕ ಪಡೆದು ಗುಣಮಟ್ಟದ ಶಿಕ್ಷಣ ನೀಡುತ್ತಿದ್ದೇವೆ ಎಂದು ಹೇಳಿದ ಅವರು, ಬಡವರನ್ನು ಗುರುತಿಸಿ ದತ್ತು ಪಡೆದು ಶಿಕ್ಷಣ ನೀಡುತ್ತಿದ್ದೇವೆ ಎಂದರು.

ಸಂಸ್ಥೆಯ ಉಪಾಧ್ಯಕ್ಷ ಡಾ. ಉಸ್ಮಾನ್ ಸಾಬ್, ಜಂಟಿ ಕಾರ್ಯದರ್ಶಿ ಎಂ.ಬಿ.ಎಸ್. ಅಜ್ಮತ್‌ವುಲ್ಲಾ, ಖಜಾಂಚಿ ಟಿ.ಕೆ.ಅಬ್ದುಲ್ಲಾ, ಟ್ರಸ್ಟಿಗಳಾದ ಸೈಯದ್ ಜಾವೀದ್, ಮಲ್ಲಿಗೆ ಆರೀಫ್ ಉಲ್ಲಾ, ದೇವರಹಟ್ಟಿ ಇಮಾಂಸಾಬ್, ಅಕ್ಬರ್ ಸಾಬ್, ಸಹಶಿಕ್ಷಕಿಯರಾದ ಅಫ್ರೀನ್ ತಾಜ್, ಸಲ್ಮಾ, ಅಷಿಯಾನಾ, ತಸ್‌ಮೀನ್ ಬಾನು, ನಾಜೀಮಾ, ಹಮೀದಾ ಬಾಜಿ, ಮುಸ್ಕಾನ್ ಇದ್ದರು.

# ಸೈಬರ್ ವಂಚಕರಿಂದ ಸುರಕ್ಷಿತವಾಗಿರಿ : ಪಿ.ಎನ್. ಲೋಕೇಶ್



**ಪ್ರಸ್ತುತ ದಿನಗಳಲ್ಲಿ ಸೈಬರ್ ಅಪರಾಧಗಳು ಹೆಚ್ಚಾಗಿದ್ದು, ಸಾರ್ವಜನಿಕರು ಆನ್‌ಲೈನ್ ಮೂಲಕ ಹಣಕಾಸು ವಂಚನೆ, ಬೆದರಿಕೆ ಕರೆ ಹಾಗೂ ಮಾಹಿತಿ ಕಳ್ಳತನ ಸೇರಿದಂತೆ ಇತರೆ ಸಮಸ್ಯೆಗೆ ತುತ್ತಾದಲ್ಲಿ ಸೈಬರ್ ಸಹಾಯವಾಣಿ 1930 ಕರೆ ಮಾಡಿ, ದೂರು ನೋಂದಾಯಿಸಿ.**

ದಾವಣಗೆರೆ, ಫೆ. 23 - ಮಾಹಿತಿ ತಂತ್ರಜ್ಞಾನದ ಕಾಲಘಟ್ಟದಲ್ಲಿ ಇಂಟರ್ ನೆಟ್ ಬಹಳ ಮುಖ್ಯವಾಗಿದ್ದು, ಇದನ್ನು ಸದುದ್ದೇಶಕ್ಕೆ ಬಳಕೆ ಮಾಡಿಕೊಳ್ಳಿ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಸುರಕ್ಷಿತ ಅಂತರ್ಜಾಲ ದಿನ ಉದ್ದೇಶಿಸಿ ಮಾತಾನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಯುವ ಜನತೆ ಅಂತರ್ಜಾಲವನ್ನು ಹೆಚ್ಚು ವೀಕ್ಷಣೆ ಮಾಡುತ್ತಿದ್ದಾರೆ ಎಂದರು.

ಯುವಕರು ಜ್ಞಾನಾರ್ಜನೆ ದೃಷ್ಟಿಯಿಂದ ಇಂಟರ್‌ನೆಟ್ ಬಳಕೆ ಮಾಡಿಕೊಳ್ಳಬೇಕೆಂಬ ಹಿನ್ನೆಲೆಯಲ್ಲಿ ಸುರಕ್ಷಿತ ಅಂತರ್ಜಾಲ ದಿನ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಸುರಕ್ಷಿತ ಬ್ರೌಸಿಂಗ್, ವ್ಯಾಟ್ಸ್‌ಆ್ಯಪ್‌ನಲ್ಲಿ ಸುರಕ್ಷಿತ ಸಂದೇಶ ಕಳುಹಿಸಲು ಹಾಗೂ ಅಧಿಕಾರಿಗಳು ಡೇಟಾ ಹಾಗೂ ಬಳಕೆದಾರ ಐಡಿ, ಪಾಸ್‌ವರ್ಡ್, ಒಟಿಪಿ ಮತ್ತು ಡಿಜಿಟಲ್ ಸಹಿ ಟೋಕನ್‌ಗಳನ್ನು ಯಾರೊಂದಿಗೂ ಹಂಚಿಕೊಳ್ಳಬಾರದು ಎಂದು ತಿಳಿಸಿದರು.

ಇತರರ ಸಾಧನಗಳಲ್ಲಿ ಸ್ಥಾಪಿಸಲಾದ ಅಪ್ಲಿಕೇಶನ್‌ಗಳನ್ನು ನಿಮ್ಮ ವಿವರಗಳೊಂದಿಗೆ ನೋಂದಾಯಿಸಬಾರದು. ಡೇಟಾವನ್ನು ಹಂಚಿಕೊಳ್ಳಲು ಅಧಿಕಾರ ಹೊಂದಿದ್ದರೆ, ಡೇಟಾವನ್ನು ಪಾಸ್‌ವರ್ಡ್ ರಕ್ಷಿತ ಫೈಲ್‌ಗಳೊಂದಿಗೆ ಮಾತ್ರ ಹಂಚಿಕೊಳ್ಳಬೇಕು ಎಂದರು.

ರಾಷ್ಟ್ರೀಯ ಮಾಹಿತಿ ಕೇಂದ್ರದ ಅಧಿಕಾರಿ ಎಂ.ಎಸ್. ರಮೇಶ್ ಮಾತನಾಡಿ, ಆಧಾರ್ ಕಾರ್ಡ್, ಪಾನ್ ಕಾರ್ಡ್, ವೈದ್ಯಕೀಯ ವಿವರಗಳು ಪಾಸ್‌ಪೋರ್ಟ್ ವಿವರ, ಮೊಬೈಲ್ ಸಂಖ್ಯೆ, ಜನ್ಮ ದಿನಾಂಕ ಇಂತಹ ಗುರುತುಗಳನ್ನು ಯಾರೊಂದಿಗೂ ಹಂಚಿಕೊಳ್ಳಬಾರದು ಎಂದು ಹೇಳಿದರು.

ಈ ವೇಳೆ ಜಿಲ್ಲಾ ಸರ್ಜನ್ ನಾಗೇಂದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರವಿಚಂದ್ರ, ಶಿರಸ್ತೇದಾರ್ ಶ್ರೀನಿವಾಸ್, ಜಿಲ್ಲಾ ಪ್ರಾದೇಶಿಕ ವ್ಯವಸ್ಥಾಪಕ ರಾಕೇಶ್ ಹಾಗೂ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಇದ್ದರು.

## ನಗರದಲ್ಲಿಂದು ಕುರಿ, ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿಯು ಇಂದು ಮತ್ತು ನಾಳೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ಅಹಲ್ಯಾ ವಧು-ವರರ ವೇದಿಕೆಗೆ ಆಯ್ಕೆ

ದಾವಣಗೆರೆ, ಫೆ. 23 - ಜಿಲ್ಲಾ ಅಹಲ್ಯಾ ಮಹಿಳಾ ಸಮಾಜದ ವಧು-ವರರ ವೇದಿಕೆ ಸಂಚಾಲಕರಾಗಿ ಭಾಗೀರಥಿ ಪದ್ಮಣ್ಣ ಹಾಗೂ ರೇಣುಕಾ ಬೀರಪ್ಪ ಆಯ್ಕೆಯಾಗಿದ್ದಾರೆ ಎಂದು ಅಹಲ್ಯಾ ಮಹಿಳಾ ಸಮಾಜದ ಜಿಲ್ಲಾಧ್ಯಕ್ಷೆ ಪುಷ್ಪ ಆನಂದ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ. 9742715791, 9916377760.


**WANTED/ಕೆಲಸಕ್ಕೆ ಬೇಕಾಗಿದ್ದಾರೆ**

Wholesale ಔಷಧಿ ಅಂಗಡಿಗೆ
ಪುರುಷರು/ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
Qualification : English ಓದಲು ಬರಬೇಕು
ಆಕರ್ಷಕ ಸಂಬಳ +PF+ESI+Gratuity ಸೌಲಭ್ಯದೊಂದಿಗೆ
ಪ್ರತಿ ದಿನ ಊಟದ ವ್ಯವಸ್ಥೆ ಇರುತ್ತದೆ.

**A.K. Pharma ಎ.ಕೆ. ಫಾರ್ಮಾ**
ಹದಡಿ ರಸ್ತೆ, ತರಳಬಾಳು ಸ್ಕೂಲ್ ಎದುರು, ದಾವಣಗೆರೆ.


# ಉಕ್ರೇನ್ ಸಮರಕ್ಕೆ 3 ವರ್ಷ : ರಷ್ಯಾದಿಂದ ದಾಖಲೆ ಸಂಖ್ಯೆಯ ಡ್ರೋನ್ ದಾಳಿ

ಕೀವ್, ಫೆ. 23 - ಉಕ್ರೇನ್ ಮೇಲಿನ ಸಮರಕ್ಕೆ ಮೂರು ವರ್ಷ ತುಂಬುವ ಮುನ್ನಾ ದಿನ ರಷ್ಯಾದಿಂದ ದಾಖಲೆ ಸಂಖ್ಯೆಯ ಡ್ರೋನ್ ಬಳಸಿ ದಾಳಿ ನಡೆಸಲಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಜೆಲೆನ್‌ಸ್ಕಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ನೀಡಿರುವ ಜೆಲೆನ್‌ಸ್ಕಿ, ಭಾನುವಾರದಂದು 267 ಡ್ರೋನ್ ಬಳಸಿ ದಾಳಿ ನಡೆಸಲಾಗಿದೆ. ಉಕ್ರೇನ್ ನಗರ ಹಾಗೂ ಹಳ್ಳಿಗಳ ಮೇಲೆ ಡ್ರೋನ್ ಮೂಲಕ ದಾಳಿ ನಡೆಸುವುದನ್ನು ಆರಂಭಿಸಿದ ನಂತರ ಇದೇ ಮೊದಲ ಬಾರಿಗೆ ಇಷ್ಟು ಬೃಹತ್ ದಾಳಿ ನಡೆದಿದೆ ಎಂದಿದ್ದಾರೆ.

ಉಕ್ರೇನ್ ವಾಯುಪಡೆಯು 138 ಡ್ರೋನ್‌ಗಳನ್ನು ಹೊಡೆದುರುಳಿಸಿದೆ. 119 ಡ್ರೋನ್‌ಗಳು ಗುರಿ ತಪ್ಪಿವೆ ಎಂದವರು ಹೇಳಿದ್ದಾರೆ.

ಇದೇ ದಿನ 3 ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಸಿಡಿಸಲಾಗಿದೆ. ಈ ದಾಳಿಗೆ ಸಿಲುಕಿ ಒಬ್ಬ ವ್ಯಕ್ತಿ ಕ್ರೈವಿ ರಿಹ್ ಎಂಬ ನಗರದಲ್ಲಿ ಸಾವನ್ನಪ್ಪಿದ್ದಾರೆ ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟಂಪ್ ಅಧಿಕಾರ ವಹಿಸಿಕೊಂಡ ನಂತರ ಉಕ್ರೇನ್ ಸಮರದ ಕುರಿತ ನೀತಿಯನ್ನು ಕ್ಷಿಪ್ರವಾಗಿ ಬದಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮುಂದಿನ ಹೆಜ್ಜೆ ಇಡುವ ಕುರಿತು ಯುರೋಪ್ ದೇಶಗಳು ಚರ್ಚೆ ನಡೆಸಿವೆ. ರಷ್ಯಾ ಜೊತೆ ಟ್ರಂಪ್ ಕೈಜೋಡಿಸಿ ಉಕ್ರೇನ್ ಹಾಗೂ ಯುರೋಪ್ ದೇಶಗಳ ಅನುಪಸ್ಥಿತಿಯಲ್ಲಿ ಒಪ್ಪಂದಕ್ಕೆ ಬರಬಹುದು ಎಂಬ ಕಳವಳ ವ್ಯಕ್ತವಾಗುತ್ತಿದೆ.

ರಷ್ಯಾ ಜೊತೆ ಆರ್ಥಿಕ ಸಹಕಾರಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಹಾಗೂ ರಾಯಭಾರಿ ಸಂಬಂಧ ಪುನರಾರಂಭಿಸಲು ಒಪ್ಪಂದಕ್ಕೆ ಬರಲಾಗಿದೆ. ಇದು ಅಮೆರಿಕದ ಹಿಂದಿನ ಸರ್ಕಾರದ ನೀತಿಗೆ ಹೋಲಿಸಿದರೆ ಬೃಹತ್ ಬದಲಾವಣೆಯಾಗಿದೆ. ಉಕ್ರೇನ್ ಸಮರದ ಹಿನ್ನೆಲೆಯಲ್ಲಿ ರಷ್ಯಾ ಹಾಗೂ ಅದರ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ಅವರನ್ನು ಏಕಾಂಗಿಗೊಳಿಸಲು ಅಮೆರಿಕದ ಹಿಂದಿನ ಜೋ ಬಿಡೆನ್ ಸರ್ಕಾರ ತೀವ್ರ ಪ್ರಯತ್ನ ನಡೆಸಿತ್ತು.

ಸಮರದ ಬಿಕ್ಕಟ್ಟಿಗೆ ತ್ವರಿತ ಪರಿಹಾರ ಕಂಡುಕೊಳ್ಳಲು ಟ್ರಂಪ್ ಮುಂದಾದಲ್ಲಿ ಉಕ್ರೇನ್ ತನ್ನ ಪ್ರದೇಶಗಳನ್ನು ಕಳೆದುಕೊಳ್ಳಲಿದೆ. ಅಲ್ಲದೆ ಮುಂದಿನ ದಿನಗಳಲ್ಲಿ ರಷ್ಯಾದ ದಾಳಿಯ ಸಾಧ್ಯತೆ ಹೆಚ್ಚಾಗುತ್ತದೆ ಎಂದು ಜೆಲೆನ್‌ಸ್ಕಿ ಕಳವಳ ವ್ಯಕ್ತಪಡಿಸಿದ್ದಾರೆ. ಆದರೆ, ವಾಸ್ತವಿಕವಾಗಿ ಶಾಂತಿ ಮಾತುಕತೆ ಆರಂಭವಾದಾಗ ಉಕ್ರೇನ್ ಸೇರಿಸಿಕೊಳ್ಳಲಾಗುವುದು ಎಂದು ಅಮೆರಿಕದ ಅಧಿಕಾರಿಗಳು ಹೇಳಿದ್ದಾರೆ.

ಆದರೆ, ಈ ವಾರ ಹೇಳಿಕೆಯೊಂದನ್ನು ನೀಡಿದ್ದ ಟ್ರಂಪ್, ಸಮರ ಆರಂಭಿಸಿದ್ದು ಉಕ್ರೇನ್. ಜೆಲೆನ್‌ಸ್ಕಿ ಸರ್ವಾಧಿಕಾರಿ ರೀತಿ ವರ್ತಿಸುತ್ತಿದ್ದಾರೆ. ಯುದ್ಧದ ಸಮಯದಲ್ಲಿ ಚುನಾವಣೆ ನಡೆಸಿಲ್ಲ ಎಂದು ಹೇಳಿದ್ದು ಉಕ್ರೇನ್‌ನಲ್ಲಿ ಆಕ್ರೋಶಕ್ಕೆ ಕಾರಣವಾಗಿತ್ತು.

ಟ್ರಂಪ್ ಹಾಗೂ ಪುತಿನ್ ಭೇಟಿಗಾಗಿ ಸಿದ್ಧತೆಗಳು ನಡೆದಿವೆ ಎಂದು ರಷ್ಯಾದ ಉಪವಿದೇಶಾಂಗ ಸಚಿವರು ಶನಿವಾರ ಹೇಳಿದ್ದರು. ಇದರೊಂದಿಗೆ ರಷ್ಯಾದ ನಾಯಕತ್ವ ಏಕಾಂಗಿಗೊಳಿಸುವ ಪ್ರಯತ್ನದಿಂದ ಅಮೆರಿಕ ಹಿಂದೆ ಸರಿಯುತ್ತಿರುವುದು ಸ್ಪಷ್ಟವಾಗಿತ್ತು.

ಈ ನಡುವೆ ಉಕ್ರೇನ್‌ನಲ್ಲಿರುವ ಅಪರೂಪದ ಭೂ ಖನಿಜಗಳನ್ನು ತನಗೆ ಪೂರೈಕೆ ಮಾಡಬೇಕು ಎಂದು ಅಮೆರಿಕದ ಟ್ರಂಪ್ ಆಡಳಿತ ಒತ್ತಾಯಿಸಿತ್ತು. ಆದರೆ ನಿರ್ದಿಷ್ಟ ಸುರಕ್ಷತಾ ಗ್ಯಾರಂಟಿ ಇಲ್ಲದೆ ಈ ಬೇಡಿಕೆಗೆ ಒಪ್ಪಲಾಗದು ಎಂದು ಜೆಲೆನ್‌ಸ್ಕಿ ಹೇಳಿದ್ದರು.

ಉಕ್ರೇನ್‌ನಲ್ಲಿ ಶಾಶ್ವತ ಶಾಂತಿ ನೆಲೆಗೊಳಿಸುವ ಅಗತ್ಯವಿದೆ. ಎಲ್ಲಾ ಸಹಭಾಗಿಗಳ ಒಮ್ಮತದಿಂದ ಇದು ಸಾಧ್ಯವಾಗಲಿದೆ. ಇದಕ್ಕಾಗಿ ಯುರೋಪ್ ಹಾಗೂ ಅಮೆರಿಕದ ಶಕ್ತಿಗಳನ್ನು ಬಲಪಡಿಸಬೇಕಿದೆ ಎಂದವರು ಹೇಳಿದ್ದರು.

ಈ ನಡುವೆ ಸಂದೇಶವೊಂದನ್ನು ನೀಡಿರುವ ಪುತಿನ್, ಉಕ್ರೇನ್‌ನಲ್ಲಿ ಹೋರಾಟ ನಡೆಸುತ್ತಿರುವ ರಷ್ಯಾದ ಸೈನಿಕರ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಈ ಸೈನಿಕರು ರಾಷ್ಟ್ರದ ಹಿತವನ್ನು ರಕ್ಷಿಸುತ್ತಿದ್ದಾರೆ ಎಂದವರು ಹೇಳಿದ್ದಾರೆ.

ಈ ಮಧ್ಯೆ, ರಷ್ಯಾದ ಮೇಲೆ ಹೊಸ ನಿರ್ಬಂಧಗಳನ್ನು ಹೇರುವುದಾಗಿ ಬ್ರಿಟನ್ ಘೋಷಿಸಿದೆ. ಉಕ್ರೇನ್‌ಗೆ ಪಶ್ಚಿಮ ಶಕ್ತಿಗಳ ಬೆಂಬಲ ಹೆಚ್ಚಿಸಲು ಬ್ರಿಟನ್ ಪ್ರಯತ್ನ ನಡೆಸುತ್ತಿದೆ.

ಯುದ್ಧ ಆರಂಭವಾದ ನಂತರ ಅತಿ ದೊಡ್ಡ ದಿಗ್ಬಂಧನ ಕ್ರಮಗಳನ್ನು ಸೋಮವಾರ ಘೋಷಿಸಲಾಗುವುದು ಎಂದು ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ತಿಳಿಸಿದ್ದಾರೆ.

ಉಕ್ರೇನ್ ವಿನಾಶಕ್ಕೆ ಶಕ್ತಿ ನೀಡುತ್ತಿರುವ ರಷ್ಯಾದ ಸೈನಿಕ ಯಂತ್ರ ಹಾಗೂ ರಷ್ಯಾದ ಆದಾಯವನ್ನು ದುರ್ಬಲಗೊಳಿಸಲು ದಿಗ್ಬಂಧನ ಹೇರಲಾಗುವುದು ಎಂದು ಲ್ಯಾಮಿ ಹೇಳಿದ್ದಾರೆ.

ಶಾಂತಿ ಒಪ್ಪಂದ ಮಾಡಿಕೊಳ್ಳುವಾಗ ಉಕ್ರೇನ್ ಕೈಬಿಡಬಾರದು ಎಂದು ಟ್ರಂಪ್ ಮನವೊಲಿಸಲು ಬ್ರಿಟನ್ ಪ್ರಧಾನ ಮಂತ್ರಿ ಕೀರ್ ಸ್ಟಾರ್ಮರ್ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮಾನ್ಯುವೆಲ್ ಮ್ಯಾಕ್ರೋನ್ ಅವರು ಈ ವಾರ ಅಮೆರಿಕಗೆ ಭೇಟಿ ನೀಡಲಿದ್ದಾರೆ.


**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ತುರ್ಚಘಟ್ಟ ಹೃತ್ಪೂರ್ವಕ ಕೃತಜ್ಞತೆಗಳು**



**ಹೇಮಂತರಾಜ್ ತುರ್ಚಘಟ್ಟ**
ಅಧ್ಯಕ್ಷರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ತುರ್ಚಘಟ್ಟ



**ಎಸ್. ಕರಿಬಸಪ್ಪ ಬೆಳವನೂರು**
ಉಪಾಧ್ಯಕ್ಷರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ತುರ್ಚಘಟ್ಟ

ದಿನಾಂಕ 23.02.2025ರಂದು ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ತುರ್ಚಘಟ್ಟ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಮ್ಮನ್ನು ಅಧ್ಯಕ್ಷ, ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸಿದ ಬೆಳವನೂರು ಹಾಗೂ ತುರ್ಚಘಟ್ಟ ಗ್ರಾಮದ ಎಲ್ಲಾ ಹಿರಿಯರಿಗೂ, ಮತದಾರರಿಗೂ, ಸರ್ವ ಸದಸ್ಯರಿಗೂ ಹಾಗೂ ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸದ ಎಲ್ಲರಿಗೂ ಹೃದಯಪೂರ್ವಕ ಕೃತಜ್ಞತೆಗಳು.

# ಜರ್ಮನ್ ಚುನಾವಣೆ : ಆರ್ಥಿಕತೆಯಿಂದ ಹಿಡಿದು ಉಕ್ರೇನ್‌ವರೆಗೆ ಪರಿಣಾಮ

ಬರ್ಲಿನ್, ಫೆ. 23 - ಯುರೋಪ್‌ನ ಅತಿ ದೊಡ್ಡ ಆರ್ಥಿಕತೆಯಾದ ಜರ್ಮನಿಗೆ ಭಾನುವಾರ ಚುನಾವಣೆ ನಡೆಯುತ್ತಿದ್ದು, ಆರ್ಥಿಕತೆಯಿಂದ ಹಿಡಿದು ಅಮೆರಿಕದ ಜೊತೆಗಿನ ಯುರೋಪ್ ಮೈತ್ರಿಯವರೆಗೆ ಹಲವು ವಿಷಯಗಳ ಮೇಲೆ ಪರಿಣಾಮವಾಗಲಿದೆ.

ಈ ಚುನಾವಣೆಯಲ್ಲಿ ಮಧ್ಯ ಬಲಪಂಥೀಯ ವಿರೋಧ ಪಕ್ಷಗಳ ಮೈತ್ರಿಕೂಟ ಗೆಲುವು ಸಾಧಿಸುವ ಸಾಧ್ಯತೆ ಇದೆ. ಎರಡನೇ ವಿಶ್ವ ಸಮರದ ನಂತರ ಬಲಪಂಥೀಯ ಪಕ್ಷವೊಂದು ಬಲಿಷ್ಠ ಜನಾದೇಶ ಪಡೆಯುವ ಸಾಧ್ಯತೆ ಇದೆ ಎಂದು ಸಮೀಕ್ಷೆಗಳು ತಿಳಿಸಿವೆ.

27 ದೇಶಗಳ ಯುರೋ ಒಕ್ಕೂಟದಲ್ಲಿ ಜರ್ಮನ್ ಅತಿ ಹೆಚ್ಚಿನ ಜನಸಂಖ್ಯೆಯ ದೇಶವಾಗಿದೆ. ಇದು ನ್ಯಾಟೋದ ಮುಂಚೂಣಿ ದೇಶವೂ ಆಗಿದೆ. ಅಮೆರಿಕದ ನಂತರ ಜರ್ಮನಿಯು ಉಕ್ರೇನ್‌ಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಶಸ್ತ್ರಗಳನ್ನು ಪೂರೈಸಿದೆ.

ಮುಂದಿನ ವರ್ಷಗಳಲ್ಲಿ ಸಮಸ್ಯೆಗಳಿಗೆ ಯುರೋಪ್ ವಲಯ ಯಾವ ರೀತಿ ಸ್ಪಂದಿಸಲಿದೆ ಎಂಬುದನ್ನು ಜರ್ಮನ್ ಪ್ರಮುಖವಾಗಿ ನಿರ್ಧರಿಸಲಿದೆ. ಅದರಲ್ಲೂ ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ವಹಿಸಿಕೊಂಡ ನಂತರ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ದೊಡ್ಡ ಬದಲಾವಣೆಗಳಾಗಿವೆ. ಈ ಹಿನ್ನೆಲೆಯಲ್ಲಿ ಜರ್ಮನ್ ಚುನಾವಣೆ ಪ್ರಾಮುಖ್ಯತೆ ಪಡೆದುಕೊಂಡಿದೆ.

ಜರ್ಮನಿಯ 59 ದಶಲಕ್ಷ ಜನರು ಮತದಾನಕ್ಕೆ ಅರ್ಹತೆ ಪಡೆದಿದ್ದಾರೆ. ಜರ್ಮನ್ ಚುನಾವಣಾ ವ್ಯವಸ್ಥೆ ಕಾರಣದಿಂದಾಗಿ ಇದುವರೆಗೂ ಯಾವುದೇ ಪಕ್ಷ ಸ್ಪಷ್ಟವಾಗಿ ಬಹುಮತ ಪಡೆಯಲು ಸಾಧ್ಯವಾಗಿಲ್ಲ. ಈ ಬಾರಿಯೂ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬರುವುದು ಸ್ಪಷ್ಟವಾಗಿದೆ.

ಮಧ್ಯ ಎಡಪಂಥೀಯ ನಾಯಕರಾದ ಒಲಾಫ್ ಸ್ಕಾಲ್ಜ್ ಅವರು ನೇತೃತ್ವದ ಮೈತ್ರಿಕೂಟ ಕಳೆದ ನವೆಂಬರ್‌ನಲ್ಲಿ ಕುಸಿದಿತ್ತು. ಇದರಿಂದಾಗಿ ನಿಗದಿತ ಅವಧಿಗಿಂತ ಏಳು ತಿಂಗಳು ಮೊದಲೇ ಚುನಾವಣೆ ನಡೆಯುತ್ತಿದೆ. ಮಧ್ಯ ಬಲಪಂಥೀಯ ವಿರೋಧ ಪಕ್ಷದ ನಾಯಕ ಫ್ರೆಡ್ರಿಕ್ ಮರ್ಜ್ ಅವರ ನೇತೃತ್ವದ ಯೂನಿಯನ್ ಬ್ಲಾಕ್ ಹೆಚ್ಚು ಸ್ಥಾನ ಗಳಿಸಲಿದೆ ಎಂದು ಸಮೀಕ್ಷೆಗಳು ತಿಳಿಸಿವೆ. ಯೂನಿಯನ್ ಬ್ಲಾಕ್‌ಗೆ ಶೇಕಡ 28 ರಿಂದ 32 ಜನರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಸ್ಕಾಲ್ಜ್ ಅವರ ಸೋಶಿಯಲ್ ಡೆಮೊಕ್ರಾಟ್ ಪಕ್ಷ ಶೇಕಡ 14 ರಿಂದ 16 ರಷ್ಟು ಮತ ಗಳಿಸಲಿದೆ ಎಂದು ಹೇಳಲಾಗುತ್ತಿದೆ. ಎರಡನೇ ಮಹಾಸಮರದ ನಂತರ ಈ ಪಕ್ಷ ಅತ್ಯಂತ ಕಳಪೆ ಸಾಧನೆ ಮಾಡಲಿದೆ ಎನ್ನಲಾಗುತ್ತಿದೆ.

ತೀವ್ರ ಬಲಪಂಥೀಯ ಪಕ್ಷವಾದ ಆಲ್ಟರ್ನೇಟಿವ್ ಫಾರ್ ಜರ್ಮನಿ (ಎಎಫ್‌ಡಿ) ಈ ಬಾರಿ ಶೇಕಡ 20ರಷ್ಟು ಮತ ಗಳಿಸಲಿದೆ ಎನ್ನಲಾಗುತ್ತಿದೆ. ಕಳೆದ ಚುನಾವಣೆಯಲ್ಲಿ ಪಕ್ಷ 12.6 ರಷ್ಟು ಮತ ಗಳಿಸಿತ್ತು. ಆದರೆ ಈ ಪಕ್ಷವು ಇತರೆ ರಾಜಕೀಯ ಪಕ್ಷಗಳಿಗೆ ಅಸ್ಪ ಶ್ಯವಾಗಿದೆ. ಹೀಗಾಗಿ ಸರ್ಕಾರದಲ್ಲಿ ಹೆಚ್ಚಿನ ಪಾತ್ರ ವಹಿಸುವ ಸಾಧ್ಯತೆ ಇಲ್ಲ

ಕಳೆದ ಎರಡು ವರ್ಷಗಳಿಂದ ಜರ್ಮನ್ ಆರ್ಥಿಕತೆ ಕುಸಿದಿದೆ. ಹೀಗಾಗಿ ಆರ್ಥಿಕತೆಯೇ ನೂತನ ಸರ್ಕಾರದಲ್ಲಿ ಪ್ರಾಮುಖ್ಯತೆ ಪಡೆಯಲಿದೆ. ವಲಸಿಗರು ಇತ್ತೀಚಿನ ದಿನಗಳಲ್ಲಿ ನಡೆಸಿರುವ ಮಾರಣಾಂತಿಕ ದಾಳಿಗಳು ಚುನಾವಣೆ ಸಂದರ್ಭದಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದುಕೊಂಡಿವೆ.

ಸೂಕ್ತ ದಾಖಲೆಗಳಿಲ್ಲದೆ ಜನರು ದೇಶದ ಒಳಗೆ ಬರುವುದನ್ನು ತಡೆಯಲಾಗುವುದು ಎಂದು ಮರ್ಜ್ ಹೇಳಿದ್ದರು. ವಲಸಿಗರನ್ನು ಜರ್ಮನಿಯ ಗಡಿಯಿಂದ ವಾಪಸ್ ಕಳಿಸುವ ಬಗ್ಗೆ ನಿರ್ಣಯವೊಂದನ್ನು ಜಾರಿಗೆ ತರುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

# ಹೋರಾಟಗಾರರಿಗೆ ಸಂಗೊಳ್ಳಿ ರಾಯಣ್ಣ ಸ್ಫೂರ್ತಿ



ದಾವಣಗೆರೆ, ಫೆ. 23- 'ಬ್ರಿಟಿಷ್ ವಿರುದ್ಧದ ಹೋರಾಟ ಮಾತ್ರವಲ್ಲ, ರೈತರನ್ನು ಸಂಘಟಿಸುವ, ಕಂದಾಯ ಹಾಗೂ ಭೂ ಮಾಲೀಕತ್ವ ವಿಚಾರದಲ್ಲಿ ಕೂಡ ಹೋರಾಡಿದ್ದ, ಕೆಚ್ಚಿನ ಗುಂಡಿಗೆಯ ಸಂಗೊಳ್ಳಿ ರಾಯಣ್ಣ, ಈಗಲೂ ಕೂಡ ಹೋರಾಟಗಾರರಿಗೆ ಪ್ರೇರಣೆ' ಎಂದು ಪತ್ರಕರ್ತ, ಚಿಂತಕ ರಾ.ಚಿಂತನ್ ಹೇಳಿದರು.

ನಗರದ ಶಿವಯೋಗಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ಸಂಗೊಳ್ಳಿ ರಾಯಣ್ಣನ 194ನೇ ಹುತಾತ್ಮ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹುತಾತ್ಮ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಶಸ್ತಿ ಸ್ವೀಕರಿಸಿ ವಿಶೇಷ ಉಪನ್ಯಾಸ ನೀಡಿದ ಅವರು, 'ಬ್ರಿಟಿಷ್ ವಿರುದ್ಧ ಆರಂಭಿಕ ಹೋರಾಟಗಾರನಾದ, ಕ್ರಾಂತಿಕಾರಿ ರಾಯಣ್ಣ ಒಂದಲ್ಲಾ ಒಂದು ದಿನ ನಮ್ಮ ನಾಡು ಬಿಳಿಯರ ಕಪಿಮುಷ್ಠಿಯಿಂದ ಬಿಡುಗಡೆ ಹೊಂದುವ ಭರವಸೆಯನ್ನು 150 ವರ್ಷ ಮೊದಲೇ ಕಂಡಿದ್ದರು. 1798ರ ಆಗಸ್ಟ್ 15 ರಂದು ಹುಟ್ಟಿ, 1831ರ ಜನವರಿ 26ರಂದು ಹುತಾತ್ಮನಾಗುವ ರಾಯಣ್ಣ, ರಾಷ್ಟ್ರೀಯ ಹಬ್ಬದ ದಿನದಂದು ಯಾವತ್ತಿಗೂ ನೆನಪಿನಲ್ಲಿ ಉಳಿಯುವುದು ಕನ್ನಡಿಗರಿಗೆಲ್ಲ ರೋಮಾಂಚನದ ಸಂಗತಿ' ಎಂದರು.

**ವಿಶ್ವ ಸಮ್ಮೇಳನಕ್ಕೆ ದಿನಾಂಕ ಪ್ರಕಟಿಸಿ:** ಜಿಲ್ಲಾ ಕರವೇ ಅಧ್ಯಕ್ಷ ರಾಮೇಗೌಡ ಮಾತನಾಡಿ, 'ಕಳೆದ ವರ್ಷ ಹೋರಾಟದ ಫಲವಾಗಿ ರಾಜ್ಯದ ನಾಮ ಫಲಕಗಳಲ್ಲಿ ಶೇ.60 ರಷ್ಟು ಕನ್ನಡ ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಆದೇಶ ನೀಡಿತು. ಡಾ.ಸರೋಜಿನಿ ಮಹಿಷಿ ವರದಿ ಜಾರಿಗಾಗಿ ಉಗ್ರ ಹೋರಾಟಕ್ಕೆ ಮುಂದಾಗುತ್ತಿದ್ದೇವೆ. ದಾವಣಗೆರೆಯಲ್ಲೇ ವಿಶ್ವ ಕನ್ನಡ ಸಮ್ಮೇಳನ ಮಾಡುವ ನಿಟ್ಟಿನಲ್ಲಿ ಸರ್ಕಾರ ದಿನಾಂಕ ಪ್ರಕಟಿಸಬೇಕು ಎಂದು ಒತ್ತಾಯಿಸಿದರು.

ಕನ್ನಡ ಗೀತೆಗಳ ರಸಮಂಜರಿ, ಕ್ರಾಂತಿವೀರ ರಾಯಣ್ಣ ರೂಪಕ ಹಾಗೂ ಮಲ್ಲಕಂಬ ಸ್ಪರ್ಧೆ ನಡೆಸಲಾಯಿತು. ಇನ್‌ಸೈಟ್ಸ್ ಐಎಎಸ್ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್ ರಾಯಣ್ಣ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಈ ವೇಳೆ ಕರವೇ ರಾಜ್ಯ ಸಂಘಟನಾ ಕಾರ್ಯದರ್ಶಿ ಕಾಂತರಾಜ್, ಪಾಲಿಕೆ ಸದಸ್ಯ ಕೆ. ಪ್ರಸನ್ನಕುಮಾರ್, ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್, ಕರವೇ ಜಿಲ್ಲಾ ಘಟಕದ ಈಶ್ವರ್, ಸಂತೋಷ್, ಗೋಪಾಲ್ ದೇವರಮನಿ, ರವಿಕುಮಾರ್, ಪೈಲ್ವಾನ್ ಜಬೀವುಲ್ಲಾ ಖಾನ್, ಮಂಜುಳಾ ಗಣೇಶ್, ಗಿರೀಶ್ ಕುಮಾರ್, ಜಬೀವುಲ್ಲಾ ಮತ್ತಿತರರು ಭಾಗವಹಿಸಿದ್ದರು.

**ಸಾಧಕರಿಗೆ ಸನ್ಮಾನ :** ಸಮಾಜ ಸೇವಾ ಕ್ಷೇತ್ರದಿಂದ ವಾಸುದೇವ ರಾಯ್ಕರ್, ನಾಗರಿಕ ಸೇವಾ ಕ್ಷೇತ್ರ ಮಂಜುನಾಥ್ ಪಂಡಿತ್, ವೈದ್ಯಕೀಯ ಕ್ಷೇತ್ರ ಡಾ.ಎಸ್.ವಿಜಯಕುಮಾರ್, ಮಾಧ್ಯಮ ಕ್ಷೇತ್ರದಿಂದ ಹಿರಿಯ ಪತ್ರಕರ್ತ ಸದಾನಂದ ಹೆಗಡೆ, ದೃಶ್ಯ ಮಾಧ್ಯಮ ಕ್ಷೇತ್ರ ಚಿದಾನಂದ, ರಂಗಭೂಮಿ ಕ್ಷೇತ್ರದಿಂದ ಎಸ್.ಎಸ್. ಸಿದ್ದರಾಜು, ಕನ್ನಡಪರ ಹೋರಾಟ ಎಂ.ಭೀಮೇಶ್, ರೈತಪರ ಕ್ಷೇತ್ರ ಎಂ.ಓ. ದೇವರಾಜ್ ಹಾಗೂ ಕಲಾವಿದ ಧರ್ಮರಾಜ್ ಅವರನ್ನು ಸನ್ಮಾನಿಸಲಾಯಿತು.

# ಮಾತನಾಡಿದರೆ ಪ್ರಜಾಪ್ರಭುತ್ವಕ್ಕೆ ಬೆದರಿಕೆಯೇ?

**(1ನೇ ಪುಟದಿಂದ)** ಧೋರಣೆಯವರು ಗೆಲ್ಲುತ್ತಿರುವ ಜೊತೆಗೆ ಅವರು ಜಾಗತಿಕವಾಗಿ ಜೊತೆಯಾಗುತ್ತಿರುವುದಕ್ಕೆ ಎಡಪಂಥೀಯರು ಉನ್ಮಾದಕ್ಕೆ ಸಿಲುಕಿದ್ದಾರೆ ಎಂದು ಮೆಲೋನಿ ಲೇವಡಿ ಮಾಡಿದ್ದಾರೆ.

ಈ ಹಿಂದೆ ಅಮೆರಿಕದ ಅಧ್ಯಕ್ಷರಾಗಿದ್ದ ಬಿಲ್ ಕ್ಲಿಂಟನ್ ಹಾಗೂ ಬ್ರಿಟನ್ ಪ್ರಧಾನ ಮಂತ್ರಿಯಾಗಿದ್ದ ಟೋನಿ ಬ್ಲೇರ್ ಅವರು 90ರ ದಶಕದಲ್ಲಿ ಜಾಗತಿಕ ಎಡಪಂಥೀಯ ಉದಾರವಾದಿಗಳ ಜಾಲವನ್ನು ಸೃಷ್ಟಿಸಿದ್ದರು. ಆಗ ಅವರನ್ನು ಮುತ್ಸದ್ದಿಗಳು ಎಂದು ಕರೆಯಲಾಗಿತ್ತು ಎಂದು ಮೆಲೋನಿ ನೆನಪಿಸಿದ್ದಾರೆ.

ಈಗ ಟ್ರಂಪ್, ಅರ್ಜೆಂಟಿನ ಅಧ್ಯಕ್ಷ ಜೇವಿಯರ್ ಮಿಲಿ ಹಾಗೂ ಮೋದಿ ಮತ್ತು ನಾನು ಮಾತನಾಡಿದರೆ ಪ್ರಜಾಪ್ರಭುತ್ವಕ್ಕೆ ಬೆದರಿಕೆ ಎನ್ನಲಾಗುತ್ತದೆ. ಇದು ಅವರ ಕೊನೆಯ ಮಿಥ್ಯಾಚಾರವಾಗಿದೆ. ಆದರೆ ಇದಕ್ಕೆ ನಾವು ಹೊಂದಿಕೊಂಡಿದ್ದೇವೆ. ಜನ ಈಗ ಅವರ ಮಾತು ಸುಳ್ಳುಗಳನ್ನು ನಂಬುತ್ತಿಲ್ಲ ಎಂಬುದೇ ಒಳ್ಳೆಯ ವಿಚಾರ. ನಾಗರಿಕರು ನಮಗೆ ಮತ ನೀಡುತ್ತಿದ್ದಾರೆ ಎಂದು ಮೆಲೋನಿ ತಿಳಿಸಿದ್ದಾರೆ.

ನಾವು ಸ್ವಾತಂತ್ರ್ಯವನ್ನು ರಕ್ಷಿಸುತ್ತೇವೆ. ನಮ್ಮ ದೇಶಗಳನ್ನು ಪ್ರೀತಿಸುತ್ತೇವೆ, ಗಡಿಗಳನ್ನು ರಕ್ಷಿಸಿಕೊಳ್ಳುತ್ತೇವೆ, ಉದ್ಯಮಗಳನ್ನು ರಕ್ಷಿಸುತ್ತೇವೆ ಹಾಗೂ ಎಡಪಂಥೀಯ ಹಸಿರುವಾದಿಗಳ ಅವಿವೇಕದಿಂದ ಜನರನ್ನು ರಕ್ಷಿಸುತ್ತೇವೆ ಮತ್ತು ಕೌಟುಂಬಿಕ ಜೀವನ ರಕ್ಷಿಸುತ್ತೇವೆ. ಹೀಗಾಗಿ ಜನ ನಮಗೆ ಮತ ನೀಡುತ್ತಿದ್ದಾರೆ ಎಂದವರು ತಿಳಿಸಿದ್ದಾರೆ.

ನಾವು ವೋಕಿಸಂಗೆ ವಿರುದ್ಧವಾಗಿದ್ದೇವೆ ಹಾಗೂ ಸಾಮಾನ್ಯ ಜ್ಞಾನದ ಪರವಾಗಿದ್ದೇವೆ. ಎಡಪಂಥೀಯರು ಭಾವಿಸುವಷ್ಟು ಜನ ಅಮಾಯಕರಲ್ಲ ಎಂದು ಮೆಲೋನಿ ಹೇಳಿದ್ದಾರೆ.

ಟ್ರಂಪ್ ಅವರು ಯುರೋಪ್‌ನಿಂದ ದೂರವಾಗಲಿದ್ದಾರೆ ಎಂದು ನಮ್ಮ ವಿರೋಧಿಗಳು ಹೇಳುತ್ತಿದ್ದಾರೆ. ಆದರೆ ಟ್ರಂಪ್ ನೇತೃತ್ವದಲ್ಲಿ ಅಮೆರಿಕ ಹಾಗೂ ಯುರೋಪ್ ಹತ್ತಿರವಾಗಿ ಮುಂದುವರಿಯಲಿವೆ ಎಂದು ಮೆಲೋನಿ ಹೇಳಿದ್ದಾರೆ.

# ಅಕ್ರಮ ಆಶ್ರಯ ಮನೆ ಕೆಡವಲು ನ್ಯಾಯಾಲಯ ಆದೇಶ

ದಾವಣಗೆರೆ, ಫೆ. 12- ನಗರದಲ್ಲಿ 2002 ರಲ್ಲಿ ಆಶ್ರಯ ಯೋಜನೆಗೆ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ 3 ಎಕರೆ ಜಮೀನಲ್ಲಿನ ಮನೆ, ಕಟ್ಟಡಗಳ ತೆರವಿಗೆ ದಾವಣಗೆರೆಯ ಎರಡನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಆದೇಶ ನೀಡಿದೆ ಎಂದು ಜಾಗದ ಮಾಲೀಕ ಅರಣಿ ರುದ್ರೇಶ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರ ಆಶ್ರಯ ಯೋಜನೆಯಿಂದ 2002 ರಲ್ಲಿ ಏಕಾಏಕಿ ನಮಗೆ ಸೇರಿದ ಮೂರು ಎಕರೆ ಜಮೀನು ಒತ್ತುವರಿ ಮಾಡಿಕೊಂಡಿದ್ದಲ್ಲದೆ ಮನೆಗಳ ನಿರ್ಮಾಣ ಸಹ ಮಾಡ ಲಾಗಿತ್ತು. ಆಗಲೇ ಅದನ್ನು ಪ್ರಶ್ನಿಸಿ ನ್ಯಾಯಾಲಯದ ಮೊರೆ ಹೋಗಲಾಗಿತ್ತು ಎಂದು ತಿಳಿಸಿದರು.

ಆದರೆ ಈಗ ಎಸ್‌ಪಿಎಸ್ ನಗರದಲ್ಲಿ ನಿರ್ಮಾಣಗೊಳಿಸಿರುವ 136 ಮನೆಗಳಿರುವ ಸರ್ವೆ ನಂಬರ್ 145/1ಪಿ ಯಲ್ಲಿನ ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ಜಮೀನು ತಮಗೆ ಸೇರಿದ್ದು ಎಂದು ಸಾಕ್ಷಿ ಆಧಾರ ಸಮೇತ ನ್ಯಾಯಾಲಯದಲ್ಲಿ ಸಾಬೀತಾಯಿತು. ಜಮೀನಿನ ಒತ್ತುವರಿ ಪ್ರಶ್ನಿಸಿ ದಾವಣಗೆರೆಯ ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿತ್ತು. ಅಲ್ಲಿ ನಮ್ಮ ಪರವಾಗಿಯೇ ತೀರ್ಪು ಬಂದಿತ್ತು ಎಂದು ತಿಳಿಸಿದರು.

ಆಶ್ರಯ ಯೋಜನೆ, ಜಿಲ್ಲಾಡಳಿತದ ಆದೇಶವನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದ ಮೊರೆ ಹೋಗಲಾಗಿತ್ತು. ಸುದೀರ್ಘ ವಿಚಾರಣೆಯ ನಂತರ ಉಚ್ಚ ನ್ಯಾಯಾಲಯ ಪುನಃ ದಾವಣಗೆರೆಯ ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯಕ್ಕೆ ಪ್ರಕರಣದ ವಿಚಾರಣೆಗೆ ಆದೇಶಿಸಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯ ಆರು ತಿಂಗಳಲ್ಲಿ ಅಕ್ರಮವಾಗಿ ಒತ್ತುವರಿ ಮಾಡಿದ ಜಾಗದಲ್ಲಿನ ಮನೆಗಳನ್ನು ತೆರವು ಮಾಡಿ, ಜಾಗವನ್ನು ಮಾಲೀಕರಿಗೆ ನೀಡುವಂತೆ ಆದೇಶ ನೀಡಿದೆ. ಅದರ ವಿರುದ್ಧ ಆಶ್ರಯ ಸಮಿತಿ, ಸಂಬಂಧಿತರು ನ್ಯಾಯಾಲಯದಲ್ಲಿ ಮತ್ತೆ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಆದರೆ ನ್ಯಾಯಾಲಯ ಈ ಬಗ್ಗೆ ಯಾವುದೇ ಆದೇಶ ನೀಡಿಲ್ಲ ಎಂದು ತಿಳಿಸಿದರು.

ಇನ್ನು ಇದರ ಮುಂದಿನ ಕ್ರಮಗಳ ಬಗ್ಗೆ ಮಾ. 5 ರಂದು ನ್ಯಾಯಾಲಯದ ಗಮನಕ್ಕೆ ತರುವಂತೆ ಆದೇಶ ನೀಡಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನ್ಯಾಯವಾದಿ ಸಂತೋಷ್ ಪಾವಟೆ ಇದ್ದರು.

# ಕಥಕ್ಕಳಿ ನೃತ್ಯಕ್ಕೆ 300 ವರ್ಷಗಳ ಇತಿಹಾಸ

ದಾವಣಗೆರೆ, ಫೆ. 23- ಅನೇಕ ನೃತ್ಯ ಪ್ರಕಾರಗಳಲ್ಲಿ ಒಂದಾದ ಕಥಕ್ಕಳಿ ನೃತ್ಯವು 300 ವರ್ಷಗಳ ಇತಿಹಾಸ ಹೊಂದಿದೆ ಎಂದು ಸುಮಾ ಬಾಲಸುಬ್ರಮಣ್ಯಮ್ ಹೇಳಿದರು.

ನಗರದ ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಸ್ಪಿಕ್ ಮ್ಯಾಕೆಯ ಮುಖ್ಯಸ್ಥ ಮಂಜುನಾಥ ರಂಗರಾಜು ಅವರ ನೇತೃತ್ವದಲ್ಲಿ ಶುಕ್ರವಾರ ನಡೆದ 'ಕಥಕ್ಕಳಿ ನೃತ್ಯ ವೈಭವ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಪಂಚದಲ್ಲೇ ಈ ನೃತ್ಯ ವಿಶೇಷತೆಯನ್ನು ಪಡೆದಿದೆ. ಮಕ್ಕಳು ನೃತ್ಯ ಕಲೆಯನ್ನು ಕಲಿತು ಮುಂದಿನ ಪೀಳಿಗೆಗೂ ನೃತ್ಯ ಮತ್ತು ಸಂಗೀತ ಕಲೆಯನ್ನು ಪರಿಚಯಿಸಬೇಕು ಎಂದು ಹೇಳಿದರು.

ಶಾಲೆಯ ಮುಖ್ಯಸ್ಥ ಮಂಜುನಾಥ ರಂಗರಾಜು ಮಾತನಾಡಿ, ದೇಶದಲ್ಲಿ ಪ್ರತಿ ರಾಜ್ಯ ತನ್ನದೆ ಆದ ಕಲಾ ಪರಪಂಪರೆಯನ್ನು ಹೊಂದಿದ್ದು, ಅಂತಹ ಪರಂಪರೆಯಲ್ಲಿ ಕೇರಳದ 'ಕಥಕ್ಕಳಿ' ನೃತ್ಯವು ಪ್ರಸಿದ್ಧಿಯಾಗಿದೆ ಎಂದರು.

ದಕ್ಷಿಣ ಭಾರತದ ಅನೇಕ ನೃತ್ಯ ಪ್ರಕಾರಗಳು ಸುಂದರವಾಗಿದ್ದು, ಅವುಗಳನ್ನು ಶಿಕ್ಷಣದ ಜತೆಗೆ ಕಲಿತು, ಉಳಿಸಿಬೇಕಿದೆ. ಮತ್ತು ಜಗತ್ತಿಗೆ ನಮ್ಮ ಕಲಾ ಪರಂಪರೆಯನ್ನು ಸಾರುವ ಕಾರ್ಯ ಮಾಡಬೇಕೆಂದು ಕರೆ ನೀಡಿದರು.

ಈ ವೇಳೆ ಕೇರಳದ ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ಕಲಾಮಂಡಲಮ್ ಬಾಲಸುಬ್ರಮಣ್ಯಮ್ ಕಥಕ್ಕಳಿ ನೃತ್ಯ ರೂಪಕ ಪ್ರದರ್ಶಿಸಿದರು. 'ಸೀತಾ ಸ್ವಯಂವರ' ಅಣಕು ಪ್ರದರ್ಶನವು ಎಲ್ಲರ ಗಮನ ಸೆಳೆಯಿತು.

ಶಾಲೆಯ ಪ್ರಾಚಾರ್ಯೆ ಜೆ.ಎಸ್. ವನಿತಾ, ಶೈಕ್ಷಣಿಕ ಮುಖ್ಯಸ್ಥ ಎಂ. ವಾಸಿಮ್ ಪಾಷಾ, ಪ್ರೌಢಶಾಲಾ ವಿಭಾಗದ ಪ್ರಭಾರಿ ಪಿ.ವಿ. ಪ್ರಭು, ಪ್ರಾಥಮಿಕ ವಿಭಾಗದ ಪ್ರಭಾರಿ ಶೀಬಾರಾಣಿ ಮತ್ತು ಶಾಲೆಯ ಸಿಬ್ಬಂದಿ ಇದ್ದರು.



# ಸಾಮಾಜಿಕ ಮಾಧ್ಯಮ ಖಾತೆ ನಿರ್ವಹಣೆ

**(1ನೇ ಪುಟದಿಂದ)** ರೇಡಿಯೋ ಕಾರ್ಯಕ್ರಮದಲ್ಲಿ ಬೊಜ್ಜಿನ ಸಮಸ್ಯೆ ಬಗ್ಗೆಯೂ ಪ್ರಸ್ತಾಪಿಸಿರುವ ಮೋದಿ, ಭಾರತ ಸ್ವಸ್ಥ ಹಾಗೂ ಆರೋಗ್ಯವಂತ ದೇಶವಾಗಲು ಶ್ರಮಿಸಬೇಕಿದೆ ಎಂದಿದ್ದಾರೆ.

ದೇಶದ ಪ್ರತಿ ಎಂಟರಲ್ಲಿ ಒಬ್ಬರು ಬೊಜ್ಜು ಸಮಸ್ಯೆಯಿಂದ ಬಳಲುತ್ತಿದ್ದಾರೆ. ಕಳೆದ ಕೆಲವು ವರ್ಷಗಳಲ್ಲಿ ಈ ಸಮಸ್ಯೆ ಎದುರಿಸುತ್ತಿರುವವರ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ. ಮಕ್ಕಳಲ್ಲಿ ಈ ಸಮಸ್ಯೆ ನಾಲ್ಕು ಪಟ್ಟು ಹೆಚ್ಚಾಗಿರುವುದು ಇನ್ನಷ್ಟು ಕಳವಳಕಾರಿ ಎಂದು ಪ್ರಧಾನಿ ಹೇಳಿದ್ದಾರೆ.

ಜನರು ತಮ್ಮ ಖಾದ್ಯ ತೈಲ ಸೇವನೆಯನ್ನು ಶೇ.10ರಷ್ಟು ಕಡಿಮೆ ಮಾಡಬೇಕು ಎಂದೂ ಮೋದಿ ಕರೆ ನೀಡಿದ್ದಾರೆ. ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಹಿನ್ನೆಲೆಯಲ್ಲಿ ಜನರು ಪ್ರಯೋಗಾಲಯ ಇಲ್ಲವೇ ತಾರಾಲಯಗಳಿಗೆ ಭೇಟಿ ನೀಡಬೇಕು. ಒಂದು ದಿನ ವಿಜ್ಞಾನಿಗಳ ಜೊತೆ ಕಳೆಯಬೇಕು ಎಂದು ಮೋದಿ ಕರೆ ನೀಡಿದ್ದಾರೆ.

# ಸ.ಶಾಲೆಗೆ ಹೊಳಪು ನೀಡಿದ ಕೃತಗ್ಯತಾ ಟ್ರಸ್ಟ್



ಮಲೇಬೆನ್ನೂರು, ಫೆ. 23 - ಉಕ್ಕಡಗಾತ್ರಿ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಕೃತಗ್ಯತಾ ಟ್ರಸ್ಟ್ 1 ಲಕ್ಷ ರೂ. ವೆಚ್ಚದಲ್ಲಿ ಸುಣ್ಣ-ಬಣ್ಣ ಬಳಿಸಿ ಗಮನ ಸೆಳೆದಿದೆ.

ಈ ವೇಳೆ ಮಾತನಾಡಿದ ಟ್ರಸ್ಟಿನ ಮುಖ್ಯಸ್ಥರಾದ ಅರುಣಾ ದಿವಾಕರ್ ಅವರು, ದುಸ್ಥಿತಿಯಲ್ಲಿರುವ ಶಾಲಾ ಪರಿಸರವನ್ನು ಅಭಿವೃದ್ಧಿ ಹಾಗೂ ಉನ್ನತೀಕರಣಗೊಳಿಸಿದಾಗ ಮಾತ್ರ ಶಿಕ್ಷಣದ ಸಬಲೀಕರಣ ಆಗಲಿದೆ ಎಂದು ಹೇಳಿದರು.

ಶಾಲೆಯ ಮುಖ್ಯ ಶಿಕ್ಷಕ ಮಹಾಂತಯ್ಯ ಚೋಗಚಿಕೊಪ್ಪ ಮಾತನಾಡಿ, ಈ ಟ್ರಸ್ಟಿನ ವತಿಯಿಂದ ಸರ್ಕಾರಿ ಶಾಲೆಯ ಮಕ್ಕಳಿಗೆ ಕಳೆದ 5 ವರ್ಷಗಳಿಂದ ನೋಟ್ ಪುಸ್ತಕ, ಬ್ಯಾಗ್, ಲೇಖನ ಸಾಮಗ್ರಿ ಹಾಗೂ ನಲಿ-ಕಲಿ ಮಕ್ಕಳಿಗೆ ಆಸನದ ವ್ಯವಸ್ಥೆ ಸೇರಿದಂತೆ ಹಲವು ಶಾಲೆಗಳಿಗೆ ಶೌಚಾಲಯವನ್ನೂ ನಿರ್ಮಿಸಿರುವ ಇವರ ಕಾರ್ಯ ಶ್ಲಾಘನೀಯವಾಗಿದೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಜಿ. ಚಂದ್ರಶೇಖರ್, ಗ್ರಾ.ಪಂ ಉಪಾಧ್ಯಕ್ಷ ಜಿಗಳಿ ಚಂದ್ರಗೌಡ, ಸದಸ್ಯ ಶಂಕ್ರಪ್ಪ ಕಮದೋಡ್, ಗ್ರಾಮಸ್ಥರಾದ ಸಿದ್ದಪ್ಪ ಪೂಜಾರ್, ನಾಗರಾಜ್ ಪೂಜಾರ್, ಎಸ್. ನಾಗರಾಜ್, ವಿವಿಧ ಶಾಲೆಯ ಶಿಕ್ಷಕರಾದ ಶಶಿಕುಮಾರ್ ಮರಡಿ ಕ್ಯಾಂಪ್, ಆನಂದ ಭೂತ ರೆಡ್ಡಿ, ಪ್ರವೀಣ್ ಕುಮಾರ್ ಸೇರಿದಂತೆ ಶಾಲೆಯ ಸಿಬ್ಬಂದಿ ಹಾಗೂ ಗ್ರಾಮಸ್ಥರು ಇದ್ದರು.

# ಧಾರ್ಮಿಕ ನಂಬಿಕೆಗಳ ಮೇಲೆ ದಾಳಿ

**(1ನೇ ಪುಟದಿಂದ)** ಹಾಗೂ ಸಂಸ್ಕೃತಿಯ ಮೇಲೆ ಅವರು ಕೆಸರೆರಚುವ ಉದ್ಧಟತನ ತೋರುತ್ತಾರೆ ಎಂದು ಮೋದಿ ಹೇಳಿದ್ದಾರೆ.

ಮಹಾಕುಂಭಮೇಳದ ಬಗ್ಗೆ ಮಾತನಾಡಿದ ಪ್ರಧಾನಿ ಮೋದಿ, ಸಫಾಯಿ ಕರ್ಮಚಾರಿಗಳು ಹಾಗೂ ಪೊಲೀಸ್ ಸಿಬ್ಬಂದಿ ಇದರ ಯಶಸ್ವಿಗಾಗಿ ಅಪಾರ ಶ್ರಮ ವಹಿಸಿದ್ದಾರೆ ಎಂದು ಹೇಳಿದರು.

ಸಾವಿರಾರು ವೈದ್ಯರು ಹಾಗೂ ಸ್ವಯಂಸೇವಕರು ಶ್ರದ್ಧೆಯಿಂದ ಇಲ್ಲಿ ಸೇವೆ ಮಾಡುತ್ತಿದ್ದಾರೆ. ಈ ಮಹಾ ಕುಂಭಕ್ಕೆ ಭೇಟಿ ನೀಡುತ್ತಿರುವವರು ಇವರ ಕಾರ್ಯವನ್ನು ಪ್ರಶಂಸಿಸುತ್ತಿದ್ದಾರೆ ಎಂದು ಪ್ರಧಾನಿ ತಿಳಿಸಿದರು.

# 2ಕ್ಕೆ ಸಾಮೂಹಿಕ ಸತ್ಯನಾರಾಯಣ ಪೂಜೆ

ದಾವಣಗೆರೆ, ಫೆ.18 - ದಾವಣಗೆರೆ, ಚಿತ್ರದುರ್ಗ ಜಿಲ್ಲಾ ಬಂಟರ ಸಂಘ ಮತ್ತು ದಾವಣಗೆರೆಯ ಕರಾವಳಿ ಮಿತ್ರ ಮಂಡಳಿ ಸಂಯುಕ್ತಾಶ್ರಯದಲ್ಲಿ ಮಾರ್ಚ್ 2ರ ಭಾನುವಾರ ಬೆಳಗ್ಗೆ ನಗರದ ಡಾ. ಶಾಮ ಸುಂದರ ಶೆಟ್ಟಿ ಬಂಟರ ಭವನದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಲಿದೆ. ಮಾಹಿತಿಗಾಗಿ 9945977433, 8746912345 ಸಂಪರ್ಕಿಸಿ.


**ಮನೆ ಬಾಡಿಗೆಗೆ ಇದೆ**
2 ಅಟ್ಯಾಚ್ಡ್ ಬೆಡ್ ರೂಂ, ವಿಶಾಲವಾದ ಹಾಲ್, ವಾಸ್ತು ಪ್ರಕಾರ ದೇವರಮನೆ, ಅಡುಗೆಮನೆ ಇದ್ದು, ಬೋರ್ ವೆಲ್ ಮತ್ತು ಕಾರ್ ಪಾರ್ಕಿಂಗ್ ಸೌಲಭ್ಯವಿರುವ ನೆಲ ಮಹಡಿ ಮನೆ ಬಾಡಿಗೆಗೆ ಇದೆ. ಮನೆ ವಿಳಾಸ: ನಂ.57/2008, 20ನೇ ಕ್ರಾಸ್ (ಬೈಪಾಸ್ ಸರ್ವೀಸ್ ರಸ್ತೆ ಪಕ್ಕದ ರಸ್ತೆ), ತರಳಬಾಳು ಬಡಾವಣೆ, ದಾವಣಗೆರೆ. ಸಂಪರ್ಕಿಸಿ:
73490 34256

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಮಹಡಿ ಮನೆ ಮಾರಾಟಕ್ಕಿದೆ**
ಹರಿಹರ ನಗರದ ಹರ್ಲಾಪುರ ಬಡಾವಣೆ, 1ನೇ ಮುಖ್ಯ ರಸ್ತೆ, 2ನೇ ಕ್ರಾಸ್‌ನಲ್ಲಿ 20x60 ಅಳತೆಯ ಆರ್‌ಸಿಸಿ ಕಟ್ಟಡದ ಮಹಡಿ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
89704 95290, 99862 04090

**ಮಾರಾಟಕ್ಕಿದೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ, ಡಾಲರ್ಸ್ ಕಾಲೋನಿ, ಕುಂದುವಾಡ, ಹೂಡಿಕೆ ಸೈಟುಗಳು ಮತ್ತು ಯರಗುಂಟೆಯಲ್ಲಿ ಹೂಡಿಕೆ ಸೈಟುಗಳು 30x40, 30x50, 40x60 ಎಲ್ಲಾ ಫ್ಲಾಟುಗಳು ದಾವಣಗೆರೆಯಲ್ಲಿವೆ.
097315 12365

**ಮನೆ ಮಾರಾಟಕ್ಕಿದೆ**
30x40 ಅಳತೆಯ ಗ್ರೌಂಡ್ ಫ್ಲೋರ್ 2 BHK, 1ನೇ ಮಹಡಿ 2 BHK, 2ನೇ ಮಹಡಿ ಸಿಂಗಲ್ ರೂಂ ಅಟ್ಯಾಚ್ ಬಾತ್ ರೂಂ ಮನೆ ಮಾರಾಟಕ್ಕಿದೆ. #1982/2, 6ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
9480693506, 9449851177

**ಬೇಕಾಗಿದ್ದಾರೆ**
ವೆಜ್ ಹೋಟೆಲ್‌ನಲ್ಲಿ ಅಡುಗೆ ಭಟ್ಟರು ಹಾಗೂ ಇತರೆ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
99011 60717

**ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜ್ ಹತ್ತಿರ 30x46 East, 30x40 West, 24x45 West, ವಿದ್ಯಾನಗರದಲ್ಲಿ 30x33 South
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಸೋಫಾ, ಕುಶನ್, ಕಿಟಕಿಗೆ ಫೈಬರ್ ವೆಲ್ಕ್ರೊ ಮೆಶ್ & ಅಲ್ಯುಮಿನಿಯಂ ಫ್ರೇಮ್ stainless steel ಸೊಳ್ಳೆಮೆಶ್ ಹಾಕಲಾಗುವುದು.
Swapna cushion work
ಮಹಾರಾಜ ಪೇಟೆ ದಾವಣಗೆರೆ.
98445- 81966

**ಬೇಕಾಗಿದ್ದಾರೆ**
ಹೋಟೇಲ್ ಉದ್ಯಮದಲ್ಲಿ ಅನುಭವ ಇರುವ ಮ್ಯಾನೇಜರ್ ಮತ್ತು ರೊಟ್ಟಿ ಮಾಡುವ ಮಹಿಳೆಯರು ಕ್ಲೀನಿಂಗ್ ಮಾಡಲು, ಸಪ್ಲೈ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
63635 43487

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 50x80 South, 30x50 East, 30x50 North, 30x50 West, 30x40 West.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ ಕೃಷಿಕೇಂದ್ರ ಹಿಂಭಾಗ 40x60 West, 30x54 North, 30x70 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಅಡಿಕೆ ತೋಟ ಮಾರಾಟಕ್ಕಿದೆ**
2 ಎಕರೆ 7 ಗುಂಟೆ ಇರುವ ಅಡಿಕೆ ತೋಟ ಮಾರಾಟಕ್ಕಿದೆ. ಜಗಳೂರು ರೋಡ್, ದಾವಣಗೆರೆಯಿಂದ 10 ಕಿ.ಮೀ ಹತ್ತಿರದಲ್ಲಿದೆ.
95130 15544

**ಸೈಟು ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು ಕಡ್ಲೇಬಾಳಿನ ಶ್ರೀ ಮಧ್ವಾಂಜನೇಯ ದೇವಸ್ಥಾನದ ಎದುರು 70x100 ಅಳತೆಯ ಕಾರ್ನರ್ ಸೈಟು (ನಂ.192) ಮಾರಾಟಕ್ಕಿದೆ. ಸಂಪರ್ಕಿಸಿ :
ಪವನ್ ಕುಮಾರ್ ಕೆ.ಎಂ
98867 81258, 86600 36108

**ಡ್ರೈವರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
**ಬಾಡಿಗೆಗೆ ದೊರೆಯುತ್ತದೆ**
ಮಾರುತಿ ಸ್ಲೀಪರ್ ಕ್ಯಾರಿ ಮತ್ತು ಅಶೋಕ್ ಲೇಲ್ಯಾಂಡ್ ಕಂಟೈನರ್ ಗಾಡಿಗಳೂ ದಿನದ, ವಾರ, ತಿಂಗಳ ಲೆಕ್ಕದಲ್ಲಿ ಬಾಡಿಗೆಗೆ ದೊರೆಯುತ್ತವೆ.
87927 45071

**ಬಿಟಿ ಗಲ್ಲಿಯಲ್ಲಿ ಮಳಿಗೆ ಬಾಡಿಗೆಗೆ ಇವೆ**
ಬ್ಯಾಡಗಿ ಪುಟ್ಟಪ್ಪ ಕಾಂಪ್ಲೆಕ್ಸ್‌ನಲ್ಲಿ 12x13 ಅಳತೆಯಲ್ಲಿ ಮಳಿಗೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
ಬಿ.ಪಿ. ವೀರಣ್ಣ 94482 48393
ಬಿ.ಪಿ. ಜಯರಾಜ್ 94492 24121

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ಆಟೋ ಡ್ರೈವರ್, ಟಾಟಾ ACE ಡ್ರೈವರ್ ಮತ್ತು ಅಂಗಡಿಯ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ
ಶಿವಪ್ಪ ಸರ್ಕಲ್, ದಾವಣಗೆರೆ.
96860 22969

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**FOR RENT**
Independent duplex house with four bed rooms attached bath & house with 2 bed rooms having all facilities 2nd floor at MCC B Block, 3rd main, 6th cross behind gundi School.
M : 99008 33644

**JOB VACANCIES**
For details visit this instagram profile.
@ VAHIN_GROUPS
93805 83672

**ಸೈಟು ಮತ್ತು ಮನೆ ಮಾರಾಟಕ್ಕಿದೆ**
40x60 ಪೂರ್ವ ಎಂಸಿಸಿ 'ಬಿ' ಸೈಟ್
40x50 ಉತ್ತರ ಎಂಸಿಸಿ 'ಬಿ' ಮನೆ
40x60 ಪಶ್ಚಿಮ ಎಂಸಿಸಿ 'ಬಿ' ಮನೆ
ಏಜೆಂಟರು
81231 15137

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಪಾಳ್ಯದಲ್ಲಿ ಕೆಲಸ ಮಾಡಲು ಸೂಪರ್ ವೈಸರ್ ಮತ್ತು ಹುಡುಗರು ಬೇಕಾಗಿದ್ದಾರೆ.
63639 54459

**ಮನೆ ಬಾಡಿಗೆಗೆ**
ವಿನಾಯಕ ಬಡಾವಣೆ 2ನೇ ಕ್ರಾಸ್‌ನಲ್ಲಿ ಮೊದಲನೆ ಮಹಡಿಯಲ್ಲಿ 2BHK ಸುಸಜ್ಜಿತವಾದ ಮನೆ ಬಾಡಿಗೆ ಇದೆ. (Apartment)
94498 30566

**ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಆಕರ್ಷಕ ಸಂಬಳವಿರುತ್ತದೆ.
81056 99985
89715 04492

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಆಯಿಲ್ ಮಸಾಜ್ ಮಾಡಲಾಗುತ್ತದೆ.
85508 36642

**ಹೊಸ ಲೇಔಟ್ ಸೈಟ್‌ಗಳು**
1950 Rs. Sqft ರಿಂದ 2500 ರ ವರೆಗೂ ದೊಡ್ಡ ಬಾತಿ ಹತ್ತಿರ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
81235 29544

**ಉದ್ಯೋಗಾವಕಾಶ**
ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್‌ನಲ್ಲಿ (ಹೋಂ ನರ್ಸಿಂಗ್)
ವಯೋವೃದ್ದರನ್ನು ನೋಡಿಕೊಳ್ಳಲು ಯುವತಿಯರು, ಯುವಕರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಉಚಿತ ಊಟ, ವಸತಿ. ಸಂಬಳ 18,000 ರಿಂದ 25,000 ರೂ.ವರೆಗೆ ವಿದ್ಯಾರ್ಹತೆ : 7th, 10th, PUC, ANM, GNM
76193 54274

**ಸೈಟುಗಳು ಮಾರಾಟಕ್ಕಿವೆ**
ಯರಗುಂಟೆಯ ಶಿವಪುರದಲ್ಲಿ ಎಲ್ಲಾ ಅಳತೆಯ ಫೈನಲ್ ಅಪ್ರೂವಲ್ ಆದ ಸೈಟುಗಳು ಮಾರಾಟಕ್ಕಿವೆ.
94838 62779

**ಕೆಲಸಕ್ಕೆ ಬೇಕಾಗಿದ್ದಾರೆ**
ಪಾರ್ಟ್ ಟೈಂ/ಫುಲ್ ಟೈಂ
1) ವರ್ಕ್ ಫ್ರಮ್ ಹೋಮ್ (ಡಾಟಾ ಎಂಟ್ರಿ ವರ್ಕ್)
2) ಆಫೀಸ್ ವರ್ಕ್ (ಟೆಲಿಕಾಲಿಂಗ್)
ವೇತನ : 8000-15,000
ವಿದ್ಯಾರ್ಹತೆ : SSLC Pass/fail
82175 89043

**ಆಫೀಸ್ ಬಾಡಿಗೆಗಿದೆ**
ಹರಿಹರ, ಭಾರತ್ ಆಯಿಲ್ ಮಿಲ್, ಕಾಂಪೌಂಡ್‌ನಲ್ಲಿರುವ ಜಯಶ್ರೀ ಟಾಕೀಸ್ ಎದುರಿನ ರೋಡ್‌ನಲ್ಲಿರುವ, ಮನೆಯನ್ನು ಆಫೀಸ್‌ಗೆ ಮಾತ್ರ ಬಾಡಿಗೆ ಕೊಡಲಾಗುವುದು.
ಹೆಚ್. ಲೋಕೇಶ್
97392 84466

**ARTIGIFICIAL INTELLIGENCE (AI)**
Age group 11 years to 18 years, **Bruit Academy**
Nijalingappa Badavane.
97390 66956

**RENT**
Shop For Rent For Commercial Purpoce In P.J.Ext, Chetana Hotel Road, # 431/1, 4th Main, 7th Cross, Davanagere.
Size 12 X10 feet.
Contact. 94485 90794

**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
99640 78484
95906 15776

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**AdBlue / DEF**
available with Best Quality & Price for All BS6 Diesel Commercial & Passanger Vehicles
Visit: **Best Lubricants**
Opp. to New Pvt Bus Stand PB Road, Davangere.
73380 33337

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ನಮ್ಮ ದಾವಣಗೆರೆ ಫೌಂಡೇಶನ್ 'ಜ್ಞಾನ ನಿಧಿ' ಕಾರ್ಯಕ್ರಮ



ದಾವಣಗೆರೆ, ಫೆ. 23- ನಮ್ಮ ದಾವಣಗೆರೆ ಫೌಂಡೇಷನ್ ವತಿಯಿಂದ, ಸಂಘದ ಸಂಸ್ಥಾಪಕ ಸದಸ್ಯರೂ, ಮಹಾನಗರ ಪಾಲಿಕೆ ಮಾಜಿ ವಿಪಕ್ಷ ನಾಯಕರೂ ಆದ ಕೆ. ಪ್ರಸನ್ನ ಕುಮಾರ್ ಅವರ ಜನ್ಮದಿನದ ಅಂಗವಾಗಿ ಪೌರ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ನೀಡುವ ಸದುದ್ದೇಶದಿಂದ 'ಜ್ಞಾನ ನಿಧಿ' ಕಾರ್ಯಕ್ರಮವನ್ನು ನಡೆಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರು ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಕೆ. ಪ್ರಸನ್ನಕುಮಾರ್ ಅವರ ಕಾರ್ಯಕ್ಷಮತೆ, ನಾಯಕತ್ವದ ಗುಣ, ಜನಪರ ಕಾಳಜಿ ಬಗ್ಗೆ ಶ್ಲಾಘಿಸಿದರು.

ನಮ್ಮ ದಾವಣಗೆರೆ ಫೌಂಡೇಷನ್ ಸಂಘ ಕಳೆದ ಎರಡು ವರ್ಷಗಳಿಂದ ನಡೆದು ಬಂದ ಹಾದಿ, ಈ ಸಂಘವನ್ನು ಸ್ಥಾಪಿಸಿದ ಉದ್ದೇಶದ ಬಗ್ಗೆ ಪವನ್ ರೇವಣಕರ್ ಮಾತನಾಡಿದರು.

ನಂತರ ಮೊದಲ ಹಂತದಲ್ಲಿ ಸುಮಾರು 20 ಮಕ್ಕಳಿಗೆ ಪ್ರೋತ್ಸಾಹ ಧನದ ಚೆಕ್ ಮತ್ತು ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು,

ಬಿಜೆಪಿ ಮುಖಂಡರಾದ ಅಣಬೇರು ಜೀವನಮೂರ್ತಿ, ಹೆಚ್.ಎನ್ ಶಿವಕುಮಾರ್, ಕೋಳೇನಹಳ್ಳಿ ಬಿ.ಎಂ. ಸತೀಶ್, ಪಿ.ಎಸ್. ಜಯಣ್ಣ, ಪಾಲಿಕೆ ಸದಸ್ಯರಾದ ಆರ್.ಶಿವಾನಂದ್, ಯುವ ಮುಖಂಡರಾದ ವಿನಯ್ ದಿಳ್ಯಪ್ಪ, ರೇಖಾ ಸುರೇಶ್ ಗುಂಡಗಾಳೆ, ಗೀತಾ ದಿಳ್ಯಪ್ಪರ, ಗೌರಮ್ಮ ಗಿರೀಶ್, ಉಮಾ ಪ್ರಕಾಶ್, ಕುಂಬಾರ್ ನಾಗಣ್ಣ, ಗೋಣೆಪ್ಪ, ನರೇಂದ್ರ ಕುಮಾರ್, ಶ್ರೀಮತಿ ಹೆಗ್ಗಪ್ಪ ಮತ್ತಿತರರು ಭಾಗವಹಿಸಿದ್ದರು.

ಶಾಸಕ ಬಿ.ಪಿ. ಹರೀಶ್ ಅವರು ಪ್ರಸನ್ನ ಕುಮಾರ್ ಅವರಿಗೆ ಶುಭ ಹಾರೈಸಿದರು.

ಸುರೇಶ್, ಪದ್ಮನಾಭ ಶೆಟ್ರು, ಮುಕುಂದಪ್ಪ, ಪಾಟೀಲ್, ಸಂಗನ ಗೌಡ್ರು ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ವಿದ್ಯಾಸಾಗರ ಶಾಲೆಯಲ್ಲಿ ಹುತಾತ್ಮರ ದಿನಾಚರಣೆ



ದಾವಣಗೆರೆ, ಫೆ. 23 - ನಗರದ ವಿದ್ಯಾಸಾಗರ ಶಾಲೆಯಲ್ಲಿ ಈಚೆಗೆ ಹುತಾತ್ಮರ ದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಎನ್‌ಸಿಸಿ ಕಮಾಂಡಿಂಗ್ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಭಾರತೀಯ ಸೇನೆಯ ನಾಯಿಬ್ ಸುಬೇದಾರ್, ಮಹೇಂದರ್ ಹತ್ಲೆ ಮತ್ತು ಹವಾಲ್ದಾರ್ ಜಿ.ಬಿ. ಪ್ರದೀಪ್ ಅವರುಗಳನ್ನು ಶಾಲೆಯ ಅಧ್ಯಕ್ಷ ಆರ್. ಭರತ್ ಸಿಂಗ್ ಸನ್ಮಾನಿಸಿದರು.

# ಹೋರಾಟಗಾರರ ಕೆಚ್ಚನ್ನು ಮಕ್ಕಳಲ್ಲಿ ಮೂಡಿಸಬೇಕು



**ಕೆ.ಟಿ.ಜೆ. ನಗರದ ಕುವೆಂಪು ಕನ್ನಡ ಯುವಕರ ಸಂಘದ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಹಿಂದು ಜಾಗರಣಾ ವೇದಿಕೆಯ ಯುವ ಮುಖಂಡ ಸತೀಶ್ ಪೂಜಾರಿ ಕರೆ**

ದಾವಣಗೆರೆ, ಫೆ. 23 - ಛತ್ರಪತಿ ಶಿವಾಜಿ ಮಹಾರಾಜರು, ಛತ್ರಪತಿ ಸಾಂಬಾಜಿ ಮಹಾರಾಜರ ನೈಜ ಇತಿಹಾಸವನ್ನು ಇಂದಿನ ಯುವ ಪೀಳಿಗೆಗೆ ತಿಳಿಸುವ ಮೂಲಕ ಇಂತಹ ಮಹಾನ್ ದೇಶಪ್ರೇಮಿಗಳು, ಹೋರಾಟಗಾರರ ಕೆಚ್ಚನ್ನು ಮಕ್ಕಳಲ್ಲಿ ಮೂಡಿಸಬೇಕು ಎಂದು ಹಿಂದು ಜಾಗರಣಾ ವೇದಿಕೆಯ ಯುವ ಮುಖಂಡ ಸತೀಶ್ ಪೂಜಾರಿ ಕರೆ ನೀಡಿದರು.

ಇಲ್ಲಿನ ಕೆ.ಟಿ.ಜೆ. ನಗರ 12ನೇ ಕ್ರಾಸ್‌ನ ಹಳೆ ಜಿಲ್ಲಾ ಖಜಾನೆ ಪಕ್ಕ ಕುವೆಂಪು ಕನ್ನಡ ಯುವಕರ ಸಂಘ ನಿನ್ನೆ ಹಮ್ಮಿಕೊಂಡಿದ್ದ ಛತ್ರಪತಿ ಶಿವಾಜಿ ಮಹಾರಾಜರ 395ನೇ ಜಯಂತ್ಯೋತ್ಸವದ ಅಂಗವಾಗಿ ರಕ್ತದಾನ ಶಿಬಿರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಹಿಂದೂ ಧರ್ಮದ ರಕ್ಷಣೆ, ಹಿಂದೂಗಳು, ಗೋವುಗಳು, ಹಿಂದುತ್ವದ ರಕ್ಷಣೆಗಾಗಿ ಸಮಸ್ತ ಹಿಂದೂ ಸಮಾಜವನ್ನು ಒಗ್ಗೂಡಿಸಿದ ಶ್ರೇಯಸ್ಸು ಛತ್ರಪತಿ ಶಿವಾಜಿ ಮಹಾರಾಜರಿಗೆ ಸಲ್ಲುತ್ತದೆ ಎಂದು ಹೇಳಿದರು.

ಇಡೀ ವಿಶ್ವವೇ ಮೆಚ್ಚುವಂತಹ ಅಪ್ರತಿಮ ಹೋರಾಟಗಾರರಾದ ಶಿವಾಜಿ ಮತ್ತು ಸಾಂಬಾಜಿ ಮಹಾರಾಜರ ಕೊಡುಗೆ, ತ್ಯಾಗ, ಬಲಿದಾನವನ್ನು ನಾವ್ಯಾರೂ ಮರೆಯಬಾರದು. ವಿದೇಶೀಯರು ಸಹ ಛತ್ರಪತಿ ಶಿವಾಜಿ ಮಹಾರಾಜರನ್ನು ಸ್ಫೂರ್ತಿಯಾಗಿ ಸ್ವೀಕರಿಸಿದ್ದಾರೆ. ಚಾಣಾಕ್ಷಮತಿ ಯಾಗಿದ್ದ ಶಿವಾಜಿ ಮಹಾರಾಜರು ತಮ್ಮ ತಾಯಿಯಿಂದ ದೇಶಾಭಿಮಾನಿ, ಧರ್ಮನಿಷ್ಠೆಯನ್ನು ಮೈಗೂಡಿಸಿಕೊಂಡವರು. ಪರಸ್ತ್ರೀಯರನ್ನು ತಾಯಿಯಂತೆ ಗೌರವಿಸುತ್ತಿದ್ದವರು, ಹಿಂದೂ ಹೃದಯ ಸಾಮ್ರಾಟ ಛತ್ರಪತಿ ಶಿವಾಜಿ ಮಹಾರಾಜರು ಎಂದು ಅವರು ತಿಳಿಸಿದರು.

ಒಂದು ಕಡೆ ಮೊಘಲ್ ದೊರೆ ಔರಂಗಜೇಬ, ಮತ್ತೊಂದು ಕಡೆ ವಿಜಯಪುರದ ಆದಿಲ್ ಶಾಹಿ ವಂಶ ಹೀಗೆ ಜೀವನದುದ್ದಕ್ಕೂ ಶತ್ರುಗಳ ವಿರುದ್ಧ ಹೋರಾಡುವುದರಲ್ಲೇ ಜೀವನ ಕಳೆದವರು ಛತ್ರಪತಿ ಶಿವಾಜಿ ಮಹಾರಾಜರು. ತಂದೆಯ ಹೋರಾಟ, ಕಿಚ್ಚು, ಚಾಣಾಕ್ಷತವನ್ನು ಬಾಲ್ಯದಿಂದಲೂ ನೋಡಿಕೊಂಡೇ ಬೆಳೆದ ಛತ್ರಪತಿ ಹಿರಿಯ ಪುತ್ರ ಸಾಂಬಾಜಿ ಮಹಾರಾಜ್ ಸಹ ಮೊಗಲ್ ದೊರೆ ಔರಂಗಜೇಬ್‌ಗೆ ಸಿಂಹಸ್ವಪ್ನವಾಗಿದ್ದವರು. ಕಡೆಗೆ ಔರಂಗಜೇಬನ ಮತಾಂತರದ ಆಮಿಷ ತಿರಸ್ಕರಿಸಿ, ಸುಮಾರು 40 ದಿನ ಮೊಘಲರ ದೊರೆಯ ವಿಕೃತತೆ, ಪೈಶಾಚಿಕ ವರ್ತನೆಯಿಂದ ತೀವ್ರ ನೋವುಂಡರೂ ಧರ್ಮ ಬಿಡದ ಸಿಂಹದ ಮರಿ ಸಾಂಬಾಜಿ ಮಹಾರಾಜರು ಎಂದು ಅವರು ಹೇಳಿದರು.

ಛತ್ರಪತಿ ಕುಟುಂಬಕ್ಕೆ, ಕರ್ನಾಟಕಕ್ಕೂ ಅವಿನಾಭಾವ ಸಂಬಂಧವಿದೆ. ಶಿವಾಜಿಯವರ ತಂದೆ ಷಹಾಜಿ ರಾಜೇಯವರ ಸಮಾಧಿ ನಮ್ಮದೇ ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು ಹೊದಿಗೆರೆ ಗ್ರಾಮದಲ್ಲಿದೆ. ಮಹಾರಾಷ್ಟ್ರದ ಮನೆ ಮಾತಾದ ಶಿವಾಜಿ-ಸಾಂಬಾಜಿ ಮಹಾರಾಜರ ಹಿರಿಯರ ಸಮಾಧಿ ನಮ್ಮ ಜಿಲ್ಲೆಯಲ್ಲಿರುವುದು ಅಭಿಮಾನದ ಸಂಗತಿ ಯಾಗಿದೆ. ಇಂತಹ ಮಹಾನ್ ಕೆಚ್ಚೆದೆಯ ಹಿಂದು ಸ್ವರಾಜ್ಯ ಸ್ಥಾಪಕರು, ಧರ್ಮ ರಕ್ಷಕರ ಬಗ್ಗೆ ನಮ್ಮ ಮಕ್ಕಳು, ಯುವ ಪೀಳಿಗೆಗೆ ತಿಳಿಸುವ ಕೆಲಸ ಆಗಬೇಕು ಎಂದು ಸತೀಶ್ ಪೂಜಾರಿ ಮನವಿ ಮಾಡಿದರು.

ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಕೆ.ಜಿ. ಯಲ್ಲಪ್ಪ ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರ ತಂದೆ ಷಹಾಜಿ ಪೂರ್ವಿಕ ಬೆಳ್ಳಿಯಪ್ಪ ಕನ್ನಡಿಗರು. ಗದಗ ಜಿಲ್ಲೆಯ ಸೊರಟೂರು ಮೂಲ ದವರು. ಬರ ಹಿನ್ನೆಲೆಯಲ್ಲಿ ಬೆಳ್ಳಿಯಪ್ಪ ಮಹಾರಾಷ್ಟ್ರಕ್ಕೆ ತೆರಳುತ್ತಾರೆ. ಅಲ್ಲಿಂದ ನಾಲ್ಕನೇ ತಲೆಮಾರಿನವರೇ ಶಿವಾಜಿ ಮಹಾರಾಜರು. ಶಿವಾಜಿ ಮಹಾರಾಜರು ಕೇವಲ ಎಲ್ಲಾ ಜಾತಿ, ಧರ್ಮೀಯರ ಬಗ್ಗೆ ಸಹಾನುಭೂತಿ ಹೊಂದಿದ್ದರು. ಶಿವಾಜಿ ಮಹಾರಾಜರ ಖಾಸಾ ಪಡೆಯಲ್ಲಿ ಪಠಾಣರೂ ಇದ್ದರು ಎಂದರು.

ಕುವೆಂಪು ಕನ್ನಡ ಸಂಘದ ಮಂಜುನಾಥ ರಾವ್ ಜಾಧವ್, ಅರಣಿ ತಿಮ್ಮಣ್ಣ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಎಸ್.ಬಡದಾಳ್, ವೀರಪ್ಪ ಸಾವಂತ್, ಆನಂದಪ್ಪ ಕುರಿಯವರ್, ಭರಣಿ ಹೊಟೆಲ್ ಮಾಲೀಕ ಪರಶುರಾಮರಾವ್ ಸಾಳಂಕೆ, ರವೀಂದ್ರನಾಥ ಡಿ.ಅವತಾಡೆ, ಬಾಬುರಾವ್ ಡಿ. ಅವತಾಡೆ, ವಕೀಲ ಶಂಕರರಾವ್ ಎಂ.ಜಾಧವ್, ಲಕ್ಷ್ಮಿಬಾಯಿ ಚಂದ್ರ ಶೇಖರ, ಅನ್ನಪೂರ್ಣ ರವೀಂದ್ರನಾಥ, ರೇಖಾ ಬಾಬುರಾವ್, ಭೂಮಿಕಾ ಬಿ.ಅವತಾಡೆ, ರಾಘವೇಂದ್ರ ಸಿ. ಕಂಚಿಕೇರಿ, ಸೌಮ್ಯ ರಾಘವೇಂದ್ರ, ಜಗದೀಶ ಕುಮಾರ ಪಿಸೆ, ಸಿದ್ದೇಶ, ಅಣ್ಣೇಶ ರಾವ್, ಶ್ರೀನಿವಾಸ ಕಲ್ಪತರು, ಶ್ರೀಧರ್ ರಾವ್ ಅವತಾಡೆ, ವಿಕಾಸ್ ಈ.ಇಟಗಿ, ವೆಂಕಟೇಶ ಲಲ್ಯಾ, ಜೆ.ಪಿ. ದೀಪಕ್, ಬಿ.ಟಿ.ಲೋಕೇಶ, ಆಟೋ ಬಸವರಾಜ, ಧರ್ಮರಾಜ, ನಾಗೇಶ, ಬಿ.ಮಂಜುನಾಥ ಇತರರು ಇದ್ದರು.

# ಬಿ.ವೈ. ವಿಜಯೇಂದ್ರರ ನೇತೃತ್ವದಲ್ಲೇ ಪಂಚಾಯ್ತಿ ಚುನಾವಣೆ ನಡೆಯಲಿವೆ



ದಾವಣಗೆರೆ, ಫೆ.23- ಮುಂಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ವಿಧಾನಸಭಾ ಚುನಾವಣೆಗಳು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿಯೇ ನಡೆಯಲಿವೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಜಯೇಂದ್ರ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಮುಂದುವರೆಯುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದು ಹೇಳಿದರು.

ರಾಷ್ಟ್ರೀಯ ನಾಯಕರಿಗೆ ವಿಜಯೇಂದ್ರ ಅವರ ಮೇಲೆ ವಿಶ್ವಾಸವಿದೆ. ಅವರ ನಾಯಕತ್ವದ ಬಗೆಗೆ ಆಕ್ಷೇಪ ಹೊಂದಿರುವ ಭಿನ್ನಮತೀಯರು ಹೈಕಮಾಂಡ್ ಸಂಪರ್ಕಿಸುವುದು ಒಳಿತು. ಹಾದಿ-ಬೀದಿಯಲ್ಲಿ ನಾಯಕರನ್ನು ಟೀಕೆ ಮಾಡುವುದರಿಂದ ಪಕ್ಷಕ್ಕೆ ಹಾನಿಯಾಗುತ್ತದೆ ಎಂದು ಹೇಳಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಒಬ್ಬ ಭ್ರಷ್ಟ ರಾಜಕಾರಣಿ. ರಾಜಕಾರಣಕ್ಕೆ ಬರುವುದಕ್ಕೂ ಮುನ್ನ ಅವರ ಆಸ್ತಿ ಎಷ್ಟಿತ್ತು ಎಂಬುದು ಗೊತ್ತಿದೆ. ಸ್ವಕ್ಷೇತ್ರ ಬಬಲೇಶ್ವರದಲ್ಲಿ ಚುನಾವಣೆಗೆ ಸ್ಪರ್ಧೆ ಮಾಡುವ ಆಸಕ್ತಿಯನ್ನು ಅವರು ಎಂದಿಗೂ ತೋರಿಲ್ಲ. ಕಾಂಗ್ರೆಸ್‌ನ ಪ್ರಭಾವಿ ನಾಯಕರೊಂದಿಗೆ ಅವರು ಹೊಂದಾಣಿಕೆ ಮಾಡಿಕೊಂಡಿಲ್ಲವೇ ? ಎಂದು ಪ್ರಶ್ನಿಸಿದರು. ಮಾಜಿ ಸಚಿವ ಕುಮಾರ ಬಂಗಾರಪ್ಪ ಕಾಂಗ್ರೆಸ್‌ನಲ್ಲಿ ಅನಾಥ ಶಿಶುವಾಗಿದ್ದರು. ಚುನಾವಣೆಯಲ್ಲಿ ಸೋಲು ಕಂಡಿದ್ದ ಅವರಿಗೆ ರಾಜಕೀಯ ಪುನರ್ಜನ್ಮ ನೀಡಿದ್ದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ. ಪಕ್ಷದ ನಾಯಕರ ವಿರುದ್ಧ ಟೀಕೆ ಮಾಡುವುದನ್ನು ಬಿಟ್ಟು ಕಾಂಗ್ರೆಸ್ ವಿರುದ್ಧ ಹೋರಾಟ ಮಾಡಲಿ ಎಂದು ಹೇಳಿದರು.

# ಭ್ರಷ್ಟಾಚಾರ ತಡೆ ಕಾಯ್ದೆಯ ಪ್ರತಿಯೊಂದು ಪ್ರಕರಣದ ಪ್ರಾಥಮಿಕ ವಿಚಾರಣೆ ಕಡ್ಡಾಯವಲ್ಲ : ಸುಪ್ರೀಂ ಕೋರ್ಟ್

ನವದೆಹಲಿ, ಫೆ. 23 - ಭ್ರಷ್ಟಾಚಾರ ತಡೆ ಕಾಯ್ದೆಯಡಿ ದಾಖಲಾಗುವ ಪ್ರತಿಯೊಂದು ಪ್ರಕರಣದ ಪ್ರಾಥಮಿಕ ತನಿಖೆ ನಡೆಸುವುದು ಕಡ್ಡಾಯವಲ್ಲ. ಈ ರೀತಿ ತನಿಖೆ ನಡೆಸಬೇಕು ಎಂಬುದು ಆರೋಪಿಯ ಹಕ್ಕಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಕೆಲ ರೀತಿಯ ಪ್ರಕರಣಗಳಲ್ಲಿ ಪ್ರಾಥಮಿಕ ತನಿಖೆ ಅಪೇಕ್ಷಿತವಾಗಿದೆ. ಭ್ರಷ್ಟಾಚಾರ ತಡೆ ಕಾಯ್ದೆಯೂ ಸಹ ಇಂತಹ ವರ್ಗದಲ್ಲಿ ಬರುತ್ತದೆ. ಆದರೆ ಅಪರಾಧಿಕ ಪ್ರಕರಣ ದಾಖಲಿಸುವಾಗ ಪ್ರಾಥಮಿಕ ತನಿಖೆ ಕಡ್ಡಾಯವಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ನಮ್ಮ ಹೋರಾಟ ಕ್ರೆಡಿಟ್ ಪಡೆಯಲು ಅಲ್ಲ



**4 ಕ್ಷೇತ್ರಗಳಲ್ಲಿಯೂ ಒತ್ತಡ**

ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡುವಂತೆ ನಾಲ್ಕು ಕ್ಷೇತ್ರಗಳಿಂದಲೂ ಒತ್ತಡ ಇದೆ. ಮುಂದಿನ ದಿನಗಳಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ. ಹೊನ್ನಾಳಿ, ಹರಿಹರ, ದಾವಣಗೆರೆ ಉತ್ತರ ಹಾಗೂ ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡಲು ಜನರು ಕೇಳಿಕೊಳ್ಳುತ್ತಿದ್ದಾರೆ. ಕ್ಷೇತ್ರದ ಬಗ್ಗೆ ಯಾವುದೇ ನಿರ್ಧಾರ ಈವರೆಗೂ ತೆಗೆದುಕೊಂಡಿಲ್ಲ ಎಂದು ಜಿ. ಬಿ. ವಿನಯ್ ಕುಮಾರ್ ಸ್ಪಷ್ಟನೆ ನೀಡಿದರು.

ದಾವಣಗೆರೆ, ಫೆ. 23 - ನಮ್ಮ ಹೋರಾಟ ಯಾವುದೇ ಕ್ರೆಡಿಟ್ ಪಡೆಯಲು ಅಲ್ಲ. ತಾಳಿದವನು ಬಾಳಿಯಾನು ಎಂಬಂತೆ ನಿಧಾನವಾದರೂ ಮುಂದೊಂದು ದಿನ ದೊಡ್ಡ ಜವಾಬ್ದಾರಿ ಸಿಗುತ್ತದೆ ಎಂಬ ದೃಢವಾದ ನಂಬಿಕೆ ನನ್ನದು ಎಂದು ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷ ಜಿ.ಬಿ. ವಿನಯ್ ಕುಮಾರ್ ಅಭಿಪ್ರಾಯಪಟ್ಟರು.

ನಗರದ ಎಸ್. ಎಸ್. ಬಡಾವಣೆ ಎ ಬ್ಲಾಕ್ 10 ನೇ ಕ್ರಾಸ್ ನಲ್ಲಿರುವ ಸ್ವಾಭಿಮಾನಿ ಬಳಗದ ಗೃಹ ಕಚೇರಿಯಲ್ಲಿ ಇಂದು ಆಯೋಜಿಸಿದ್ದ 'ಸಂವಿಧಾನವೇ ನಮ್ಮ ಸಿದ್ಧಾಂತ' ಸಂಘಟನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ಭೇಟಿ ನೀಡಿ, ಸ್ವಾಭಿಮಾನಿ ಕ್ರಾಂತಿ ಮೊಳಗಿಸಲಾಗುತ್ತದೆ. ಕೃಷಿ, ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ವಿಚಾರಗಳನ್ನು ಜನರ ಮುಂದಿಡಲಾಗುವುದು ಎಂದು ಹೇಳಿದರು.

15 ರಿಂದ 20 ದಿನಗಳ ಕಾಲ ಕಲ್ಯಾಣ ಕರ್ನಾಟಕದಲ್ಲಿ ವಾಸ್ತವ್ಯ ಮಾಡಿ, ಪ್ರತಿ ತಾಲ್ಲೂಕಿಗೂ ಭೇಟಿ ನೀಡಿ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಪ್ರಜ್ಞೆ ಮೂಡಿಸುವ ಪ್ರಯತ್ನ ನಡೆಸುತ್ತೇವೆ ಎಂದರು.

ಭಯ ಮುಕ್ತ ವಾತಾವರಣ ನಿರ್ಮಾಣ ಆದಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಸಿಕ್ಕಂತೆ. ದಾಸ್ಯ, ಗುಲಾಮಗಿರಿಯತ್ತ ಸಾಗಿದರೆ ಶಕ್ತಿ ಕುಂಠಿತವಾಗುತ್ತದೆ. ರಾಜಕಾರಣಕ್ಕೆ ಹೆದರಿ, ಸಣ್ಣಪುಟ್ಟ ಹುದ್ದೆ ಹೋಗುತ್ತವೆ ಎಂಬ ಕಾರಣಕ್ಕೆ ದಾಸರಾಗಿ ಕೆಲವರು ಬದುಕುತ್ತಿದ್ದಾರೆ. ಅವರಿನ್ನೂ ಭಯದಿಂದ ಹೊರಗೆ ಬಂದಿಲ್ಲ. ಭಯದಿಂದ ಜನರನ್ನು ಹೊರ ತರಲು ಸಾಧ್ಯವಿರುವುದು ಶಿಕ್ಷಣದಿಂದ ಮಾತ್ರ ಎಂದರು.

ಸರ್ಕಾರಿ ಶಾಲೆಗಳಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳೂ ಇಲ್ಲ, ಗ್ರಂಥಾಲಯ ಇದ್ದರೂ ಕಾರ್ಯಾಚರಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮರಾಠಿಗರು ಕಲ್ಲು ಹೊಡೆದಾಗ ಕನ್ನಡ ಜಾಗೃತವಾಗುತ್ತದೆ. ಆಗ ಭಾವಾನಾತ್ಮಕವಾಗಿ ಹೋರಾಟಕ್ಕೆ ಬಳಸಿಕೊಳ್ಳಲಾಗುತ್ತದೆ. ಆದರೆ, ಕನ್ನಡ ಉಳಿಯಬೇಕು, ಬೆಳೆಯಬೇಕು ಎಂದರೆ ಸರ್ಕಾರಿ ಶಾಲೆಗಳು ಉಳಿಯುವ ಜೊತೆಗೆ ಬೆಳೆಯಬೇಕು ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ಬಳಗದ ಪ್ರಮುಖರಾದ ರಾಜು ಮೌರ್ಯ, ವಿರೂಪಾಕ್ಷಪ್ಪ ಪಂಡಿತ್, ಗೀತಾ ಮುರುಗೇಶ್, ಕೇಶವಮೂರ್ತಿ, ಗಂಗಾಧರ್, ಪುರಂದರ ಲೋಕಿಕೆರೆ, ಶಿವಕುಮಾರ್ ಡಿ. ಶೆಟ್ಟರ್, ಮೊಹಮ್ಮದ್ ಸಾಧಿಕ್, ಎಂ. ಪ್ರವೀಣ್ ಕುಮಾರ್, ಎಂ. ರಾಮಕೃಷ್ಣ, ಸುದೀಪ್, ರಾಜು ಕಣಗಣ್ಣನವರ್, ಶರತ್ ಕುಮಾರ್, ಶಿವಕುಮಾರ್ ಸಂಬಳಿ, ವಸಂತಕುಮಾರ್ ಮತ್ತಿತರರು ಪಾಲ್ಗೊಂಡಿದ್ದರು. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದಲೂ ಸ್ವಾಭಿಮಾನಿ ಬಳಗದ ಕಾರ್ಯವೈಖರಿ ಮೆಚ್ಚಿ ಆಗಮಿಸಿದ್ದು ವಿಶೇಷವಾಗಿತ್ತು.



# ಕಲೆಯನ್ನು ಮೈಗೂಡಿಸಿಕೊಂಡರೆ ಸಮೃದ್ಧಿ, ನೆಮ್ಮದಿ ಜೀವನ ಸಾಧ್ಯ

**ಹರಿಹರ ಶಾಸಕ ಬಿ.ಪಿ. ಹರೀಶ್**

ಹರಿಹರ, ಫೆ. 23 - ಸಂಗೀತ, ನೃತ್ಯ, ನಾಟಕ, ಕಲೆಯನ್ನು ಮೈಗೂಡಿಸಿ ಕೊಂಡರೆ ಬದುಕಿನಲ್ಲಿ ಸಮೃದ್ಧಿ ಮತ್ತು ನೆಮ್ಮದಿಯ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಶಾಸಕ ಬಿ.ಪಿ. ಹರೀಶ್ ಅಭಿಪ್ರಾಯಪಟ್ಟರು.

ನಗರದ ಗುರು ಭವನದಲ್ಲಿ ಯುವ ಗಾಯಕ ಅಣ್ಣಪ್ಪ ಅಜ್ಜೇರ ಅವರ ನೇತೃತ್ವದಲ್ಲಿ ಶ್ರೀ ಜನನಿ ಜನ್ಮದಾತ ಸಾಂಸ್ಕೃತಿಕ ಕಲಾ ಟ್ರಸ್ಟ್ ಇವರ ಆಶ್ರಯದಲ್ಲಿ ಕರ್ನಾಟಕ ರತ್ನ ಪುನೀತ್ ರಾಜಕುಮಾರ ಅವರ ಸವಿನೆನಪಿಗಾಗಿ ವಾಯ್ಸ್ ಆಫ್ ಪವರ್ ರಾಜ್ಯ ಮಟ್ಟದ ಕರೋಕೆ ಗಾಯನ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಂಡಿತ ಪುಟ್ಟರಾಜ ಗವಾಯಿಗಳು ಸೇರಿದಂತೆ ಅನೇಕ ಸಂಗೀತ ವಿದ್ವಾಂಸರು ತಮ್ಮ ಹಾಡುಗಳ ಮೂಲಕ ಸಮಾಜ ಸುಧಾರಣೆ ತರುವಂತಹ ಕೆಲಸವನ್ನು ಮಾಡಿ ಜನರ ಹೃದಯದಲ್ಲಿ ನೆಲೆಸಿದರು. ಅಷ್ಟೊಂದು ಮಹತ್ವ ಸಂಗೀತ, ನೃತ್ಯ, ನಾಟಕಗಳಿಗೆ ಇರುತ್ತದೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಅಣ್ಣಪ್ಪ ಅಜ್ಜೇರ್, ಬಿ.ಎಸ್.ಪಿ. ಜಿಲ್ಲಾಧ್ಯಕ್ಷ ಡಿ. ಹನುಮಂತಪ್ಪ, ಸಾರಥಿ ಗ್ರಾಮ ಪಂಚಾಯತಿ ಅಧ್ಯಕ್ಷ ಗೋಣಿ ಬಸಪ್ಪ, ಕವಿತಾ ಮಲ್ಲಿಕಾರ್ಜುನ್, ಪರಸಪ್ಪ ಅಜ್ಜೇರ, ಸುಕನ್ಯಾ ಸೇರಿದಂತೆ ತೀರ್ಪುಗಾರರು, ಗಾಯಕರು ಸೇರಿದಂತೆ ಇತರರಿದ್ದರು.

## ಓದುಗರ ಪತ್ರ

# ಎಸ್ಪಿ ಅವರಿಗೊಂದು ಕಳಕಳಿಯ ಮನವಿ



ಮಾನ್ಯರೇ,

ಐ.ಎಸ್.ಐ ಮಾರ್ಕ್ ಇಲ್ಲದ ಮತ್ತು ಅರ್ಧ ಪ್ಲಾಸ್ಟಿಕ್ ಹೆಲ್ಮೆಟ್ ಧರಿಸಿರುವ ದ್ವಿಚಕ್ರ ವಾಹನ ಸವಾರರಿಗೆ ದಂಡ ವಿಧಿಸುವುದಾಗಿ ಎಸ್.ಪಿ. ಉಮಾ ಪ್ರಶಾಂತ್ ಅವರು ಎಚ್ಚರಿಸಿದ್ದಾರೆ. ಸ್ವಾಗತಾರ್ಹ. ದ್ವಿಚಕ್ರ ವಾಹನ ಸವಾರರ ಸುರಕ್ಷತಾ ದೃಷ್ಟಿಯಿಂದ ಈ ಕ್ರಮವೇನೋ ಸರಿ. ಆದರೆ ಹಿಂದೆಂದೂ ಕಂಡರಿಯದಂತಹ ದಾಖಲೆಯ ರಣಬಿಸಿಲಿನ ಕಾವು ದಿನೇ ದಿನೇ ಏರುತ್ತಿದ್ದು, ಬಿಸಿಲಿನ ತಾಪಕ್ಕೆ ಇಡೀ ಕರುನಾಡೇ ಕಾದ ಕಾವಲಿಯಂತಾಗಿದೆ. ಈಗಲೇ ಜನರು ಬಿಸಿಲಿನ ಹೊಡೆತಕ್ಕೆ ಬೇಸತ್ತಿದ್ದು, ಜನರು ಆಗಸದತ್ತ ಮುಖ ಮಾಡಿ ಯಾವಾಗಪ್ಪ ಮಳೆಗಾಲ ಶುರುವಾಗುತ್ತದೆ ಎಂದು ಹಪ ಹಪಿಸುತ್ತಿದ್ದಾರೆ. ಬಿಸಿಲಿನ ತಾಪಕ್ಕೆ ಚರ್ಮ ಸಂಬಂಧಿ ಕಾಯಿಲೆಗಳು, ಉಸಿರಾಟದ ತೊಂದರೆ, ನಿತ್ರಾಣ ಸಮಸ್ಯೆ, ಗಂಭೀರವಾದ ಕಾಯಿಲೆಗಳು ಮತ್ತಷ್ಟು ಉಲ್ಬಣವಾಗುವ ಸಾಧ್ಯತೆ ಹೆಚ್ಚು, ಇಂತಹ ಬೇಸಿಗೆ ಸಮಯದಲ್ಲಿ ಪೂರ್ಣ ಹೆಲ್ಮೆಟ್ ಧರಿಸುವುದು ಎಲ್ಲರಿಗೂ ತುಸು ತ್ರಾಸದಾಯಕವೇ, ಜೊತೆಗೆ ಅತಿ ಹೆಚ್ಚಿನ ಉಷ್ಣತೆಯಿಂದ ತಲೆಯ ಕೂದಲುಗಳು ಉದುರಲು ಪ್ರಾರಂಭವಾಗುತ್ತವೆ. ಬೇಸಿಗೆ ಪ್ರಾರಂಭವಾಯಿತೆಂದರೆ ಬಹುತೇಕ ಮಂದಿಗೆ ಉಷ್ಣಾಂಶ ಹೆಚ್ಚಳದಿಂದ ಕೂದಲು ಉದುರುವ ಸಮಸ್ಯೆ ಪ್ರಾರಂಭವಾಗುತ್ತದೆ. ತಲೆಗೂದಲೇ ಮನುಷ್ಯನ ಅಂದವನ್ನು ಹೆಚ್ಚಿಸುವ ಒಂದು ಭಾಗ. ಅಂತದ್ದರಲ್ಲಿ ತಲೆಗೂದಲೇ ಇಲ್ಲದಿದ್ದರೆ ಹೇಗೆ? ಇನ್ನೂ ಅವಿವಾಹಿತರಾದರೆ ಕ್ರಮೇಣ ತಲೆಗೂದಲು ಉದುರು ತ್ತಿದ್ದರೆ ಸಂಪೂರ್ಣವಾಗಿ ಬೋಳು ತಲೆಯಾಗಿ, ಭವಿಷ್ಯದಲ್ಲಿ ಹೆಣ್ಣು ಸಿಗುವುದೇ ಕಷ್ಟವಾಗುತ್ತದೆ. ಈಗಿನ ಕಾಲದಲ್ಲಿ ಆಸ್ತಿ ಪಾಸ್ತಿ ಎಲ್ಲಾ ಇದ್ದು ಹೆಣ್ಣು ಕೊಡುವುದೇ ಕಷ್ಟ. ಇನ್ನು ತಲೆಗೂದಲಿಲ್ಲವೆಂದರೆ ಎಲ್ಲೂ ಹೆಣ್ಣು ಸಿಗದೇ ಜೀವನ ಪರ್ಯಂತ ಬ್ರಹ್ಮಚಾರಿಯಾಗ ಬೇಕಾಗುತ್ತದೆ. ಸರ್ಕಾರದ ನಿಯಮಗಳೇನೋ ಸರಿ. ಆದರೆ ಇಲ್ಲಿ ಮಾನವೀಯ ದೃಷ್ಟಿಯಿಂದ ಜನರ ಹಿತಾಸಕ್ತಿಯನ್ನು ನೋಡಬೇಕಾಗುತ್ತದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾದ ಉಮಾ ಪ್ರಶಾಂತ್ ಅವರು ವಿಶೇಷವಾಗಿ ಗಮನ ಹರಿಸಿ, ಬೇಸಿಗೆ ಕಾಲದ ಕನಿಷ್ಠ ಮೂರ್ನಾಲ್ಕು ತಿಂಗಳುಗಳ ಕಾಲ ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ನಿಂದ ವಿನಾಯಿತಿ ನೀಡಬೇಕಾಗಿ ತಮ್ಮಲ್ಲಿ ಕಳ ಕಳಿಯ ವಿನಂತಿ.

**- ಡಿ. ಮುರುಗೇಶ್,** ದಾವಣಗೆರೆ

# 2024ರಲ್ಲಿ ಯುಎಸ್‌ಏಡ್‌ನಿಂದ 7 ಯೋಜನೆಗಳು ಜಾರಿಗೆ

**ಇವುಗಳಲ್ಲಿ ಯಾವೂ ಮತದಾನಕ್ಕೆ ಸಂಬಂಧಿಸಿದ್ದಲ್ಲ - ಹಣಕಾಸು ಸಚಿವಾಲಯ**

ನವದೆಹಲಿ, ಫೆ. 23 – 2023 - 24ರ ಸಾಲಿನಲ್ಲಿ ಅಮೆರಿಕದ ಯುಎಸ್‌ಏಡ್ ಮೂಲಕ 750 ದಶಲಕ್ಷ ಡಾಲರ್ ಮೌಲ್ಯದ ಏಳು ಯೋಜನೆಗಳನ್ನು ಜಾರಿಗೆ ತರಲಾಗುತ್ತಿತ್ತು. ಆದರೆ ಇವುಗಳಲ್ಲಿ ಯಾವುದೂ ಮತದಾನಕ್ಕೆ ಸಂಬಂಧಿಸಿದ್ದಲ್ಲ ಎಂದು ಹಣಕಾಸು ಸಚಿವಾಲಯದ ವಾರ್ಷಿಕ ವರದಿ ತಿಳಿಸಿದೆ.

2023-24ರ ವಾರ್ಷಿಕ ವರದಿಯ ಪ್ರಕಾರ ಭಾರತ ಸರ್ಕಾರದ ಸಹಭಾಗಿತ್ವದಲ್ಲಿ ಯುಎಸ್‌ಏಡ್ 750 ದಶಲಕ್ಷ ಡಾಲರ್ ಮೌಲ್ಯದ ಯೋಜನೆಗಳನ್ನು ಜಾರಿಗೆ ತರುತ್ತಿದೆ. ಈ ಯೋಜನೆಗಳಿಗೆ 2023 - 24ರ ಸಾಲಿನಲ್ಲಿ 97 ದಶಲಕ್ಷ ಡಾಲರ್ ಬದ್ಧತೆ ವ್ಯಕ್ತಪಡಿಸಲಾಗಿತ್ತು ಎಂದು ವರದಿ ಹೇಳಿದೆ.

ಆರ್ಥಿಕ ವ್ಯವಹಾರಗಳ ಇಲಾಖೆಯು ದ್ವಿಪಕ್ಷೀಯ ಹಣಕಾಸು ಯೋಜನೆಗಳಿಗೆ ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಕಳೆದ ವರ್ಷ ಮತದಾನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಯಾವುದೇ ಯೋಜನೆಗೆ ಹಣ ಒದಗಿಸಿಲ್ಲ. ಆದರೆ, ಕೃಷಿ ಮತ್ತು ಆಹಾರ ಭದ್ರತೆ ಯೋಜನೆ, ನೀರು, ನೈರ್ಮಲ್ಯ, ನವೀಕರಣ ಇಂಧನ, ವಿಕೋಪ ನಿರ್ವಹಣೆ ಹಾಗೂ ಆರೋಗ್ಯಕ್ಕೆ ಸಂಬಂಧಪಟ್ಟ ಯೋಜನೆಗಳಿಗೆ ಹಣ ಒದಗಿಸಲಾಗಿದೆ. 1951 ರಿಂದ ಅಮೆರಿಕದ ಸಹಭಾಗಿತ್ವದಲ್ಲಿ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಈ ಯೋಜನೆ ಗಳನ್ನು ಪ್ರಮುಖವಾಗಿ ಯುಎಸ್‌ಏಡ್ ಮೂಲಕ ಜಾರಿಗೆ ತರಲಾಗುತ್ತಿದೆ. ಯೋಜನೆ ಜಾರಿಯಾದ ನಂತರ ಒಟ್ಟಾರೆ 555 ಯೋಜನೆಗಳಿಗೆ 17 ಶತಕೋಟಿ ಡಾಲರ್ ಒದಗಿಸಲಾಗಿದೆ.

ಭಾರತದಲ್ಲಿ ಮತದಾನ ಹೆಚ್ಚಿಸುವ ಉದ್ದೇಶಕ್ಕೆ ಯುಎಸ್‌ಏಡ್ ಮೂಲಕ 21 ದಶಲಕ್ಷ ಡಾಲರ್ ಅನುದಾನ ನೀಡಲಾಗಿತ್ತಾದರೂ ಇದನ್ನು ರದ್ದುಗೊಳಿಸಲಾಗಿದೆ ಎಂದು ಅಮೆರಿಕದ ದಕ್ಷತಾ ಇಲಾಖೆ ನಿರ್ವಹಿಸುತ್ತಿರುವ ಎಲಾನ್ ಮಸ್ಕ್ ತಿಳಿಸಿದ್ದರು. ಇದು ತೀವ್ರ ವಿವಾದಕ್ಕೆ ಕಾರಣವಾಗಿತ್ತು.

ಹಿಂದಿನ ಜೋ ಬಿಡೆನ್ ಸರ್ಕಾರದ ಅವಧಿಯಲ್ಲಿ ಯುಎಸ್‌ಏಡ್ ಮೂಲಕ ಭಾರತದ ಮತದಾನಕ್ಕೆ 21 ದಶಲಕ್ಷ ಡಾಲರ್ ಒದಗಿಸಲಾಗಿತ್ತು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಲವು ಬಾರಿ ಹೇಳಿದ್ದಾರೆ.

ಟ್ರಂಪ್ ಆಡಳಿತ ನೀಡಿರುವ ಮಾಹಿತಿ ಕಳವಳಕಾರಿಯಾಗಿದೆ. ಸರ್ಕಾರ ಈ ಬಗ್ಗೆ ಪರಿಶೀಲಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದರು.


# ಹೃತ್ಪೂರ್ವಕ ಅಭಿನಂದನೆಗಳು



ಶ್ರೀ ಎನ್. ರಂಗಸ್ವಾಮಿ, ವಕೀಲರು, ಅಧ್ಯಕ್ಷರು

**ಸವಿತಾ ಕ್ರೆಡಿಟ್ ಕೋ-ಆಪ್ ಸೊಸೈಟಿ ನಿಯಮಿತದ ಪದಾಧಿಕಾರಿಗಳ ಚುನಾವಣೆಯಲ್ಲಿ**



ಶ್ರೀ ಜಿ.ಸಿ. ಶ್ರೀನಿವಾಸ್, ಉಪಾಧ್ಯಕ್ಷರು

**ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸಂಘದ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.**



ಶ್ರೀ ಸಿ. ರಾಮಾಂಜನೇಯ, ನಿರ್ದೇಶಕರು



ಶ್ರೀ ಜೆ. ಮಂಜುನಾಥ್, ನಿರ್ದೇಶಕರು



ಶ್ರೀ ಎನ್. ಗೋವಿಂದರಾಜ್, ನಿರ್ದೇಶಕರು



ಶ್ರೀ ಜಿ.ಆರ್. ಪಾಂಡುರಂಗ ವಿಠ್ಠಲ, ನಿರ್ದೇಶಕರು



ಶ್ರೀ ಜಿ.ಟಿ. ಮಂಜುನಾಥ, ನಿರ್ದೇಶಕರು



ಶ್ರೀ ಎಂ. ಗಂಗಾಧರ, ನಿರ್ದೇಶಕರು



ಶ್ರೀಮತಿ ಸುವರ್ಣ, ನಿರ್ದೇಶಕರು



ಶ್ರೀಮತಿ ಸಂಜೀವಮ್ಮ, ನಿರ್ದೇಶಕರು

**ಶುಭಾಶಯ ಕೋರುವವರು**

✦ ಬಿ.ರೇವಣಪ್ಪ ✦ ಪರಶುರಾಮ್ ಆರ್. ✦ ಎನ್. ರಾಮಚಂದ್ರಪ್ಪ ✦ ಎನ್. ತಿಮ್ಮೇಶ್ ✦ ಬಿ. ಆನಂದ್ ✦ ಎ. ಕೃಷ್ಣ ✦ ರಾಧಾಸ್ವಾಮಿ ✦ ಬಿ.ವಿ.ಗಂಗಾಧರ್ ✦ ಬಿ.ವಿ. ರಮೇಶ್ ✦ ಬಿ.ವಿ. ಶ್ರೀನಿವಾಸ್ ✦ ಬಿ.ವಿ. ಬಸವರಾಜ್ ✦ ಆರ್. ದಿವಾಕರ್ ✦ ಆರ್. ಪವನಕುಮಾರ್ ✦ ಎ.ರಾಮಚಂದ್ರ ✦ ಎ. ಕೃಷ್ಣ ✦ ಜಿ.ರಾಘವೇಂದ್ರ ✦ ಬಸವರಾಜ್ ✦ ಜಿ. ಲಿಂಗೇಶ್ ✦ ಎಂ. ಗಾದಿಲಿಂಗೇಶ್ ✦ ಬಿ. ರಾಘವೇಂದ್ರ ✦ ಪಂಪಣ್ಣ ✦ ಎಲ್. ನಾರಾಯಣಪ್ಪ ✦ ಜಿ.ರಾಜು ✦ ಜಿ. ಗಣೇಶ್ ✦ ಬಿ. ಶೇಷಣ್ಣ ✦ ಆರ್. ಕೃಷ್ಣಚೈತನ್ಯ ✦ ಬಿ. ಗೋವಿಂದಪ್ಪ ✦ ಜಿ. ಶ್ರೀನಿವಾಸ್ ✦ ಎನ್. ಜಂಭುನಾಥ್ ✦ ಆರ್. ಯಶ್ವಂತ್‌ರಾಜ್ ✦ ಅಥರ್ವ ಕೆ. ತಾಳೂರ್ ✦ ರಿಷಿಕೇಶ್ ವೈ. ತಾಳೂರ್ ✦ ಆರ್. ನೇಹಶ್ರೀ ✦ ಕಿರಣ್ಮಯಿ ಕೆ. ಹಾಗೂ ತಾಳೂರು ವಂಶಸ್ಥರು.

# ಜಿಲ್ಲಾ ತೆರಿಗೆ ಪಾವತಿದಾರರ ಸಂಘ ಅಸ್ತಿತ್ವಕ್ಕೆ



ದಾವಣಗೆರೆ, ಫೆ. 23- ಸರ್ಕಾರವು ಕಾಲ ಕಾಲಕ್ಕೆ ವಿಧಿಸುವ ವಿವಿಧ ರೂಪದ ತೆರಿಗೆಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಉಂಟು ಮಾಡುವ ಸದುದ್ದೇಶದಿಂದ ದಾವಣಗೆರೆ ಜಿಲ್ಲಾ ತೆರಿಗೆ ಪಾವತಿದಾರರ ಸಂಘವನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದು ಸಂಘ ಗೌರವಾಧ್ಯಕ್ಷ ಎಸ್.ಟಿ. ಕುಸುಮ ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸರ್ಕಾರ ಕಾಲ ಕಾಲಕ್ಕೆ ವಿವಿಧ ರೀತಿಯ ತೆರಿಗೆ ವಿಧಿಸುವ, ತೆರಿಗೆ ಏರಿಕೆಯ ಬಿಸಿ ಜನಸಾಮಾನ್ಯರಿಂದ ಹಿಡಿದು ಎಲ್ಲಾ ವರ್ಗದವರ ಮೇಲೂ ಪ್ರಭಾವ ಬೀರುತ್ತದೆ. ತೆರಿಗೆ ಪಾವತಿದಾರರು ತಮ್ಮ ಹಕ್ಕುಗಳಂತೆ ಕರ್ತವ್ಯವೂ ಮುಖ್ಯ ಎಂಬುದನ್ನು ಸಾರ್ವಜನಿಕರಲ್ಲಿ ಅರಿವುಂಟು ಮಾಡುವುದು ಸಂಘದ ಉದ್ದೇಶವಾಗಿದೆ ಎಂದರು.

ನೀತಿ ನಿಯಮಗಳಿಲ್ಲದೇ, ವಿವಿಧ ವಲಯಗಳ ಸಲಹೆ ಪಡೆಯದೇ ತೆರಿಗೆ ಏರಿಕೆ ಕ್ರಮದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು, ಸರ್ಕಾರದ ಗಮನಕ್ಕೂ ತಂದು ಪರಿಹಾರಕ್ಕೆ ಪ್ರಯತ್ನಿಸುವುದು ನಮ್ಮ ತೆರಿಗೆ ನಮ್ಮ ಹಕ್ಕು. ಅದರು ಸದ್ಬಳಕೆಯ ವಿಚಾರವಾಗಿ ಜನ ಸಾಮಾನ್ಯರಿಗೂ ಅರಿವು ಉಂಟು ಮಾಡಿ, ಸರ್ಕಾರದ ಗಮನಕ್ಕೂ ತರುವುದು. ಈಗಾಗಲೇ ಅಸ್ಥಿತ್ವದಲ್ಲಿರುವ ಇದೇ ಉದ್ದೇಶ ಹೊಂದಿರುವ ರಾಜ್ಯ ಅಥವಾ ರಾಷ್ಟ್ರ ಸಂಸ್ಥೆಗಳೊಂದಿಗೆ ರಾಜ್ಯ ಅಥವಾ ರಾಷ್ಟ್ರ ಸಂಸ್ಥೆಗಳೊಂದಿಗೆ ಸಮಭಾಗಿಗಳಾಗುವುದು ಎಂದರು.

ತೆರಿಗೆ ಹೊರೆಯನ್ನು ಜನಪ್ರತಿನಿಧಿಗಳಿಗೆ ಹಾಗೂ ಸರ್ಕಾರದ ಗಮನಕ್ಕೆ ತರುವುದು ಮತ್ತು ಕಾನೂನು ಹೋರಾಟ ಮಾಡುವುದು. ಸರ್ಕಾರದ ಆಡಳಿತ ಯಂತ್ರವು ಸುಸೂತ್ರವಾಗಿ ಸಾಗಲು ಜನರ ಸಹಕಾರವೂ ಕೂಡ ಮಹತ್ವದ್ದು ಎಂಬ ಅಂಶವನ್ನು ಜನಸಾಮಾನ್ಯರಿಗೆ ಅರಿಯುವಂತೆ ಸಂಘವು ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಎಂ.ಸಿ. ವಿಜಯಕುಮಾರ್, ಹೆಚ್. ಮಹಬಲೇಶ್ವರ್, ಬಸಪ್ಪ, ಬಿ.ಪಿ. ಗಂಗಾಧರಪ್ಪ, ಡಿ.ವಿ. ಪ್ರಕಾಶ್, ಎಸ್.ಆರ್. ಮಂಜಪ್ಪ, ವಿನಾಯಕ ರಾನಡೆ, ಗುರುರಾಜ ಭಾಗವತ, ಸಂತೋಷ್ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಕದಳಿ ಕಮ್ಮಟದಲ್ಲಿ ದತ್ತಿ, ಕಾರ್ಯಕ್ರಮ, ವಚನ ದಾಸೋಹ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕದಳಿ ಮಹಿಳಾ ವೇದಿಕೆ ತಾಲ್ಲೂಕು ಘಟಕದಿಂದ 162ನೇ ಕದಳಿ ಕಮ್ಮಟದಲ್ಲಿ ದತ್ತಿ ಕಾರ್ಯಕ್ರಮ, ವಚನ ದಾಸೋಹ ಹಾಗೂ ಶರಣ ಕಿನ್ನರಿ ಬೊಮ್ಮಯ್ಯನವರ ಶರಣೋತ್ಸವವು ಇಂದು ಮಧ್ಯಾಹ್ನ 3ಕ್ಕೆ ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಮತಾ ನಾಗರಾಜ್ ವಹಿಸಲಿದ್ದು, ಪ್ರಾಂಶುಪಾಲರಾದ ಡಾ. ನೀತಾ ಎ.ಜೆ. ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ. ಮಂಜುನಾಥ್ ಆಲೂರು ಉಪಸ್ಥಿತರಿರುವರು. ಡಾ. ಮಹಾಂತೇಶ್ ಪಾಟೀಲ್ 'ವಚನಗಳು ಶಿಕ್ಷಣದ ಇನ್ನೊಂದು ಪರಿಭಾಷೆ' ವಿಷಯದ ಬಗ್ಗೆ ಮಾತನಾಡುವರು.

ಕದಳಿ ಮಹಿಳಾ ವೇದಿಕೆ ರಾಜ್ಯ ಉಪಸಂಚಾಲಕರಾದ ಪ್ರಮೀಳಾ ನಟರಾಜ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಯಶಾ ದಿನೇಶ್, ಗಾಯತ್ರಿ ವಸ್ತ್ರದ್ ಉಪಸ್ಥಿತರಿರುವರು.

# ಪೌರಕಾರ್ಮಿಕರ ಸೇವೆ ಅಮೂಲ್ಯ, ಅನನ್ಯ



## ಜಿ.ಎಸ್. ಮಂಜುನಾಥ್ ಗಡಿಗುಡಾಳ್ ಶ್ಲಾಘನೆ

ದಾವಣಗೆರೆ, ಫೆ. 23 - ಪ್ರತಿನಿತ್ಯ ಸ್ವಚ್ಛತೆ ಕಾರ್ಯ ಮಾಡುವ ಪೌರ ಕಾರ್ಮಿಕರ ಸೇವೆ ಅನನ್ಯ. ಬಣ್ಣಿಸಲು ಆಗದು. ಎಂದಿಗೂ ಮರೆಯಲಾಗದಂಥ ಸೇವೆ. ಅವರನ್ನು ಗುರುತಿಸಿ ಕೈಯಲಾದಷ್ಟು ಸಹಾಯ ಮಾಡುವುದು ಪುಣ್ಯದ ಕೆಲಸ ಎಂದು ಮಹಾನಗರ ಪಾಲಿಕೆಯ ವಿರೋಧ ಪಕ್ಷದ ಮಾಜಿ ನಾಯಕ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ಹೇಳಿದರು.

ನಗರದ ಎಂಸಿಸಿ ಬಿ ಬ್ಲಾಕ್‌ನಲ್ಲಿ ಪೌರ ಕಾರ್ಮಿಕರಿಗೆ ವಿಶೇಷ ಉಡುಗೊರೆ ನೀಡಿ ಸನ್ಮಾನಿಸಿ ಮಾತನಾಡಿದ ಅವರು, ನಗರದಲ್ಲಿ ಪೌರಕಾರ್ಮಿಕರು ಇಲ್ಲ ಎಂಬುದನ್ನು ಊಹಿಸಿಕೊಳ್ಳಲು ಆಗದು. ಎಂಥ ಪರಿಸ್ಥಿತಿ ಇರಲಿ ನಗರದ ಸ್ವಚ್ಛತೆಗೆ ಹೆಚ್ಚಿನ ಕಾಳಜಿ ವಹಿಸುವವರು. ಮಳೆ, ಗಾಳಿ, ಬಿಸಿಲು ಎನ್ನದೇ ಸ್ವಚ್ಛತೆ ಕಾರ್ಯ ಮಾಡಿ ನಗರವನ್ನು ಸುಂದರವಾಗಿ ಸುತ್ತಾರೆ ಎಂದು ಬಣ್ಣಿಸಿದರು.

ಪೌರಕಾರ್ಮಿಕರು ಏನೇ ಕಷ್ಟ ಇದ್ದರೂ, ಸಂಕಷ್ಟ ಎದುರಾದರೂ ತಮ್ಮ ಕರ್ತವ್ಯ ನಿರ್ವಹಿಸಿ ಎಲ್ಲಾ ವಾರ್ಡ್‌ಗಳನ್ನು ಸುಂದರವಾಗಿ ಕಾಣುವಂತೆ ಮಾಡುತ್ತಾರೆ. ಇಂಥವರಿಗೆ ಹೆಚ್ಚಿನ ನೆರವು ನೀಡಬೇಕಾದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ವಿಶೇಷ ಮುತುವರ್ಜಿ ವಹಿಸಿದ್ದಾರೆ. ಪೌರ ಕಾರ್ಮಿಕರಿಗೆ ಎಲ್ಲಾ ರೀತಿಯ ನೆರವು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ನಮಗೂ ಮಾರ್ಗದರ್ಶನ ನೀಡಿದ್ದಾರೆ. ಪೌರ ಕಾರ್ಮಿಕರಿಗೆ ವಸತಿ, ಚಿಕಿತ್ಸಾ ಸೌಲಭ್ಯ, ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ತಲುಪಿಸಲು ಸೂಚನೆ ನೀಡಿ ನೆರವಾಗಿದ್ದಾರೆ ಎಂದು ಮಂಜುನಾಥ್ ತಿಳಿಸಿದರು.

ಡಾ. ಕರಿಬಸಪ್ಪ ಮತ್ತು ನಿರ್ಮಲ ದಂಪತಿಯ ಪುತ್ರಿ ಡಾ. ಚೇತನಾ ಬಳ್ಳಾರಿ ಹಾಗೂ ಡಾ. ಷಡಾಕ್ಷರಿ ತಮ್ಮ 25ನೇ ವಿವಾಹ ವಾರ್ಷಿಕೋತ್ಸವ ಸಮಾರಂಭದ ಪ್ರಯುಕ್ತ ಪೌರ ಕಾರ್ಮಿಕರಿಗೆ ಕೊಡುಗೆ ನೀಡಿದರು. ಅದೇ ರೀತಿಯಲ್ಲಿ ಗಡಿಗುಡಾಳ್ ಮಂಜುನಾಥ್ ಅವರು ತಮ್ಮ ಕೈಯಲ್ಲಾದ ಸಹಾಯ ಮಾಡಿದರು.

ಈ ವೇಳೆ ಮಾತನಾಡಿದ ಪೌರ ಕಾರ್ಮಿಕರು, ನಾವು ಈ ವಾರ್ಡ್‌ನಲ್ಲಿ ಕೆಲಸ ಮಾಡುತ್ತಿರುವುದು ಪುಣ್ಯ ಎನಿಸಿದೆ. ಪಾಲಿಕೆ ಸದಸ್ಯರಾಗಿದ್ದ ಐದು ವರ್ಷಗಳ ಅವಧಿಯಲ್ಲಿಯೂ ತಮ್ಮ ಕೈಯಲಾದಷ್ಟು ಸಹಾಯ ಮಾಡುವ ಮಾದರಿ ಕಾರ್ಪೋರೇಟರ್ ಆಗಿದ್ದರು ಎಂದು ಹೇಳಿದರು.

ಪೌರಕಾರ್ಮಿಕರು ಮಂಜುನಾಥ್ ಗಡಿಗುಡಾಳ್ ಅವರನ್ನು ಸನ್ಮಾನಿಸಿ ಕೃತಜ್ಞತೆ ಸಲ್ಲಿಸಿದರು.

# ದೇಶಕ್ಕೆ ಆರ್‌ಸೆಸ್‌ಗಿಂತಲೂ ಕಾಂಗ್ರೆಸ್ ಸೇವಾದಳ ಅವಶ್ಯಕ

## ಕಾಂಗ್ರೆಸ್ ಸೇವಾದಳದ ಧ್ವಜ ವಂದನಾ ಕಾರ್ಯಕ್ರಮದಲ್ಲಿ ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ



ದಾವಣಗೆರೆ, ಫೆ. 23 - ಜಾತ್ಯತೀತ ಭಾರತ ದೇಶಕ್ಕೆ ಜಾತಿ-ಧರ್ಮದ ಮಧ್ಯ ವೈರುದ್ಯ ಬೆಳೆಸುವ ಆರ್.ಎಸ್.ಎಸ್. ನಂತಹ ಸಂಘಟನೆಗಳಿಗಿಂತ ಪ್ರತಿಯೊಂದು ಜಾತಿ-ಧರ್ಮದವರನ್ನು ಸಮನಾಗಿ ಕಾಣುವ ಕಾಂಗ್ರೆಸ್ ಪಕ್ಷದ ಸೇವಾದಳದಂತಹ ಸಂಘಟನೆಗಳ ಅವಶ್ಯಕತೆ ಇದೆ ಎಂದು ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಹೇಳಿದರು.

ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಸೇವಾದಳದ ವತಿಯಿಂದ ಇಂದು ಏರ್ಪಾಡಾಗಿದ್ದ ಧ್ವಜ ವಂದನಾ ಕಾರ್ಯಕ್ರಮದಲ್ಲಿ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಭಾರತ ದೇಶ ಸ್ವಾತಂತ್ರ್ಯ ಪೂರ್ವ ಮತ್ತು ನಂತರ ಎಲ್ಲಾ ಜಾತಿ ಧರ್ಮಗಳನ್ನೊಳಗೊಂಡ ದೇಶವಾಗಿದ್ದು, ಪ್ರತಿಯೊಬ್ಬರು ಸಾಮರಸ್ಯದ ಜೀವನ ಸಾಗಿಸುತ್ತಿದ್ದಾರೆ. ಅಂತಹ ದೇಶದಲ್ಲಿ ಹುಟ್ಟಿದ ಆರ್.ಎಸ್.ಎಸ್. ಎಂಬ ಸಂಘಟನೆ ಹಿಂದೂ ಧರ್ಮವನ್ನು ರಕ್ಷಣೆ ಎಂದು ಅನ್ಯ ಧರ್ಮ ಹಾಗೂ ಹಿಂದೂ ಧರ್ಮದ ಜಾತಿ ಜಾತಿಗಳ ನಡುವೆ ವೈರುದ್ದ ತರುತ್ತಿದೆ ಎಂದರು.

ಇಂತಹ ಸಂಘಟನೆಗಳ ಬಗ್ಗೆ ಇಂದಿನ ಯುವಜನರು ಎಚ್ಚರಿಕೆಯಿಂದ ಇರುವಂತೆ ಮನವಿ ಮಾಡಿದ ಅವರು, ಪ್ರತಿಯೊಂದು ಜಾತಿ, ಧರ್ಮವನ್ನು ಸಾಮರಸ್ಯದಿಂದ ಕಾಣುವ ಕಾಂಗ್ರೆಸ್ ಪಕ್ಷದ ಸೇವಾದಳವನ್ನು ಸೇರುವಂತೆ ಯುವಕರಲ್ಲಿ ಮನವಿ ಮಾಡಿದರು.

ಜಿಲ್ಲಾ ಕಾಂಗ್ರೆಸ್ ಸೇವಾದಳದ ಅಧ್ಯಕ್ಷ ಡಿ. ಶಿವಕುಮಾರ್ ಮಾತನಾಡಿ, ಇಂದು ಎಐಸಿಸಿ ಕಾಂಗ್ರೆಸ್ ಸೇವಾದಳದ ರಾಷ್ಟ್ರ ಅಧ್ಯಕ್ಷ ಲಾಲ್ ಜಿ ದೇಸಾಯಿರವರ ಆದೇಶದ ಮೇರೆಗೆ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸೇವಾದಳದ ರಾಜ್ಯ ಅಧ್ಯಕ್ಷ ಎಂ. ರಾಮಚಂದ್ರಪ್ಪ ರವರ ಸೂಚನೆ ಮೇರೆಗೆ ಇಂದು ಧ್ವಜ ವಂದನಾ ಕಾರ್ಯಕ್ರಮವನ್ನು ಏರ್ಪಡಿಸಿದ್ದೇವೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷ ಉಮಾ ತೋಟಪ್ಪ, ರಾಜ್ಯ ಕಾರ್ಯದರ್ಶಿ ಪ್ರವೀಣ್, ದಾವಣಗೆರೆ ಉತ್ತರ ವಲಯ ಅಧ್ಯಕ್ಷ ಆವರಗೆರೆ ಚಂದ್ರಪ್ಪ, ಹರಿಹರ ಬ್ಲಾಕ್ ಅಧ್ಯಕ್ಷ ಪ್ರಕಾಶ್, ಬೇತೂರು ನಾಗೇಂದ್ರಪ್ಪ, ಬಿ.ಜಿ. ಅಶೋಕ್, ಹನುಮಮ್ಮ ನಾಗರತ್ನ, ಕೃಷ್ಣಮ್ಮ, ಮಮ್ತಾಜ್, ರತ್ನಮ್ಮ, ರೇಣುಕಮ್ಮ, ಅಕ್ಕಮ್ಮ, ನಾಗರತ್ನಮ್ಮ ಉಪಸ್ಥಿತರಿದ್ದರು.



# ಮಹಾಕುಂಭ ಮೇಳದಲ್ಲಿ ಸಚಿವ ಎಸ್ಸೆಸ್ಸೆಂ, ಸಂಸದೆ ಡಾ. ಪ್ರಭಾ

ದಾವಣಗೆರೆ, ಫೆ. 23 - ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ದಂಪತಿ ತಂಡ ಶನಿವಾರ ಪ್ರಯಾಗ್ ರಾಜ್‌ನ ಮಹಾಕುಂಭ ಮೇಳದಲ್ಲಿ ಭಾಗವಹಿಸಿ, ಪುಣ್ಯ ಸ್ನಾನ ಮಾಡಿತು. ಸಚಿವರ ಜೊತೆ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದ ಗೌರವಾಧ್ಯಕ್ಷ ಎಸ್. ಜಿ. ಉಳವಯ್ಯ, ಮುದೇಗೌಡ್ರ ಗಿರೀಶ್, ಇಂದೂಧರ್, ಸಂಪನ್ನ ಮುತಾಲಿಕ್, ಬೂದಾಳ್ ಬಾಬು, ಸಚಿವರ ಪುತ್ರ ಸಮರ್ಥ, ಪುತ್ರಿ ಡಾ. ಶ್ರೇಷ್ಠಾ ಮತ್ತಿತರರು ಇದ್ದರು.

# ಸ್ವಕುಳಸಾಳಿ ಸಮಾಜದ ಜಿಹ್ವೇಶ್ವರ ಮಹಿಳಾ ಮಂಡಳಿ ಪದಾಧಿಕಾರಿಗಳ ಪದಗ್ರಹಣ



**ರಾಣೇಬೆನ್ನೂರು**

ರಾಣೇಬೆನ್ನೂರು, ಫೆ. 23 - ನಗರದ ಸ್ವಕುಳ ಸಾಳಿ ಸಮಾಜದ ಜಿಹ್ವೇಶ್ವರ ಮಹಿಳಾ ಮಂಡಳಿಯ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ಸಂಕ್ರಾಂತಿ ಸಂಭ್ರಮದ ಎಳ್ಳು-ಬೆಲ್ಲ ವಿತರಣೆ ಕಾರ್ಯಕ್ರಮ ಇಲ್ಲಿನ ತುಳಜಾ ಭವಾನಿ ದೇವಸ್ಥಾನದಲ್ಲಿ ನಡೆಯಿತು.

ಅವಿರೋಧವಾಗಿ ಆಯ್ಕೆಯಾಗಿರುವ ಜಿಹ್ವೇಶ್ವರ ಮಹಿಳಾ ಮಂಡಳದ ನೂತನ ಅಧ್ಯಕ್ಷರಾದ ರಾಜೇಶ್ವರಿ ಏಕಬೋಟೆ, ಉಪಾಧ್ಯಕ್ಷೆ ಚಂದ್ರಮ್ಮ ರೋಖಡೆ, ಕಾರ್ಯದರ್ಶಿ ಯಶೋಧ ಏಡಕೆ, ಸಹಕಾರ್ಯದರ್ಶಿ ಅರುಣಾ ಸೂರೆ, ಖಜಾಂಚಿ ಶಾಂತಲಕ್ಷ್ಮಿ ರೋಖಡೆ ಹಾಗೂ ಸದಸ್ಯರಾಗಿ ಜಯಶ್ರೀ ಕ್ಷೀರಸಾಗರ, ಸುಷ್ಮಾ ರೋಖಡೆ, ಸುಜಾತ ಏಕಬೋಟೆ, ವೈಶಾಲಿ ಪಾಣಿಭಾತೆ, ವಿದ್ಯಾ ತಾಂಬೆ, ಲಲಿತಾ ಪಾಣಿಭಾತೆ, ನೇತ್ರಾವತಿ ಕ್ಷೀರಸಾಗರ, ಶೋಭಾ ಏಕಬೋಟೆ, ಸವಿತಾ ಏಕಬೋಟೆ ಅಧಿಕಾರ ಸ್ವೀಕರಿಸಿದರು.

ನಗರ ದೇವತೆಯರಾದ ಶ್ರೀ ಚೌಡೇಶ್ವರಿ ದೇವಿಯರ ಜಾತ್ರೆಯಿಂದಾಗಿ ಸಾಮೂಹಿಕವಾಗಿ ಆಚರಿಸುವ ಸಂಕ್ರಾಂತಿ ಎಳ್ಳು-ಬೆಲ್ಲ ವಿತರಣೆ ಕಾರ್ಯಕ್ರಮವನ್ನು ತಾಯಿ ತುಳಜಾಭವಾನಿ ದೇವಿಗೆ ವಿಶೇಷ ಅಲಂಕಾರ, ಪೂಜೆ, ಭಜನೆಯೊಂದಿಗೆ ಇಂದು ಆಚರಿಸಿ ಎಳ್ಳು-ಬೆಲ್ಲ ವಿನಿಮಯ ಮಾಡಲಾಯಿತು.

# ದೇಶದಲ್ಲಿ ಮೌಢ್ಯ ಮುಕ್ತಿಯಾಗಿಲ್ಲ

ದಾವಣಗೆರೆ, ಫೆ. 23 - ದೇಶವು ಮೌಢ್ಯತನದಿಂದ ಇಂದಿಗೂ ಮುಕ್ತವಾಗಿಲ್ಲ ಎಂದು ವೈಜ್ಞಾನಿಕ ಚಿಂತಕ ನರೇಂದ್ರ ನಾಯಕ್ ಬೇಸರ ವ್ಯಕ್ತಪಡಿಸಿದರು.

ಬ್ರೇಕ್ ಥ್ರೂ ಸೈನ್ಸ್ ಸೊಸೈಟಿ ಹಾಗೂ ಎಐಡಿವೈಓ ಯುವಜನ ಸಂಘಟನೆ ವತಿಯಿಂದ ನಗರದ ಡಿಆರ್‌ಆರ್ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಈಚೆಗೆ ನಡೆದ ಪವಾಡ ರಹಸ್ಯ ಬಯಲು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಲವು ಪ್ರಯೋಗವನ್ನು ಹಾಗೂ ನೈಜ ಘಟನೆಗಳನ್ನು ವಿವರಿಸಿದ ಅವರು, ಪ್ರತಿಯೊಬ್ಬರು ವೈಜ್ಞಾನಿಕ ಮನೋಭಾವ ಹಾಗೂ ಚಿಂತನೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿ, ವಿಜ್ಞಾನದ ಅಳವಡಿಕೆಯಿಂದ ಹಲವು ದೇಶಗಳಲ್ಲಿ ಆಗುತ್ತಿರುವ ಪ್ರಗತಿಯ ಬಗ್ಗೆ ವಿವರಿಸಿದರು.

ಸೊಸೈಟಿಯ ಡಾ. ವಸುಧೇಂದ್ರ ಮಾತನಾಡಿ, ಇಂತಹ ಕಾರ್ಯಕ್ರಮಗಳು ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ನಡೆದರೆ, ಅಲ್ಲಿನ ತಪ್ಪು ಪದ್ಧತಿಗಳು ಹಾಗೂ ಮೌಢ್ಯದ ಆಚರಣೆ ದೂರವಾಗಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಈ ವೇಳೆ ಪರಶುರಾಮ್, ಮಂಜುನಾಥ್, ಸಂಘಟನೆ ಸದಸ್ಯರಾದ ಗುರು, ಅನಿಲ್, ಕಾಲೇಜಿನ ಸಿಬ್ಬಂದಿ ಹಾಗೂ ಇತರರು ಇದ್ದರು.




# ಸ್ವಂತ ಹಣದಲ್ಲಿ ದೇವರಬೆಳಕೆರೆ ಪಿಕಪ್ ಡ್ಯಾಂ ನಾಲೆ ಹೂಳು ಎತ್ತಿಸಿದ ಚಂದ್ರಶೇಖರ್ ಪೂಜಾರ್



ಮಲೇಬೆನ್ನೂರು, ಫೆ.23- ದೇವರಬೆಳಕೆರೆ ಪಿಕಪ್ ಡ್ಯಾಂನ ಹೆಚ್. ಸಿದ್ದವೀರಪ್ಪ ನಾಲೆಯಲ್ಲಿ ತುಂಬಿಕೊಂಡಿದ್ದ ಹೂಳನ್ನು ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಅವರು ತಮ್ಮ ಸ್ವಂತ ಹಣದಲ್ಲಿ ಇಟಾಚಿಯಿಂದ ಸ್ವಚ್ಛಗೊಳಿಸುವ ಮೂಲಕ ರೈತರಿಗೆ ನೆರವಾಗಿದ್ದಾರೆ.

ನಾಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹೂಳು ತುಂಬಿಕೊಂಡಿದ್ದರಿಂದ ನೀರು ಮುಂದಕ್ಕೆ ಹೋಗುತ್ತಿರಲಿಲ್ಲ. ಇದರಿಂದಾಗಿ ದೇವರ ಬೆಳಕೆರೆ, ಕಡ್ಲೆಗೊಂದಿ, ಕೆ.ಬೇವಿನಹಳ್ಳಿ, ಬನ್ನಿಕೋಡು, ಷಂಷೀಪುರ, ಬೆಳ್ಳೂಡಿ, ಹನಗವಾಡಿ, ಗುತ್ತೂರು, ಕೋಡಿಹಳ್ಳಿ ಗ್ರಾಮಗಳ ಜಮೀನುಗಳಿಗೆ ನೀರು ತಲುಪದಂತಾಗಿತ್ತು. ನಾಲೆಯಲ್ಲಿ ಹುಳು ಎತ್ತುವ ಬಗ್ಗೆ ರೈತರು ನೀರಾವರಿ ಇಲಾಖೆಗೆ ಸಾಕಷ್ಟು ಮನವಿ ಮಾಡಿದ್ದರೂ ಯಾವುದೇ ಸ್ಪಂದನೆ ಸಿಕ್ಕರಲಿಲ್ಲ.

ಈ ವಿಷಯ ತಿಳಿದ ಚಂದ್ರಶೇಖರ್ ಪೂಜಾರ್ ಅವರು, ಹೆಚ್.ಸಿದ್ದವೀರಪ್ಪ ನಾಲೆ ಪಾತ್ರದ ಹಳ್ಳಿಗಳ ರೈತರ ಸಮ್ಮುಖದಲ್ಲಿ ಇಟಾಚಿಯಿಂದ ನಾಲೆಯಲ್ಲಿ ತುಂಬಿಕೊಂಡಿದ್ದ ಹೂಳು ಎತ್ತಿಸಿ, ನೀರು ಸರಾಗವಾಗಿ ಮುಂದೆ ಸಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಭಾನುವಾರ ಹೆಚ್.ಸಿದ್ದವೀರಪ್ಪ ನಾಲೆ ಬಳಿ ಬೆಳ್ಳೂಡಿ, ಹನಗವಾಡಿ, ಷಂಷೀಪುರ, ಬನ್ನಿಕೋಡು, ಕೆ.ಬೇವಿನಹಳ್ಳಿ, ಕಡ್ಲೆಗೊಂದಿ, ದೇವರಬೆಳಕೆರೆ ಗ್ರಾಮಗಳ ರೈತರು ಚಂದ್ರಶೇಖರ್ ಪೂಜಾರ್ ಅವರನ್ನು ಸನ್ಮಾನಿಸಿ, ಗೌರವಿಸಿದ್ದಾರೆ.

ಕಳೆದ ವರ್ಷವೂ ಚಂದ್ರಶೇಖರ್ ಅವರು, ನಂದಿತಾವರೆ ಬಳಿ ಇರುವ ದೇವರಬೆಳಕೆರೆ ಪಿಕಪ್ ಡ್ಯಾಂ ನಾಲೆಯಲ್ಲಿ ತುಂಬಿಕೊಂಡಿದ್ದ ಹೂಳು ಸ್ವಚ್ಛಗೊಳಿಸಿ, ರೈತರಿಗೆ ನೆರವಾಗಿದ್ದನ್ನು ಈ ವೇಳೆ ಸ್ಮರಿಸಬಹುದು.

# ಹೊನ್ನಾಳಿ : ಇಂದು ಮಹಾ ರಥೋತ್ಸವ

ಹೊನ್ನಾಳಿ ತಾಲ್ಲೂಕು ಮಲೇಕುಂಬಳೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ಮಹಾ ರಥೋತ್ಸವ ಇಂದು ಬೆಳಿಗ್ಗೆ 5.30ಕ್ಕೆ ನಡೆಯಲಿದೆ. ನಂತರ ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಿ ನಂತರ ಅನ್ನ ಸಂತರ್ಪಣೆ ನಡೆಯಲಿದೆ.

ಸಂಜೆ 4 ರಿಂದ ಮುಳ್ಳೋತ್ಸವ, ಕಾರಣಿಕ ನಡೆಯುವುದು.

ಬೇಕಾಗಿದ್ದಾರೆ
ಎರಡು ತಿಂಗಳುಗಳವರೆಗೆ
ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್
ಬೇಕಾಗಿದ್ದಾರೆ.
ಅಂಬರಕರ್ ಪಂಪಣ್ಣ
ಬಟ್ಟೆ ವ್ಯಾಪಾರಿಗಳು, ಕಾಳಿಕಾದೇವಿ ರಸ್ತೆ, ದಾವಣಗೆರೆ.
ಮೊ. : 9916231611, 9008573055

# ಪೊಲೀಸ್ ಇಲಾಖೆಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯ



## ಎಸ್ಪಿ ಉಮಾ ಪ್ರಶಾಂತ್

ದಾವಣಗೆರೆ, ಫೆ. 23 - ಲಕ್ಷಾಂತರ ಹಣ ಖರ್ಚು ಮಾಡಿ ಈ ಬಡಾವಣೆ ಯಲ್ಲಿ ಮನೆಗಳನ್ನು ಕಟ್ಟಿಸಿದ್ದೀರಿ. ಆದರೆ ತಮ್ಮ ಮನೆಗಳ ರಕ್ಷಣೆಗೆ ಮಹತ್ವ ಕೊಡುತ್ತಿಲ್ಲ. ಇದರಿಂದ ಕಳ್ಳಕಾಕರಿಗೆ ಅನುಕೂಲವಾಗುತ್ತಿದೆ. ಸ್ನೇಹಮಯಿ ಪೊಲೀಸ್ ಇಲಾಖೆಯ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ. ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರ ಸಹಕಾರ ಬಹಳ ಮುಖ್ಯ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಹೇಳಿದರು.

ನಗರದ ಎಸ್.ಎಸ್. ಬಡಾವಣೆಯ ಎ ಬ್ಲಾಕ್‌ನಲ್ಲಿ ಎಸ್.ಎಸ್.ಬಡಾವಣೆ ಸ್ನೇಹಿತರ ಬಳಗದ ಸಂಘವನ್ನು ಉದ್ಘಾಟಿಸಿ ಅವರು, ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಕಳ್ಳತನ ಪ್ರಕರಣಗಳು ಹೆಚ್ಚಾಗುತ್ತಿದ್ದು ಆದ್ದರಿಂದ ತಮ್ಮ ಮನೆಗಳಿಗೆ ಸಿಸಿ ಟಿವಿಗಳನ್ನು ಅಳವಡಿಸಿಕೊಂಡಲ್ಲಿ ನಮ್ಮ ಇಲಾಖೆಗೆ ಸಹಕಾರಿಯಾಗುತ್ತದೆ. ನಮ್ಮ ಬಗ್ಗೆ ನಾವೂ ಸಹಾ ಎಚ್ಚರ ವಹಿಸುವುದು ಅವಶ್ಯಕವಾಗಿರುತ್ತದೆ ಎಂದರು.

ತಹಶೀಲ್ದಾರ್ ಡಾ.ಎಂ.ಬಿ.ಅಶ್ವತ್ ಮಾತನಾಡಿ, ದಾವಣಗೆರೆಯ ವಿವಿಧ ಬಡಾವಣೆ ಸೇರಿದಂತೆ ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹೆಚ್ಚಿನ ಕಳ್ಳತನ, ಸುಲಿಗೆ ಹೆಚ್ಚಾಗಿದ್ದು, ಪೊಲೀಸ್ ಇಲಾಖೆಯ ಸೂಚನೆಗಳನ್ನು ಪ್ರತಿಯೊಬ್ಬರೂ ಸಹಾ ಪಾಲಿಸಲು ಕರೆ ನೀಡಿದರು.

ಸಂಘದ ಅಧ್ಯಕ್ಷ ಎಂ.ಆಂಜನೇಯುಲು ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಎಂ.ಎಸ್.ದೇವರಾಜ ಪ್ರಾಸ್ತಾವಿಕವಾಗಿ ಮಾತನಾಡಿ, ಸಂಘವು ನಾಗರಿಕರಿಗೆ ಸ್ವಚ್ಛತೆ, ಪರಿಸರ ರಕ್ಷಣೆ, ಮಹಿಳಾ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮ ಸೇರಿದಂತೆ ಹಲವಾರು ಸಮಾಜಮುಖಿ ಕಾರ್ಯಗಳನ್ನು ಸ್ಥಳೀಯರ ಸಹಕಾರದಿಂದ ನಡೆಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಾಧಕರಾದ ಪರಿಸರ ಪ್ರೇಮಿ ಪ್ರಸೂತಿ, ಸ್ತ್ರೀರೋಗ ತಜ್ಞರಾದ ಡಾ. ಶಾಂತಾಭಟ್, ಜಿಲ್ಲಾ ಕ್ಯಾನ್ಸರ್ ಅಭಿಯಾನದ ರಾಯಭಾರಿ ಆರ್.ಟಿ.ಅರುಣಕುಮಾರ್ ಅವರನ್ನು ಸನ್ಮಾನಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಘದ ಶಿವನಳ್ಳಿ ರಮೇಶ್, ಸಂಘಟನಾ ಕಾರ್ಯದರ್ಶಿ ಟಿ.ನಾಗ ರಾಜ ಸೇರಿದಂತೆ ಇತರರು ಭಾಗವಹಿಸಿದ್ದರು. ನಂತರದಲ್ಲಿ ಹಾಸ್ಯ ಭಾಷಣಕಾರ ಗಂಗಾವತಿ ಪ್ರಾಣೇಶ್, ನರಸಿಂಹ ಜೋಶಿ, ಬಸವರಾಜ್ ಮಾಮನಿ ಹಾಸ್ಯ ಸಂಜೆ ಕಾರ್ಯಕ್ರಮ ನಡೆಸಿಕೊಟ್ಟರು.




KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas